ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಸುಭಾಷ್‌ಜೋಶಿಯವರನ್ನು ಈ ಅಧಿವೇಶನ ಮುಗಿಯುವವರೆಗೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ಪ್ರಸ್ತಾವನೆಯನ್ನು ಸದನದ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು.

(ಪೋಲೀಸರು ಶ್ರೀ ಸುಭಾಷ್‌ಜೋಷಿಯವರನ್ನು ಎತ್ತಿ ಸದನದಿಂದ ಹೊರಹಾಕಿದರು)

ಅಧ್ಯಕ್ಷರು.—ಈಗ ವಿತ್ತೀಯ ಕಾರ್ಯಕಲಾಪಗಳು. ೧೯೯೩-೯೪ರ ಆಯವ್ಯಯ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

† ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು).—ಮಾನ್ಯ ಸಭಾಧ್ಯಕ್ಷರೇ, ನನಗೆ ಕುರಿತು ಉತ್ತರ ಕೊಡಲಿಕ್ಕೆ ದಯಮಾಡಿ ಅನುಮತಿ ಕೊಡಬೇಕೆಂದು ಪ್ರಾರ್ಥನೆ. ಅಧ್ಯಕ್ಷರೆ, ೧೯೯೩-೯೪ರ ಆಯವ್ಯಯವನ್ನು ಮಂಡಿಸಿದ ಮೇಲೆ ಈ ಸದನದಲ್ಲಿ ಸಾಕಷ್ಟು ಚರ್ಚೆ ಆಗಬೇಕಾಗಿತ್ತು. ಸುಮಾರು ೮ ಮಂದಿ ಸನ್ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಆಯವ್ಯಯವನ್ನು ಮಂಡನೆ ಮಾಡಿದ ಮೇಲೆ ಸದನದ ಹೊರಗಡೆ ಕೂಡ ಸಾಕಷ್ಟು ಪ್ರತಿಕ್ರಿಯೆಗಳು ಬಂದಿವೆ. ಈ ಟೀಕೆಗಳಲ್ಲಿ ಇದು ಚುನಾವಣೆಗೆ ಅನುಗುಣವಾಗಿ ಮಾಡಿದಂತಹ ಆಯವ್ಯಯ ಎಂಬುದು ಮತ್ತು ಸ್ವಾಗತವನ್ನು ಮಾಡಿದ ವಿಚಾರಗಳೂ ಬಂದಿವೆ. ನಾನು ಅನೇಕ ಬಾರಿ ಸದನದಲ್ಲಿ ಮತ್ತು ಹೊರಗಡೆ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರುವ ಮೊದಲು ತನ್ನದೇ ಆದ ಚುನಾವಣಾ ಪ್ರಣಾಳಿಕೆಯನ್ನು ಮುಂದೆ ಇಡುತ್ತದೆ. ೧೯೮೯ ರಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರುವ ಮೊದಲು ಒಂದು ಚುನಾವಣಾ ಪ್ರಣಾಳಿಕೆ ಇಟ್ಟೆವು. ಅದು ಇವತ್ತು ಜನತೆಯ ಮುಂದಿದೆ. ಮುಂದೆ ಬರುವ ಚುನಾವಣೆಗಳಲ್ಲಿ ನಮ್ಮ ಸಾಧನೆ ಸ್ಥಿತಿಗತಿಗಳನ್ನು, ಪ್ರಣಾಳಿಕೆಯಲ್ಲಿ ತೋರಿಸಿದ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ನಾವು ಅನುಷ್ಠಾನ ಮಾಡಿದ್ದೇವೆಂಬುದನ್ನು ಅನುಸರಿಸಿ ಜನತೆ ಮುಂದೆ ನಮಗೆ ಬೆಂಬಲ ಕೊಡಬಹುದು. ನಾವು ಅನುಷ್ಠಾನ ಮಾಡುವುದಕ್ಕೆ ಅಸಮರ್ಥರಾಗಿದ್ದರೆ ಮುಂದೆ ಬೆಂಬಲ ನೀಡದೇ ಇರಬಹುದು. ಆದ್ದರಿಂದ ೧೯೮೯ರಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಿದೆ. ಇದು ಜನತೆಯ ಸರ್ಕಾರ. ಆಡಳಿತಕ್ಕೆ ಬಂದ ಮೇಲೆ ಯಾವ ವರ್ಷ ಏನು ಮಾಡಿದ್ದೇವೆ ಎಂಬುದು ಮುಖ್ಯವಲ್ಲ, ಒಟ್ಟು ಐದು ವರ್ಷಗಳಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ ಎನ್ನುವುದು ಮುಖ್ಯ. ನಾನು ಮುಖ್ಯ ಮಂತ್ರಿಯಾಗಿ ಏನು ಮಾಡಿದ್ದೇನೆ ಅದು ಮುಖ್ಯವಲ್ಲ ಅಥವಾ ಇನ್ನೊಬ್ಬರು ಸಾಧನೆ ಮಾಡಿಲ್ಲ ಎನ್ನುವುದು ಮುಖ್ಯವಲ್ಲ. ನಮ್ಮ ಕಾಂಗ್ರೆಸ್ ಸರ್ಕಾರದ ಒಟ್ಟು ಸಾಧನೆಯ ರೂಪುರೇಷೆಯನ್ನು ಜನತೆಯ ಮುಂದಿಟ್ಟರೆ ಇದರ ಪಾಲು ನಮ್ಮೆಲ್ಲ ಶಾಸಕರಿಗೂ ಪಕ್ಷಾತೀತವಾಗಿ ಎಲ್ಲಾ ಸದಸ್ಯರಿಗೂ ಸೇರುತ್ತದೆ. ಮುಖ್ಯವಾಗಿ ಚುನಾವಣಾ ಪ್ರಣಾಳಿಕೆಯನ್ನು ಕೊಟ್ಟಂತಹ ಕಾಂಗ್ರೆಸ್ ಶಾಸಕಾಂಗಕ್ಕೆ ಈ ಜವಾಬ್ದಾರಿ ಸ್ವಲ್ಪ ಹೆಚ್ಚಿದೆ, ನಾವು ಒಂದು ವರ್ಷ ಹೆಚ್ಚು ಸಾಧನೆ ಮಾಡಬಹುದು. ಒಂದು ವರ್ಷ ಸಾಧನೆ ಕಡಿಮೆ ಮಾಡಬಹುದು. ಆದರೆ ಒಟ್ಟು ನಮ್ಮ ಸಾಧನೆಯ ಸ್ಪಷ್ಟ ಸ್ವರೂಪವನ್ನು ಚುನಾವಣೆಯನ್ನು ಎದುರಿಸುವಾಗ ನಾವು ಜನತೆಯ ಮುಂದೆ ಇಡಬೇಕಾಗುತ್ತದೆ. ನಮ್ಮ ಅಕೌಂಟಬಿಲಿಟಿ ಜನ ನೋಡುತ್ತಾರೆ. ಅದರ ಮೇಲೆ ಅವರು ತೀರ್ಪು ಮಾಡುತ್ತಾರೆ. ನಮ್ಮ ನಾಲ್ಕು ವರ್ಷಗಳಲ್ಲಿ ಏನು ಸಾಧನೆ ಮಾಡಲಿಕ್ಕಾಯಿತು ಎಂಬ ಒಟ್ಟು ಚಿತ್ರ ಬ್ಯಾಲೆನ್ಸ್ ಶೀಟ್ ಅನ್ನು ನಾನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ್ದೇನೆ. ಎಲ್ಲಿ ನಾವು ಸಾಧನೆ ಮಾಡುವುದಕ್ಕೆ ಆಗಲಿಲ್ಲ ಅದನ್ನು ಕೂಡ ಪರಿಶೀಲನೆ ಮಾಡಿ ಸಾಕಷ್ಟು ಸಮಾಲೋಚನೆ, ಆತ್ಮಾವಲೋಕನ ಮಾಡಿ ಆ ಬ್ಯಾಲೆನ್ಸ್ ಶೀಟಿನಲ್ಲಿ ಕೊರತೆ ಇದ್ದುದನ್ನು ೧೯೯೪-೯೫ ರಲ್ಲಿ ಟೈಂ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ನಾನು ಮಾಡಬೇಕೆಂದು ಒಂದು ರೀತಿಯ ರಾಜಕೀಯ ಇಚ್ಛಾಶಕ್ತಿಯಿಂದ ಪ್ರೇರಿತನಾಗಿ ಇದನ್ನು ಸಾಧನೆ ಮಾಡಬೇಕೆಂದು ಜನತೆಗೆ ಕೊಟ್ಟ ಆಶ್ವಾಸನೆಯನ್ನು ಪೂರ್ತಿಮಾಡಬೇಕೆಂದು ಮುಂದೆ ಹೊರಟಾಗ ಅದು ರಾಜಕೀಯ, ಚುನಾವಣೆ ದೃಷ್ಟಿಯಿಟ್ಟುಕೊಂಡು ಅಂತಹ ಆಯವ್ಯಯ ಮುಂದೆ ಇಟ್ಟಿದ್ದೇವೆಂದು ಯಾರಾದರೂ ಹೇಳಿದರೆ ಅದು ರಾಜಕೀಯವಾಗಿ ಅಪ್ರಸ್ತುತವಾಗುತ್ತದೆ, ಆರ್ಥಿಕವಾಗಿ ಅಪ್ರಸ್ತುತವಾಗುತ್ತದೆ. ಪ್ರಜಾಪ್ರಭುತ್ವದ ಪದ್ಧತಿ ಅನುಸರಿಸಬೇಕಾದ ಯಾವುದೇ ಪಕ್ಷ, ಸರ್ಕಾರದ ದೃಷ್ಟಿಯಿಂದ ಇಂತಹ ಪ್ರಶ್ನೆ, ಅಭಿಪ್ರಾಯ ಮಂಡನೆಗಳು ಖಂಡಿತವಾಗಿ ಅಪ್ರಸ್ತುತ

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಾಗುತ್ತವೆ. ನಮ್ಮ ಸರ್ಕಾರದ ಒಟ್ಟು ೪ ವರ್ಷಗಳ ಸಾಧನೆಯನ್ನು ಇವತ್ತು ಮುಂಸೆಯಲ್ಲಿಟ್ಟು ಕೊಂಡು ನೋಡಬೇಕಾಗುತ್ತದೆ. ೧೯೯೨-೯೩ ರಲ್ಲಿ ನವೆಂಬರ್ ೯೨ ರಿಂದ ಮಾರ್ಚ್ ೯೩ ರ ವರೆಗೆ that is the period of our Government, that means, when I took over. ಈ ವಾರ್ಷಿಕ ಆಯವ್ಯಯದ ಸಮೀಕ್ಷೆಯನ್ನು ಇವತ್ತು ನಾವು ಮಾಡಿದಾಗ ಜನತೆಯ ಮುಂದೆ ನಾವು ಈ ಆ್ಯಸಿಡ್ ಟೆಸ್ಟ್‌ಗೆ ಒಳಗಾದಾಗ ನಾವು ಇವತ್ತು ಮಾಡಿದಂತಹ ಸಾಧನೆಗಳೇನು, ಏನು ಸಾಧನೆ ಮಾಡಲಿಕ್ಕಾಯಿತು ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ೧೯೯೩-೯೪ ರಲ್ಲಿ ನಾವು ಆಯವ್ಯಯದಲ್ಲಿ ಕೊಟ್ಟಂತಹ ಆಶ್ವಾಸನೆಗಳು ಏನು, ಅದರ ಅನುಷ್ಠಾನ, ಆ ದಿಶೆಯಲ್ಲಿ ನಾವೇನು ಕಾರ್ಯಭಾರ ಮಾಡಿದ್ದೇವೆ ಎಂಬುದನ್ನು ನಾವು ಆಯವ್ಯಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇವೆ. ಅದು ಬ್ಯಾಲೆನ್ಸ್ ಷೀಟ್ ಸ್ವಲ್ಪ ಜಾಸ್ತಿ ಕಂಡಿರಬಹುದು. ಆದರೆ ನಮ್ಮ ಸರಕಾರದ ಮೇಲೆ, ನಮ್ಮ ಪಕ್ಷದ ಮೇಲಿರತಕ್ಕಂತಹ ಒಂದು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸತಕ್ಕಂತಹ ದೃಷ್ಟಿಯಲ್ಲಿ ಆ ಚುನಾವಣಾ ಪ್ರಣಾಳಿಕೆಯ ಆಶ್ವಾಸನೆಗಳನ್ನು ಪೂರ್ತಿಯಾಗಿ ಅಥವಾ ಸಮಾಧಾನಕರವಾಗಿ ಅನುಷ್ಠಾನ ಮಾಡತಕ್ಕಂತಹ ದೃಷ್ಟಿಯಲ್ಲಿ ಆಯವ್ಯಯದಲ್ಲಿ ಕೆಲವು ಪುಟಗಳು ಜಾಸ್ತಿಯಾಗಿರಬಹುದು. ಮಾಡಿದಂತಹ ಕಾರ್ಯಕ್ರಮಗಳು ಅಥವಾ ಮುಂದಿಟ್ಟಂತಹ ಕಾರ್ಯಕ್ರಮಗಳು ವಿಶೇಷವಾದ ತೂಕದ್ದು ಇರಬಹುದು, ವಿಶೇಷವಾದ ಗಾತ್ರದ್ದು ಇರಬಹುದು, ಆ ಗಾತ್ರವನ್ನು ನಿರ್ವಹಿಸತಕ್ಕಂತಹ ಶಕ್ತಿ ಅಥವಾ ಆ ಗಾತ್ರವನ್ನು ನಿರ್ವಹಿಸತಕ್ಕಂತಹ ಇಚ್ಛಾಶಕ್ತಿ ನಮ್ಮ ಸರಕಾರಕ್ಕಿದೆಯೋ ಇಲ್ಲವೇ ಎಂಬುದನ್ನು ತರ್ಕ ಮಾಡತಕ್ಕಂತಹ ಒಂದು ವ್ಯವಸ್ಥೆಯಲ್ಲಿ, ಒಂದು ಪರಿಸರದಲ್ಲಿ ನಾವು ಇವತ್ತು ಇದ್ದೇವೆ. ನನಗೆ ಒಂದು ದುಃಖ ಆಗಿದೆ. ಈ ಆಯವ್ಯಯದ ಚರ್ಚೆಗೆ ಪ್ರಧಾನ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಇವತ್ತು ಬಾರದೇ ಇದ್ದುದು ನಮಗೆ ದುಃಖಕರವಾದ ವಿಚಾರ. ಮಾನ್ಯ ಹಿರಿಯ ಸಚಿವರಾದಂತಹ ಎಸ್. ಎಂ. ಕೃಷ್ಣ ಅವರು ಮಾನ್ಯ ರಂಗನಾಥ್ ಅವರು ಈಗಾಗಲೇ ನಿನ್ನೆ ಮೊನ್ನೆ ನಾನು ಇಲ್ಲದೇ ಇದ್ದಾಗಲೂ ಕೂಡ they have given this gesture ಅವರ ಅವಮಾನತ್ತನ್ನು ಮುಂದುವರೆಸಬೇಕೆಂಬ ಅಪೇಕ್ಷೆ ನಮಗೆ ಇಲ್ಲ. ಅವರು ಬರತಕ್ಕಂತಹ ಉದ್ದೇಶವಿದ್ದರೆ ಅಥವಾ ಬರತಕ್ಕಂತಹ ಪರಿಸ್ಥಿತಿಯಲ್ಲಿದ್ದರೆ ಖಂಡಿತವಾಗಿ ಕೂಡ ಅವರ ಅಪಮಾನತ್ತನ್ನು ತಮ್ಮ ಅನುಮತಿ ಯನ್ನು ಪಡೆದು ರದ್ದುಗೊಳಿಸತಕ್ಕಂತಹ ಒಂದು ಕೆಲಸಕ್ಕೆ ನಾವು ಯಾವಾಗಲೂ ಸಿದ್ಧರಿದ್ದೇವೆ. ಎಂಬ ಗೆಸ್ಚರ್ ಅನ್ನು ನಮ್ಮ ಹಿರಿಯ ಸಚಿವರು ಈಗಾಗಲೇ ಮಾಡಿದ್ದಾರೆ. ಈಗಲೂ ಕೂಡ ನಾನು ತಮ್ಮ ಅನುಮತಿಯನ್ನು ಪಡೆದು ಆ ಆಹ್ವಾನವನ್ನು ಕೊಡಲಿಕ್ಕೆ ಸಿದ್ಧನಿದ್ದೇನೆ. ಈಗಲೂ ನಾನು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಅವರು ಬರತಕ್ಕಂತಹ ಅಪೇಕ್ಷೆ ವ್ಯಕ್ತಪಡಿಸುವುದು ಇದ್ದರೆ ಖಂಡಿತವಾಗಿ ಕೂಡ ಅವರನ್ನು ಆಹ್ವಾನ ಮಾಡಲಿಕ್ಕೆ ನಾವು ಸಿದ್ಧರಿದ್ದೇವೆ. ನಾವು ಉತ್ತರ ಕೊಡು ವಾಗ ಅವರ ಸನ್ನಿಧಿಯಲ್ಲಿ ಉತ್ತರವನ್ನು ಕೊಡುವುದಕ್ಕೆ ಖಂಡಿತವಾಗಿ ಸಿದ್ಧನಿದ್ದೇನೆ ಎಂಬ ವಿಚಾರ ವನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಸತತವಾಗಿ ನಾನು ವಿರೋಧ ಪಕ್ಷದ ನಾಯಕರನ್ನು ಸಂಪರ್ಕಿಸುತ್ತಿದ್ದೇನೆ. ಮೊನ್ನೆ ಕೂಡ ಸಂಪರ್ಕಿಸಿದೆ. ತಾವು ದಯಮಾಡಿ ಭಾಗವಹಿಸಬೇಕು, ಏನೇ ಭಿನ್ನಾಭಿಪ್ರಾಯವಿದ್ದರೂ ಕೂಡ ಈ ಶಾಸಕಾಂಗದ ವೇದಿಕೆ ಮೇಲೆ ಆ ಭಿನ್ನಾಭಿಪ್ರಾಯಗಳು ಚರ್ಚೆ ಯಾಗಬೇಕೇ ಹೊರತು ಬೇರೆ ಕಡೆ ಅಲ್ಲ. ಆ ಭಿನ್ನಾಭಿಪ್ರಾಯಗಳು ಇಲ್ಲಿ ಕ್ಲಿಯರ್ ಆಗಬಹುದೇ ಹೊರತು ಪರ್ಯಾಯವಾದಂತಹ ಪ್ರಜಾಪ್ರಭುತ್ವದ ವ್ಯವಸ್ಥೆಗನುಗುಣವಾಗಿ ಅಲ್ಲದೇ ಇರತಕ್ಕಂತಹ ವ್ಯವಧಾನಗಳನ್ನು, ಸಾಧನೆಗಳನ್ನು ಉಪಯೋಗ ಮಾಡಿಕೊಂಡು ಈ ಸದನದ ಕಾರ್ಯಕಲಾಪಗಳನ್ನು ನಿಲ್ಲಿಸತಕ್ಕಂತಹ, ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸದೇ ಇರತಕ್ಕಂಥಾದ್ದು ಖಂಡಿತವಾಗಿ ಸಲ್ಲಕ್ಷಣ ಅಲ್ಲ. ಆ ವ್ಯವಸ್ಥೆಯ ಮೌಲ್ಯಗಳಿಗೆ ಅದು ಖಂಡಿತವಾಗಿಯೂ ತೊಂದರೆಯಾಗುತ್ತದೆ, ಆಘಾತ ವಾಗುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ನಾನು ಇವತ್ತೂ ವಿರೋಧ ಪಕ್ಷದ ನಾಯಕರ ಹತ್ತಿರ ಹೇಳಿದ್ದೇನೆ. ತಾವು ದಯಮಾಡಿ ಬರುವುದಿದ್ದರೆ We are prepared to revoke the suspension. ತಾವು ದಯಮಾಡಿ ಬನ್ನಿ ಎಂದು ಆ ಸಭೆಯಲ್ಲಿ ಈವತ್ತೂ ಕೂಡ ಸಿಕ್ಕಿದಾಗ ಅವರ ಹತ್ತಿರ ವಿನಂತಿ ಮಾಡಿಕೊಂಡೆ, ಅವರು ಇಲ್ಲ, ನೀವು ರಿವೋಕ್ ಮಾಡಿದರೂ ನಾವು ಬರುವುದಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಿದ ಕಾರಣದಿಂದ ನಾವಾಗಿಯೇ ನಮ್ಮ ಇನಿಷಿಯೆಟೀವ್ ಮೇಲೆ ಇವತ್ತು ರಿವೋಕ್ ಮಾಡತಕ್ಕಂತಹ ಪ್ರಮೇಯವಿಲ್ಲ ಎಂಬುದನ್ನು ಅದನ್ನು ಮಾಡಿದರೂ ಕೂಡ ಅದನ್ನು ನಿರ್ಲಕ್ಷಿಸತಕ್ಕಂತಹ ಒಂದು ಧೋರಣೆಯನ್ನು ಪೂರ್ವಗ್ರಹ ಪೀಡಿತವಾದಂತಹ ಅಭಿಪ್ರಾಯವನ್ನು ಪ್ರಧಾನ ವಿರೋಧ ಪಕ್ಷದ ನಾಯಕರು ಅಥವಾ ಸಾಮಾನ್ಯ ಸದಸ್ಯರು ತೆಗೆದುಕೊಳ್ಳುವುದಿದ್ದರೆ ಈ ಸದನ ಇವತ್ತು ಅಸಹಾಯಕ ಪರಿಸ್ಥಿತಿಯಲ್ಲಿ ಪ್ರಧಾನ ವಿರೋಧ ಪಕ್ಷದವರು ಈ ಒಂದು ನಡವಳಿಕೆಯನ್ನು ದೂಷಿಸತಕ್ಕ ಪರಿಸ್ಥಿತಿ ಬಂತಲ್ಲ ಎಂಬ ಒಂದು ವ್ಯಥೆ ಇವತ್ತು ನನಗೆ ವಿಶೇಷವಾಗಿ ಆಗುತ್ತಿದೆ. ತಾವು ದಯಮಾಡಿ ನೋಡಬೇಕು. ದಾಖಲೆಗಳನ್ನು ತಾವು ಪರಿಶೀಲಿಸಿ

ನೋಡಬೇಕು. ಯಾವುದೇ ಸಂದರ್ಭದಲ್ಲಿ ಅವಮಾನತ್ತು ಅನಿರ್ದಿಷ್ಟ ಕಾಲದವರೆಗೆ ಆಗಿತ್ತು, ತಮಗೆ ಗೊತ್ತಿದೆ, ಈ ಒಂದು ಅಮಾನತ್ತು ಆಗಬೇಕಾಗಿತ್ತು. ಆದರೆ ಟ್ರೆಜರಿ ಬೆಂಚಿನವರು ಅಮಾನತ್ತು ರದ್ದುಗೊಳಿಸಲಿಕ್ಕೆ ನಿರ್ಣಯವನ್ನು ಮುಂದೆ ತಂದಾಗ ಪ್ರಜಾಪ್ರಭುತ್ವದ ಸಜ್ಜನಿಕೆಗೆ, ಪ್ರಜಾಪ್ರಭುತ್ವದ ಸತ್‌ಪರಂಪರೆಗೆ ಘನವಾಗಿ ವಿರೋಧ ಪಕ್ಷದವರು ಪುನಃ ಸದನಕ್ಕೆ ಬಂದು ಕಲಾಪಗಳನ್ನು ನಡೆಸಿದಂತಹ ಒಂದು ಉಜ್ವಲವಾದಂತಹ ಅನೇಕ ಪ್ರಸಂಗಗಳು ಇಲ್ಲಿವೆ. ಆದರೆ ಇವತ್ತು ಟ್ರೆಜರಿ ಬೆಂಚಿನವರು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅನುಸಾರವಾಗಿ ಸಜ್ಜನಿಕೆಯಿಂದ ಅವಮಾನತ್ತನ್ನು ರದ್ದು ಮಾಡುತ್ತೇವೆಂದು ಮುಂದೆ ಬಂದಾಗಲೂ ಕೂಡ ಅಂತಹ ಒಂದು ಸಜ್ಜನಿಕೆಯನ್ನು ನಿರ್ಲಕ್ಷಿಸಿ ಇವತ್ತು ಈ ಸದನದಿಂದ ಹೊರಗೆ ಉಳಿಯಬೇಕು ಎಂಬ ಒಂದು ರೀತಿಯ ಹಠವನ್ನು ಸಾಧನೆ ಮಾಡತಕ್ಕ ವಿರೋಧ ಪಕ್ಷ ಯಾವಾಗಲೂ ಕೂಡ ಕರ್ನಾಟಕ ರಾಜ್ಯದಲ್ಲಿ ಇಲ್ಲ ಎಂದು ಹೇಳಿದರೆ ಖಂಡಿತವಾಗಿ ಅತಿಶಯೋಕ್ತಿ ಆಗುವುದಿಲ್ಲ. ಅವರನ್ನು ಬೇಜವಾಬ್ದಾರಿ ಎಂದು ಹೇಳಲಿಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಆದರೆ ಯಾವುದೇ ಒಂದು ಜವಾಬ್ದಾರಿಯುತವಾದಂತಹ ರಾಷ್ಟ್ರೀಯ ಪಕ್ಷ ಅಥವಾ ಯಾವುದೇ ಒಂದು ಜವಾಬ್ದಾರಿಯುತವಾದಂತಹ ಪ್ರಧಾನವಾಗಿರತಕ್ಕ ವಿರೋಧ ಪಕ್ಷ ಈ ರೀತಿಯಲ್ಲಿ ವರ್ತನೆ ಮಾಡಿದರೆ ನಾವೂ ಅಸಹಾಯಕರಾಗಿ, ತಾವೂ ಅಸಹಾಯಕರಾಗಿ, ಸದನವೇ ಅಸಹಾಯಕವಾಗಿ ಕುಳಿತುಕೊಳ್ಳತಕ್ಕ ಪರಿಸ್ಥಿತಿಗೆ ಇವತ್ತು ದಬ್ಬತಕ್ಕ ಅವಶ್ಯಕತೆ ಏನಿತ್ತು ಎಂಬುದನ್ನು ಮುಖ್ಯವಾಗಿ ಜನತೆ ತೀರ್ಮಾನ ಮಾಡಬೇಕು. ಆ ಪ್ರಶ್ನೆ ಇವತ್ತು ಜನತೆಗೆ ಭಾದಿಸುತ್ತಿದೆ ಎಂಬುದನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇವತ್ತು ಸದನದಲ್ಲಿ ನಡೆದಿದ್ದಾದರೂ ಏನು? ನಾನು ಏನಾದರೂ ಇವತ್ತು ಹೇಳಿದರೆ ಮಾನ್ಯ ಪ್ರಧಾನ ವಿರೋಧ ಪಕ್ಷದವರನ್ನು ಹೊರಗೆ ಇಟ್ಟು ಈ ಸದನದ ನಾಯಕರು ಮಾತನಾಡಿದ್ದಾರೆ ಎಂಬ ಆಪಾದನೆಗೆ ಒಳಗಾಗಬಹುದು ಎಂಬ ಒಂದು ಸಂದೇಹದಿಂದ ಎಲ್ಲವನ್ನೂ ನಾನು ಹೇಳಲಿಕ್ಕೆ ಅಪೇಕ್ಷೆ ಪಡದಿದ್ದರೂ ಕೂಡ ಹೇಳುತ್ತೇನೆ. ಇವತ್ತು ನಮ್ಮ ಸರ್ಕಾರದ ಧೋರಣೆ ಸ್ಪಷ್ಟವಾಗಿದೆ. ನಾವು ಹೇಳಿದ್ದೇವೆ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ೮೦ ಸಾವಿರಕ್ಕಿಂತ ಹೆಚ್ಚು ಸದಸ್ಯರ ಚುನಾವಣೆ ಆಗಿದೆ. ಇವತ್ತು ಚುನಾವಣೆ ಕರ್ನಾಟಕ ರಾಜ್ಯದಲ್ಲಿ ಶಾಂತಿಯುತವಾಗಿ ಆಗಿದೆ. ಇಂತಹ ಸ್ಥಳೀಯ ಶಾಂತವಾದ ಚುನಾವಣೆ ಕರ್ನಾಟಕದ ಇತಿಹಾಸದಲ್ಲಿ ಆಗಲೇ ಇಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ. ಇವತ್ತು ಅಧಿಕಾರದ ದರ್ಪವನ್ನು ಅಥವಾ ನಮ್ಮ ಪಕ್ಷದ ಮೆಜಾರಿಟಿಯನ್ನು ಅಥವಾ ನಮ್ಮ ಪಕ್ಷದ ಅಧಿಕಾರ ರೂಢವಾದಂತಹ ಒಂದು ಪಕ್ಷ ಅನೇಕ ಬಾರಿ ತನ್ನ ಅಧಿಕಾರವನ್ನು ದುರಪಯೋಗ ಮಾಡತಕ್ಕ ಪರಿಸ್ಥಿತಿ ಇತ್ತೀಚಿನ ಕಾಲದಲ್ಲಿ ಕೇಳಿ ಬರುತ್ತಿರುವ ಸಂದರ್ಭದಲ್ಲಿ ಒಂದು ಸೊಲ್ಲು ಒಂದು ಧ್ವನಿ ಕೂಡ ಈ ಬಗ್ಗೆ ಬಂದಿಲ್ಲ. ಸುಮಾರು ೮೦ ಸಾವಿರ ಚಿಲ್ಲರೆ ಗ್ರಾಮ ಪಂಚಾಯತಿ ಸದಸ್ಯರ ಚುನಾವಣೆ ಮಾಡುವಾಗ ಅಧಿಕಾರ ರೂಢವಾದ ಕಾಂಗ್ರೆಸ್ ಪಕ್ಷ ಎಲ್ಲೂ ಕೂಡ ತನ್ನ ಅಧಿಕಾರವನ್ನು ದುರಪಯೋಗ ಮಾಡಲಿಲ್ಲ, ಪೋಲೀಸರನ್ನು ದುರಪಯೋಗ ಮಾಡಲಿಲ್ಲ. ದುರುಪಯೋಗ ಮಾಡಿದೆ ಎಂದು ಒಂದು ಧ್ವನಿ ಕೂಡ ಈ ಚುನಾವಣೆಯಲ್ಲಿ ಎದ್ದು ಕಾಣಲಿಲ್ಲ, ಬರಲಿಲ್ಲ. ಪತ್ರಿಕೆಯಲ್ಲಿ ಕೂಡ ಬರಲಿಲ್ಲ ಎಂದರೆ ಇದಕ್ಕಿಂತ ದೊಡ್ಡದಾದ ಕೀರ್ತಿ ಅಧಿಕಾರ ರೂಢವಾದಂತಹ ಪಕ್ಷದ ಪ್ರಜಾಪ್ರಭುತ್ವ ನೀತಿಗೆ ಮತ್ತೊಂದು ಬೇಕಾಗಿಲ್ಲ ಎಂದು ಇವತ್ತು ನಾನು ಎದೆ ತಟ್ಟಿ ಹೇಳಲಿಕ್ಕೆ ಅಪೇಕ್ಷೆ ಮಾಡುತ್ತಿದ್ದೇನೆ. ಅನಂತರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗಳಲ್ಲಿ ಕೂಡ ಸುಮಾರು ೪೯ ಜಾಗಗಳಲ್ಲಿ ಈ ಪ್ರಕರಣ ನಡೆಯಿತು. ಆದರೆ ಎರಡು ಕಡೆಯಲ್ಲಿ ಮಾತ್ರ ಅವರು ಹೇಳುವಹಾಗೆ ಗೋಲೀಬಾರ್ ನಡೆಯಿತು. ಆದರೆ ಗೋಲೀಬಾರ್ ನಡೆದಾದ ಮೇಲೆ ಕೂಡ ಆ ಜಿಲ್ಲೆಯಿಂದ ಆಗಲಿ ಅಥವಾ ರಾಜ್ಯ ಮಟ್ಟದಲ್ಲಿ ಆಗಲೀ ಪೋಲೀಸರು ಅತಿರೇಕವಾಗಿ ವರ್ತಿಸಿದ್ದಾರೆ, ಗೋಲೀಬಾರ್ ಅನಾವಶ್ಯಕವಾಗಿತ್ತು ಎಂಬ ಒಂದು ಆಪಾದನೆ ಈ ಸದನದಲ್ಲಿ ಕೂಡ ಆಗಿಲ್ಲ, ತೀರ್ಮಾನ ಆದ ಮೇಲೆ ಬಂದಿರಬಹುದು. ಆದರೆ ಈ ಚರ್ಚೆ ಆಗುವಾಗ ಒಂದು ಸೊಲ್ಲು, ಧ್ವನಿ ಕೂಡ ಇಲ್ಲಿ ಬಾರದೇ ಇದ್ದುದನ್ನು ಈ ಸದನದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತಿದ್ದೇನೆ. ಆದರೂ ಕೂಡ ಸುಮಾರು ೨೦೦ ಚಿಲ್ಲರೆ ಘಟನೆಗಳು ಆಗಿವೆ. ಮಂಡಲ ಪಂಚಾಯತಿ ಚುನಾವಣೆ ಆಗುವಾಗ, ತಾಲ್ಲೂಕು ಮತ್ತು ಜಿಲ್ಲಾ ಪರಿಷತ್ತಿನ ಚುನಾವಣೆ ಆಗುವಾಗ ವ್ಯಾಪಕವಾದಂತಹ ಹಿಂಸೆ, ವ್ಯಾಪಕವಾದ ಗಲಭೆಗಳು ಸುಮಾರು ೨೦೦ ಜಾಗಗಳಲ್ಲಿ ಆದದ್ದನ್ನು ಆ ಹಿನ್ನಲೆಯಲ್ಲಿ ಗಮನಿಸಬೇಕು. ಆ ಹಿನ್ನಲೆಯಲ್ಲಿ ಗಮನಿಸಿ ಮೀಸಲಾತಿಯುತಹ ಒಂದು ಕಾಂತ್ರಿಕಾರಕವಾದ ಧೋರಣೆಯನ್ನು ಇಡೀ ದೇಶದಲ್ಲಿ ಸ್ಥಳೀಯ ಚುನಾವಣೆಯಲ್ಲಿ ಮೊದಲು ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೇರಿ ಮಹಿಳೆಯರ ಮೀಸಲಾತಿ ಸೇರಿ ಇವತ್ತು ಯಶಸ್ವಿ ಕಾನೂನನ್ನು ಕಾಂತ್ರಿಯನ್ನು ರಕ್ತ ರಹಿತವಾಗಿ ಅನುಷ್ಠಾನ ಮಾಡಿದ ಕೀರ್ತಿ ಬರೀ ಕಾಂಗ್ರೆಸ್ ಪಕ್ಷಕ್ಕೆ ಅಲ್ಲ, ಇದು ಇಡೀ ಕರ್ನಾಟಕ ರಾಜ್ಯದ ಒಂದು ಪ್ರಜಾಪ್ರಭುತ್ವದ ಜ್ವಲಂತ ಉದಾಹರಣೆಯಾಗಿದೆ. ಹೀಗೆ ಇರತಕ್ಕ ಸಂದರ್ಭದಲ್ಲಿ ಇಂತಹ ಒಂದು ಕರ್ನಾಟಕ ರಾಜ್ಯದ ಪ್ರಜಾಪ್ರಭುತ್ವದ ಉಜ್ವಲ ವ್ಯಕ್ತಿತ್ವಕ್ಕೆ ಕಪ್ಪು

ಮಸಿಯನ್ನು ಹಾಕತಕ್ಕ ಪ್ರಯತ್ನ ಪ್ರಧಾನ ವಿರೋಧ ಪಕ್ಷದ ಜನರು ಮಾಡಿದ್ದೇ ಆದರೆ, ಅವರು ಮಾಡತಕ್ಕ ಕಪ್ಪು ಮಸಿ ಬರೀ ಕಾಂಗ್ರೆಸ್ ಪಕ್ಷಕ್ಕೇ ಅಲ್ಲ, ಅದು ಕರ್ನಾಟಕ ರಾಜ್ಯದ ಇಡೀ ಪ್ರಜಾ ಪ್ರಭುತ್ವದ ಒಂದು ವಿಕೇಂದ್ರೀಕರಣದ ವ್ಯವಸ್ಥೆಗೆ ಮಾಡಿರತಕ್ಕ ಮಸಿ ಎಂದು ಇವತ್ತು ನಾನು ವಿಶೇಷ ವಾಗಿ ಒತ್ತಿ ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇವತ್ತು ಈ ದೇಶದಲ್ಲಿ ಅಂತಹ ಅಪಪ್ರಚಾರವನ್ನು ಮಾಡಿದರೂ ಕೂಡ ನಂಬತಕ್ಕ ಜನ ಇಲ್ಲ, ಕರ್ನಾಟಕದಲ್ಲಿ ನಂಬತಕ್ಕ ಜನ ಇಲ್ಲ ಅಥವಾ ಈ ರಾಷ್ಟ್ರದಲ್ಲಿ ನಂಬತಕ್ಕ ಜನ ಇಲ್ಲ. ನಾನು ಇವತ್ತು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್, ಪ್ರೊ॥ ನಂಜುಂಡಸ್ವಾಮಿಯವರು ಅಥವಾ ಬಿಜೆಪಿಯ ಸನ್ಮಾನ್ಯ ಸದಸ್ಯರುಗಳ ಸಮಕ್ಷಮದಲ್ಲಿ ತಮ್ಮ ಕೊಠಡಿಯಲ್ಲಿ ಮಾತುಕತೆ ನಡೆಯಿತು. ನಮ್ಮ ಜೊತೆಯಲ್ಲಿ ಅನೇಕ ಹಿರಿಯರು ಇದ್ದಾರೆ. ನಾವು ಹೇಳಿದೆವು, ೮೦ ಸಾವಿರ ಜನರ ಚುನಾವಣೆ ಸಮರ್ಪಕವಾಗಿ ಆಯಿತು. ಗ್ರಾಮ ಪಂಚಾಯತಿಯ ಉಪಾಧ್ಯಕ್ಷರ, ಅಧ್ಯಕ್ಷರ ಚುನಾವಣೆಗಳ ಪ್ರಕ್ರಿಯೆ ಇವತ್ತು ನಡೆದಿದೆ. ಇದು ನಡೆದ ಮೇಲೆ ೨೨ನೇ ಏಪ್ರಿಲ್‌ಗೆ ಚುನಾವಣೆ ಘೋಷಣೆ ಮಾಡಬೇಕು ಎಂದು ನಾವು ಇದ್ದಂತಹ ಸಮಯದಲ್ಲಿ ಮೊನ್ನೆ ಇವರು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿದರು. ಎಲ್ಲಿ ನ್ಯಾಯಾಂಗ ತನಿಖೆ ಆಗಬೇಕು ? ಎಲ್ಲಿ ಅಂಡರ್ ಕರೆಂಟ್ ಆಗಿದೆ, ಎಲ್ಲಿ ಜನಗಳ ಮನಸ್ಸಿನಲ್ಲಿ ಈ ರೀತಿಯ ಬದಲಾವಣೆ ಸಂದರ್ಭದಲ್ಲಿ ಟ್ರಾನ್ಸಿಷನ್ ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮೇಷನ್ ಆಫ್ ದಿ ಸೊಸೈಟಿ ಆದ ಕಾಲದಲ್ಲಿ ಆ ಪರಿವರ್ತನೆಯ ಒಂದು ಸಂಕ್ರಾಂತಿ ಕಾಲದಲ್ಲಿ ಎಲ್ಲಾ ರಾಜಕೀಯ ತತ್ವದಲ್ಲಿ ಮತ್ತು ಅಧಿಕಾರದ ವಿಕೇಂದ್ರೀಕರಣ, ಮ್ಯಾಕ್ರೋ ಲೆವೆಲ್‌ನಲ್ಲಿ ಮತ್ತು ಮೈಕ್ರೋ ಲೆವೆಲ್‌ನಲ್ಲಿ ಎಲ್ಲಾ ಹಂತದಲ್ಲಿ ಆಗಿ ಕೆಳಸ್ತರದ ಜನರಿಗೆ ಭೌಗೋಳಿಕವಾಗಿ ಬರೀ ಕೆಳಗಿನ ಹಂತದವರಿಗೆ ಅಧಿಕಾರ ಬಂದರೆ ಸಾಲದು. ಸಾಮಾಜಿಕವಾಗಿ ಕೂಡ ಆರ್ಥಿಕವಾಗಿ ಸಹ ಕೆಳಸ್ತರದ ಜನರು ಅನುಭವಿಸತಕ್ಕ ಒಂದು ಪರಿವರ್ತನೆಯ ಒಂದು ಸಂಕ್ರಾಂತಿ ದಿನದಲ್ಲಿ ಒಂದು ಕ್ರಾಂತಿಯ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸಹಾನುಭೂತಿ ಈ ದೃಷ್ಟಿಯಲ್ಲಿ ಬೇಕು. ಆ ಜನ ಮುಂದೆ ಬರತಕ್ಕ ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಕೂಡ ಶಾಂತಿ ಯಿಂದ ಸಹಾನುಭೂತಿಯಿಂದ ಮತ್ತು ಧೈರ್ಯದಿಂದ ಭಯ ಭೀತಿ ಇಲ್ಲದೇ, ಶಂಕೆ ಇಲ್ಲದೇ ನಿರ್ಭೀತಿ ಯಿಂದ ನಾಮಕರಣಕ್ಕೆ ಮುಂದೆ ಹೋಗಿ ಚುನಾವಣೆಯನ್ನು ನಾವು ಘೋಷಣೆ ಮಾಡಿದಾಗ ತಮ್ಮ ನಾಮಿನೇಷನ್ ಹಾಕತಕ್ಕ ಒಂದು ಧೈರ್ಯ ಆ ಒಂದು ನಿರ್ಭೀತಿಯ ಒಂದು ಹೆಜ್ಜೆಯಿಂದ ಆ ಹಿಂದು ಳಿದವರ ಅಥವಾ ಶೆಡ್ಯೂಲ್ಡ್ ಕಾಸ್ಟ್‌ನವರು, ಮಹಿಳೆಯರು ಮುಂದೆ ಬರತಕ್ಕ ಒಂದು ವಾತಾವರಣ ನಿರ್ಮಾಣ ಮಾಡಲಿಕ್ಕೆ ನಿಮ್ಮ ಸಹಕಾರ ಬೇಕು ಎಂದು ಸಾರಿ ಸಾರಿ ತಮ್ಮ ಸಮಕ್ಷಮದಲ್ಲಿ ಪ್ರಧಾನ ವಿರೋಧ ಪಕ್ಷದವರನ್ನು ಕೇಳಿಕೊಂಡೆ, ನಾನು ಬೇಡಿಕೊಂಡೆ. ಏಕೆಂದರೆ ಪರಿವರ್ತನೆ ಆಗತಕ್ಕ, ಕರ್ನಾಟಕದ ರಾಜಕೀಯ ಚಿತ್ರದಲ್ಲಿ ಸಕ್ರಿಯವಾಗಿ ತಾವು ಕೂಡ ಪಾಲುಗೊಳ್ಳಬೇಕು, ಪಾರ್ಟಿಸಿಪೇಟ್ ಮಾಡಬೇಕು ಎಂದು ಕೇಳಿಕೊಂಡೆ. ಕೆಳಸ್ತರದಲ್ಲಿರತಕ್ಕ ಜನರಿಗೆ ಕೂಡ ಆರ್ಥಿಕವಾಗಿ ಅನೇಕ ಸೌಲಭ್ಯಗಳನ್ನು ನಾವು ನೀಡತಕ್ಕ ಪರಿಸ್ಥಿತಿಯಲ್ಲಿ ಇವತ್ತು ಸಕ್ರಿಯವಾಗಿ ರಾಜಕೀಯವಾದ ಸಾಮಾಜಿಕ ವಾದ, ಆರ್ಥಿಕವಾದ ಹಕ್ಕುಗಳನ್ನು ಪಡೆದುಕೊಳ್ಳತಕ್ಕ ಈ ಬದಲಾವಣೆಯ ಒಂದು ಪ್ರಕ್ರಿಯೆ ಯಲ್ಲಿ ಈ ಜನರಿಗೆ ಒಂದು ಇಚ್ಛಾಶಕ್ತಿಯ ಒಂದು ದೃಷ್ಟಿಯನ್ನು ಕೊಡತಕ್ಕ ಹೊಸ ರಾಜಕೀಯ ದೃಷ್ಟಿಯನ್ನು ಕೊಡತಕ್ಕ ಸಂದರ್ಭದಲ್ಲಿ ಅವರಿಗೆ ಭಯವನ್ನು ಹುಟ್ಟಿಸಿ, ಅವರಿಗೆ ಕಂಪನವನ್ನು ಹುಟ್ಟಿಸಿ ಅವರ ರಾಜಕೀಯ ದೃಷ್ಟಿಯನ್ನು ಇವತ್ತು ಅಪಭ್ರಂಶ ಮಾಡತಕ್ಕ ಕೆಲಸವನ್ನು ಮಾಡಬಾರದು ಎಂಬ ದೃಷ್ಟಿಯಿಂದ ನಾನು ಹೇಳಿದೆ

೧-೪೦ ಪಿ. ಎಂ.

ಬೇಕಾದರೆ ಒಂದೆರಡು ದಿವಸಗಳಲ್ಲಿ ಸದನ ಸಮಿತಿ ಆ ಪ್ರದೇಶಕ್ಕೆ ಹೋಗಿ ವಿಚಾರಿಸಿಕೊಂಡು ಬರಲಿ. ಏಕೆಂದರೆ, ನಾವು ಅರ್ಥ ಮಾಡಿಕೊಳ್ಳಬೇಕು. ಇವೊತ್ತು ಪೊಲಿಟಿಕಲ್ ಇನಿಷಿಯೇಟಿವ್ ಅನ್ನು ಯಾರಾದರೂ ತಿಳಿದುಕೊಳ್ಳಬೇಕು. ಇದು ಒಂದು ಪಕ್ಷದ ಕೆಲಸವಲ್ಲ, ಎಲ್ಲಾ ಪಕ್ಷಗಳು, ಪಕ್ಷೇತರರು ಇದನ್ನು ಪೊಲಿಟಿಕಲ್ ಇನಿಷಿಯೇಟಿವ್ ದೃಷ್ಟಿಯಲ್ಲಿ ತೆಗೆದುಕೊಂಡಾಗ ಮಾತ್ರ ಪರಿಸ್ಥಿತಿ ಹತೋಟಿಗೆ ಬರುತ್ತದೆ ಮತ್ತು ಜನರಲ್ಲೂ ಕೂಡ ಒಂದು ರೀತಿಯ ಧೈರ್ಯ ಬಂದು ಅವರು ನಿರ್ಭೀತಿಯಿಂದ ಓಡಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಗ ಅವರು ತಮ್ಮ ನಾಮ ನಿರ್ದೇಶನವನ್ನು ಫೈಲ್ ಮಾಡಿ ಚುನಾವಣೆಗೆ ನಿಲ್ಲತಕ್ಕಂಥ ಧೈರ್ಯ ಅವರಲ್ಲಿ ಬರುತ್ತದೆ. ಇಲ್ಲದಿದ್ದರೆ, proxies of vested interest will come and not real people who are the genuine representatives... ಆದುದರಿಂದ, ಈ ಸಮುದಾಯದಿಂದ ಎದ್ದು ಬರತಕ್ಕಂಥ ಪ್ರತಿನಿಧಿಗಳು ನಮಗೆ ಇವೊತ್ತು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಮೂಲಕ ಆರಿಸಿ ಬರಬೇಕೇ

ಹೊರತು ಯಾವುದೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈವಾಡದಿಂದ ಇವೊತ್ತು ನಾಮಿನೀಸ್ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಬರತಕ್ಕಂಥ ಪ್ರಕ್ರಿಯೆ ನಡೆಯಬಾರದೆಂಬ ಸದುದ್ದೇಶದಿಂದಲೇ ಸದನ ಸಮಿತಿಯಾಗಬೇಕೆಂದು ನಾನು ಹೇಳಿದ್ದೆ. ಏಕೆಂದರೆ, ಇದನ್ನು ಅರ್ಥ ಮಾಡಿಕೊಳ್ಳತಕ್ಕ ಪ್ರಜಾಪ್ರಭುತ್ವ ವ್ಯವಸ್ಥೆ ನಮಗೆ ಗೊತ್ತಿದೆ. I can believe you, but not the bureaurcrats or any other people. ಸದನ ಸಮಿತಿಯವರು ಅಲ್ಲಿಗೆ ಹೋದಾಗ ಪ್ರಜಾಪ್ರಭುತ್ವ ಮೌಲ್ಯದ, ಆ ತರಹದ ಪ್ರಕ್ರಿಯೆಯ ಸೃಷ್ಟಿ ಆ ಜಾಗದಲ್ಲಿ ಆಗತಕ್ಕಂಥಾದ್ದನ್ನು ತಾವು ಕಂಡುಕೊಂಡು ಬರಬೇಕೆಂಬ ಬಗ್ಗೆ ನನಗೆ ವಿಶೇಷ ಆಸಕ್ತಿ ಇದ್ದುದ್ದರಿಂದ ಸದನ ಸಮಿತಿ ರಚನೆಯಾಗಬೇಕೆಂದು ಹೇಳಿದೆ. ಸದನ ಸಮಿತಿ ಬರೀ ಯಾಂತ್ರಿಕವಾಗಿ ಕಾರ್ಯನಿರ್ವಹಿಸಬೇಕೆಂದು ನಾನು ಹೇಳಿಲ್ಲ. ಏಕೆಂದರೆ, ಬದಲಾವಣೆಯಾಗತಕ್ಕಂಥ ಈ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಹೃದಯ ಸಿರಿವಂತಿಕೆ ಪ್ರಜಾಪ್ರಭುತ್ವದ ಜನ ಪ್ರತಿನಿಧಿಗಳಿಗೆ ಇದೆಯೆಂಬುದು ನನಗೆ ಗೊತ್ತಿದೆ. ನ್ಯಾಯಾಂಗ ವಿಚಾರಣೆಯಿಂದ ಅದು ಹೊರ ಬರುವುದಕ್ಕೆ ಸಾಧ್ಯವಿಲ್ಲ, ಅಥವಾ ಯಾವುದೋ ಅಧಿಕಾರಿಗಳ ವಿಚಾರಣೆಯಿಂದ ಹೊರ ಬರಲು ಸಾಧ್ಯವಿಲ್ಲವೆಂಬ ಪ್ರಜಾಪ್ರಭುತ್ವದ ಒಂದು ಅಭಿವ್ಯಕ್ತಿಪಣದಿಂದ ನಾನು ಈ ರೀತಿ ಮಾಡಿದ್ದೇನೆಯೇ ಹೊರತು ಜವಾಬ್ದಾರಿಯಿಂದ ನುಣುಚಿಕೊಳ್ಳತಕ್ಕಂಥ ಉದ್ದೇಶದಿಂದ ನಾನು ಸದನ ಸಮಿತಿ ರಚನೆಗೆ ಒಪ್ಪಲಿಲ್ಲ. ಸದನ ಸಮಿತಿಯಿಂದ ತಾವು ಹೋಗಬಹುದಿತ್ತು. ಅಲ್ಲಿಗೆ ಹೋಗಿ ಬಂದ ನಂತರ ನ್ಯಾಯಾಂಗ ವಿಚಾರಣೆ ಆಗಬೇಕೆಂದು ಹೇಳಿದ್ದರೆ ನಾನು ಖಂಡಿತವಾಗಿಯೂ ಒಪ್ಪುತ್ತೇನೆ. ಯಾವುದೇ ಒಂದು ಪ್ರತಿಷ್ಠೆ ಮುಂದಿಟ್ಟುಕೊಂಡು ಅದನ್ನು ನಿರಾಕರಿಸತಕ್ಕಂಥ ಅಥವಾ ತಿರಸ್ಕರಿಸತಕ್ಕಂಥ ಕೆಲಸವನ್ನು ನಾನು ಖಂಡಿತವಾಗಿಯೂ ಮಾಡುವುದಿಲ್ಲ. ಆದುದರಿಂದ, ಇವೊತ್ತು ಜನರ ಮುಂದೆ ವಿಚಾರ ಬಹಳ ಸ್ಪಷ್ಟವಾಗಿದೆ. ಸದನ ಸಮಿತಿ ರಚನೆಗೂ ನಾನು ಒಪ್ಪಿಕೊಂಡಿದ್ದೇನೆ, ನ್ಯಾಯಾಂಗ ತನಿಖೆಗೂ ಒಪ್ಪಿಕೊಂಡಿದ್ದೇನೆ. ಎರಡಕ್ಕೂ ಕೂಡ ಒಪ್ಪಿಕೊಂಡಂಥ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇವೊತ್ತು ಇದನ್ನು ತಿಳಿದುಕೊಳ್ಳದ ಪ್ರಧಾನ ವಿರೋಧ ಪಕ್ಷದವರು ಯಾವ ಕಾರಣಕ್ಕಾಗಿ ಹೊರಗಡೆ ಹೋದರೆಂಬುದು ನನಗೆ ಇವತ್ತೂ ಕೂಡ ಅರ್ಥವಾಗುತ್ತಿಲ್ಲ. ತಮಗೆ ಗೊತ್ತಿರಬಹುದು...

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿರೋಧ ಪಕ್ಷದವರು ಯಾರು ಎಂದು ಹೇಳಿ. ನಾವೂ ಸಹ ಇಲ್ಲಿ ಕುಳಿತುಕೊಂಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಆದುದರಿಂದಲೇ ನಾನು "ಪ್ರಧಾನ ವಿರೋಧ ಪಕ್ಷಗಳು" ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್.—ಈಗ ನಾವೆಲ್ಲರೂ ಉಪ ಪ್ರಧಾನರೆಂದು ಅರ್ಥವೇ ?

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ವಿರೋಧ ಪಕ್ಷದ ನಾಯಕರೆಂದರೆ, he is designated. ಆದರೆ, ಇವೊತ್ತು ಯಾರು ಅಧಿಕಾರದಲ್ಲಿರಬೇಕು, ಯಾರು ಅಧಿಕೃತ ವಿರೋಧ ಪಕ್ಷದ ನಾಯಕರಿರಬೇಕೆಂಬುದನ್ನು ಜನತೆ ತೀರ್ಮಾನ ಮಾಡುತ್ತಾರೆ. ಆದುದರಿಂದ, ನಾನು ಸದನ ಸಮಿತಿ ರಚನೆಗೂ ಮತ್ತು ನ್ಯಾಯಾಂಗ ತನಿಖೆ ಇವೆರಡಕ್ಕೂ ಕೂಡ ಒಪ್ಪಿಕೊಂಡಿದ್ದೇನೆ. ಏಕೆಂದರೆ, ಪ್ರಕರಣದ ಸತ್ಯಾಂಶವನ್ನು ಅಡಗಿಸಬೇಕೆಂಬ ಯಾವುದೇ ತರಹದ ಉದ್ದೇಶ ಕೂಡ ನನ್ನಲ್ಲಿಲ್ಲ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ದೇಶಪಾಂಡೆಯವರು ಮತ್ತು ಸಂಗಡಿಗರು that is more appropriate...

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನ ಸಮಿತಿ ರಚಿಸಿ, ಅದು ಸ್ಥಳಕ್ಕೆ ಭೇಟಿ ಕೊಟ್ಟು ವರದಿ ಸಲ್ಲಿಸಿದ ನಂತರ, ಅದರ ಆಧಾರದ ಮೇಲೆ ನ್ಯಾಯಾಂಗ ತನಿಖೆ ಮಾಡಿಸುವುದಕ್ಕೆ ಸಿದ್ಧವೆಂದು ತಾವು ಹೇಳಿದ್ದೀರಿ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿರುವುದೇನೆಂದರೆ, ಆ ಸಲಹೆಗೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ನಿಮ್ಮ ಕರ್ತವ್ಯವೇನಿತ್ತೆಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಮುಖ ವಿರೋಧ ಪಕ್ಷ ಯಾವುದಿದೆ ಅವರನ್ನು ಕರೆಸಬೇಕಾಗಿತ್ತು. ಅವರನ್ನು ಹೊರಗಡೆ ಕಳುಹಿಸಿ ನಂತರ ನಾವು ತೆಗೆದುಕೊಂಡ ತೀರ್ಮಾನ ಸರಿಯಾಗಿರುವುದಿಲ್ಲ. ದಯಮಾಡಿ ತಾವು ಸದನ ಸಮಿತಿ ರಚನೆ ವಿಷಯ ಪ್ರಕಟಿಸಬೇಕು. ಸಮಿತಿ ಸ್ಥಳಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿ ನಂತರ ಅದು ಏನು ವರದಿ ಕೊಡುತ್ತದೋ, ಅದನ್ನು ಅನುಷ್ಠಾನಗೊಳಿಸುವುದಕ್ಕೆ ತಾವಿತ್ತ ವಚನವನ್ನು ಪಾಲಿಸಬೇಕು. ಆದುದರಿಂದ, ಸದನ ಸಮಿತಿ ಮಾಡುವುದಕ್ಕೆ ತಾವು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಸ್. ಚಿಕ್ಕಮಾಧು.—ವಿರೋಧ ಪಕ್ಷದವರು ಅದಕ್ಕೆ ಒಪ್ಪಲಿಲ್ಲ. ವಿರೋಧ ಪಕ್ಷದವರು ಈ ವಿಚಾರವನ್ನು ಒಪ್ಪಿ ಸದನದೊಳಗೆ ಬಂದಿದ್ದರೆ ಪ್ರಸ್ತಾಪ ಮಾತಬಹುದಿತ್ತು. ಅವರು ಹೊರಗಡೆ ಇರುವುದರಿಂದ ಆ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಂದರೆ ಪ್ರಧಾನ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇಶಪಾಂಡೆ ಮತ್ತು ಅವರ ಸಂಗಡಿಗರನ್ನು ಹೊರಗಡೆ ಇಟ್ಟು ಇದನ್ನು ಘೋಷಣೆ ಮಾಡಿದ ಅಪವಾದ ನಮಗೆ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಾಗಾದರೆ ನಾವು ಇಲ್ಲಿ ಕುಳಿತುಕೊಳ್ಳುವುದಿಲ್ಲ. ನಿಮ್ಮ ದೃಷ್ಟಿಯಲ್ಲಿ ವಿರೋಧ ಪಕ್ಷವೆಂದರೆ ಅವರುಗಳು ಮಾತ್ರ ನಾವು ವಿರೋಧ ಪಕ್ಷದವರಲ್ಲ.

(ಗೊಂದಲ)

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸದನದ ಸಮಿತಿ ಮಾಡುತ್ತೇವೆಂದು ಪ್ರಕಟಣೆ ಮಾಡಬೇಕು, ಅದನ್ನು ಪ್ರಕಟಣೆ ಮಾಡುತ್ತೀರೆಂದು ನಾವು ಇಲ್ಲಿ ಇದ್ದೇವೆ. ನಾನು ಇದರ ಬಗ್ಗೆ ಕೊನೆಯಲ್ಲಿ ಕೇಳೋಣವೆಂದಿದ್ದೆ, ಆದರೆ ಮಾನ್ಯ ಯಡಿಯೂರಪ್ಪನವರು ಈಗಲೇ ಕೇಳಿವರು, ತಾವು ಸದನದ ಸಮಿತಿಯನ್ನು ಮಾಡುತ್ತೇವೆಂದು ಪ್ರಕಟಣೆ ಮಾಡಬೇಕು.

ಶ್ರೀ ಬಿ. ಎಸ್, ಯಡಿಯೂರಪ್ಪ.—ನಾವು ತಾಳ್ಮೆಯಿಂದ ಈ ಮಾತನ್ನು ಕೇಳಿ ತಮಗೆ ಸಲಹೆ ಕೊಟ್ಟರೆ ಅದಕ್ಕೆ ತಾವು ಸಿದ್ಧರಿಲ್ಲವೆಂದ ಮೇಲೆ ನಾವೇಕೆ ಇಲ್ಲಿ ಕುಳಿತುಕೊಳ್ಳಬೇಕು. ತಾವು ವಿರೋಧ ಪಕ್ಷದವರಾದ ನಮಗೆ ಅಪಮಾನ ಮಾಡುತ್ತಿದ್ದೀರಿ. ನಿಮ್ಮಂಥ ಒಬ್ಬರು ನಾಯಕರಿಂದ, ಮುಖ್ಯಮಂತ್ರಿಗಳಿಂದ ಈ ರೀತಿಯಾದ ಮಾತನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಇದು ನಮಗೆ ಅಪಮಾನ.

(ಗೊಂದಲ)

ಅಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್‌ರವರೇ, ಮುಖ್ಯ ಮಂತ್ರಿಗಳು ಮೊದಲು ಹೇಳಲಿ, ಅನಂತರ ಬೇಕಾದರೆ ತಾವು ಕೇಳಿ.

ಶ್ರೀ ವಾಟಾಳ್ ನಾಗರಾಜ್.—ಒಂದೇ ಒಂದು ವಿಷಯ. ತಮ್ಮ ಕಾರ್ಯಾಲಯದಲ್ಲಿ ನಡೆದ ವಿಚಾರವೇನೆಂದರೆ, ಈ ಸಮಿತಿಯಲ್ಲಿ ಯಾರ್ಯಾರು ಇರಬೇಕು ಎನ್ನತಕ್ಕ ಪ್ರಶ್ನೆ ಬರಲೇ ಇಲ್ಲ. ಎರಡನೆಯದಾಗಿ, ಈ ಸದನದ ಸಮಿತಿಯನ್ನು ರಚನೆ ಮಾಡಿದ್ದೇವೆ, ಅದರಲ್ಲಿ ನೀವುಗಳು ಇರುತ್ತೀರ ಎಂದು ಅವರನ್ನು ಕೇಳತಕ್ಕ ಪ್ರಶ್ನೆಯೂ ಬರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರೆಂದರೆ, ಆ ಸ್ಥಳಕ್ಕೆ ಸದನದ ಸಮಿತಿಯನ್ನು ನೇರವಾಗಿ ಕಳಿಸುತ್ತೇನೆ. ಆ ಸಮಿತಿಯವರು ಪರಿಶೀಲನೆ ಮಾಡಿ ಕೊಡುವ ವರದಿಯ ಆಧಾರದ ಮೇಲೆ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆ ಎನ್ನತಕ್ಕ ಮಾತನ್ನು ಸ್ಪಷ್ಟ ಪಡಿಸಿದ್ದಾರೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. ಆದರೆ ಮುಖ್ಯ ಮಂತ್ರಿಯವರು ನಾನು ಸದನದ ಸಮಿತಿಯನ್ನು ಮಾಡುತ್ತೇನೆ. ಸಮಿತಿಯ ವರದಿಯ ಆಧಾರದ ಮೇಲೆ ನ್ಯಾಯಾಂಗ ತನಿಖೆಯನ್ನು ಮಾಡುತ್ತೇನೆ. ಈ ರೀತಿಯಾಗಿ ಹೇಳಿದ್ದೆ, ಹೇಳಿದೆ ಎಂದು ಹೇಳುವುದು ಆಗಿದೆಯೇ ಹೊರತು ಸಮಿತಿಯನ್ನು ಇನ್ನೂ ನೇಮಕ ಮಾಡಿಲ್ಲ. ತಾವು ಸಮಿತಿಯನ್ನು ಶುಕ್ರವಾರ ಬೆಳಿಗ್ಗೆ ರಚನೆ ಮಾಡಿದ್ದರೆ ಭಾನುವಾರದೊಳಗೆ ವರದಿ ಬರುತ್ತಿತ್ತು, ಆದರೆ ತಾವು ಸಮಿತಿಯನ್ನು ರಚನೆ ಮಾಡುವ ಕೆಲಸ ಮಾಡಲಿಲ್ಲ. ಆದರೆ ಇತ್ತ ವಿರೋಧ ಪಕ್ಷದವರ ಖಾಲಿ ಕುರ್ಚಿಯ ಕಡೆಗೆ ಬೆರಳು ಮಾಡಿ ಪ್ರಧಾನ ವಿರೋಧ ಪಕ್ಷ, ಉಪ ಪ್ರಧಾನ ವಿರೋಧ ಪಕ್ಷವೆಂದು ಹೇಳುತ್ತಿರುವುದರಿಂದ ನಾವು ಇಲ್ಲಿ ಇರಬೇಕೋ ಅಥವಾ ಬೇಡವೋ ಎನ್ನತಕ್ಕ ಪ್ರಶ್ನೆ ಬಂದಿದೆ. ನಾವು ಇಲ್ಲಿ ಇರುವುದು ಬೇಡವೆಂದರೆ ನಾವೆಲ್ಲ ಗಂಭೀರವಾಗಿ ಹೊರಗಡೆ ಕುಳಿತುಕೊಳ್ಳುತ್ತೇವೆ. ಇಲ್ಲದಿದ್ದರೆ ತಾವು ನೇರವಾಗಿ ಈ ಒಂದು ಸದನದ ಸಮಿತಿಯನ್ನು ರಚನೆ ಮಾಡಿ. ಅದರಲ್ಲಿ ಅವರನ್ನೂ ಸೇರಿಸಿ. ಆದರೆ ಅವರುಗಳು ಅದರಲ್ಲಿ ಇರುತ್ತಾರೋ ಅಥವಾ ಬಿಡುತ್ತಾರೋ ಅದು ಅವರಿಗೆ ಸೇರಿರತಕ್ಕದ್ದು, ಆದರೆ ಸಮಿತಿಯನ್ನು ಮಾಡಬೇಕಾಗಿರುವ ಹೊಣೆ ನಿಮ್ಮದು. ಅದಕ್ಕಾಗಿ ತಾವು ಸಮಿತಿಯನ್ನು ರಚನೆ ಮಾಡುವ ಬಗ್ಗೆ ಪ್ರಕಟಣೆಯನ್ನು ಮಾಡಿ. ಸಮಿತಿಯಲ್ಲಿ ನಮ್ಮ ಜನತಾ ದಳದ ಮಿತ್ರರನ್ನು ಹಾಕಿ, ಅವರು ಇರುವುದಿಲ್ಲವೆಂದರೆ ಅದು ಬೇರೆ ಪ್ರಶ್ನೆ. ತಾವು ಇದರ ಬಗ್ಗೆ ತೀರ್ಮಾನಕ್ಕೆ ಬನ್ನಿ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸಮಿತಿಯನ್ನು ರಚನೆ ಮಾಡುತ್ತೀರೋ ಇಲ್ಲವೋ ಎನ್ನುವ ಬಗ್ಗೆ ಪ್ರಕಟಣೆ ಮಾಡಿ. ಇಲ್ಲದಿದ್ದರೆ ನಾವು ಹೊರಗಡೆ ಹೋಗಲು ಯೋಚಿಸಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಯಡಿಯೂರಪ್ಪನವರು, ವಾಟಾಳ್ ನಾಗರಾಜ್ ರವರು ಮತ್ತು ಪ್ರಾಚಾರ್ಯರಾದ ನಂಜುಂಡಸ್ವಾಮಿಯವರು ಹೇಳಿರತಕ್ಕದ್ದು ಬಹಳ ಸಹಜವಾಗಿದೆ. ನಾನು ಸದನದ ಸಮಿತಿಯನ್ನು ಮಾಡುವುದಿಲ್ಲವೆಂದು ಎಲ್ಲೂ ಹೇಳಲಿಲ್ಲ. ಆದರೆ ಅವರಿಗೆ ಆಫರ್‌ನ್ನು ಕೊಟ್ಟಿದ್ದೇನೆ, ಈಗ ತಾವುಗಳು ಸದನದ ಸಮಿತಿಯನ್ನು ಮಾಡಿ ಎಂದು ಹೇಳಿದ್ದೀರಿ, ನಾನು ಸದನದ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಳ್ಳುತ್ತೇನೆ, ಅಧ್ಯಕ್ಷರೆ, ದಯಮಾಡಿ ಸದನದ ಸಮಿತಿಯನ್ನು ಮಾಡಬೇಕು. ನಾನು ಈ ಸದನದಲ್ಲಿ ಕೊಟ್ಟಂಥ ಆಶ್ವಾಸನೆಯನ್ನು ಒಪ್ಪಿಕೊಳ್ಳುತ್ತೇನೆಂದು ಹೇಳುತ್ತೇನೆ. ಅದನ್ನು ಜಾರಿ ಮಾಡತಕ್ಕ ಪ್ರಶ್ನೆ ಇಲ್ಲ. ಇದನ್ನು ಒಂದು ರೀತಿ ರಾಜಕೀಯ ಸ್ಟಂಟ್‌ಗಾಗಿ ಮಾಡಿರತಕ್ಕದಲ್ಲ. ತಾವು ಈಗ ಒತ್ತಾಯ ಮಾಡಿದ್ದೀರಿ. ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾವೆಂದೂ ಈ ರೀತಿ ರಾಜಕೀಯ ಸ್ಟಂಟ್ ಎಂದು ಹೇಳಲಿಲ್ಲ. ನೀವು ಸುಮ್ಮನೆ ಪದಗಳನ್ನು ಸೇರಿಸುತ್ತಿದ್ದೀರಲ್ಲ ? ನೀವು ಕೊಟ್ಟಿರುವ ಭರವಸೆಯನ್ನು ಈಡೇರಿಸಿ ಅಥವಾ ಅದನ್ನು ಸ್ಪಷ್ಟವಾಗಿ ಮಾಡಿ ಎಂದು ಹೇಳುತ್ತಿದ್ದೇನೆ, ಇದನ್ನು ನಾಲ್ಕು ದಿನಗಳ ಮೊದಲು ಮಾಡಿದ್ದರೆ ಪರಿಸ್ಥಿತಿ ಇನ್ನೂ ಬಹಳ ಅನುಕೂಲವಾಗುತ್ತಿತ್ತು ಎಂದು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕೂ ಕೂಡ ಅವರುಗಳು ಒಪ್ಪಿಕೊಳ್ಳಲಿಲ್ಲ. ಅವರುಗಳು ಸದನದಲ್ಲಿರುವವರೆಗೆ ಅದನ್ನು ಒಪ್ಪಿಕೊಳ್ಳಲಿಲ್ಲ. ಅವರು ಒಪ್ಪಿಕೊಂಡಿದ್ದರೆ ನಾವು ಮಾಡುತ್ತಿದ್ದೆವು, ಅವರುಗಳು ಈಗ ಇಲ್ಲಿ ಇಲ್ಲ. ಆದರೆ ಅವರ ಪರವಾಗಿ, ಜನತೆಯ ಪರವಾಗಿ ಅವರ ಜವಾಬ್ದಾರಿಯನ್ನು ತಾವು ಹೊತ್ತುಕೊಂಡಿದ್ದೀರಿ, ತಮ್ಮ ಬೇಡಿಕೆ ಏನು ಇದೆ ಅದಕ್ಕೆ ಸ್ಪಂದಿಸುತ್ತೇನೆ ಎನ್ನುವುದು ನನ್ನ ಅಪೇಕ್ಷೆ.

ಮಾನ್ಯ ಅಧ್ಯಕ್ಷರೇ, ಈಗ ಪ್ರಥಮವಾಗಿ ಚುನಾವಣೆಯನ್ನು ಮಾಡಿದ್ದೇವೆ. ೩,೯೦೦ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತುಗಳ ಚುನಾವಣೆ ಮಾತ್ರ ಉಳಿದಿದೆ. ಸನ್ಮಾನ್ಯ ದೇಶಪಾಂಡೆಯವರು ಮತ್ತು ಅವರ ಸಂಗಡಿಗರ ಸಕಾರಾತ್ಮಕ ಧೋರಣೆ ಇಲ್ಲದಿದ್ದರೆ ಬಹುಶಃ by now we would have published the calendar of events for the Zilla Panchayats and Taluk Panchayats. The entire blame should go to them, ಇವತ್ತು ಸದನದಲ್ಲೇ ವಿಪ್ಲವವನ್ನು ಎಬ್ಬಿಸಿ ಬಿಟ್ಟರೆ ಅದರ ಪರಿಣಾಮವೇನಾಗುತ್ತದೆ ಎಂದು we wanted to make a study. We wanted some gap between the election of the Presidents and the Vice Presidents of the Grama Panchayats and also the next election. In view of certain issues raised by them. ಯಾವುದೇ ಕಾರಣವಿಲ್ಲದೆ ಇವತ್ತು ವಿಪ್ಲವವನ್ನು ಎಬ್ಬಿಸತಕ್ಕಂಥ ಒಂದು ಪಿತೂರಿಯ ಒಂದು ರೀತಿಯ ಸಿಗ್ನಲ್ ಇಂತಹ ಮಾತುಕತೆಗಳು ವಿರೋಧಪಕ್ಷದಿಂದ ಬಂದ ಕಾರಣ ನಾವು ಮುಂದುವರೆಸಿದ್ದೇ ಹೊರತು ಸರಿಯಾದಂತಹ ಮತ್ತು ಶಾಂತಿ ವ್ಯವಸ್ಥೆ ಇದೆ. ಚುನಾವಣೆಗಳನ್ನು ಯಶಸ್ವಿಯಾಗಿ ಶಾಂತಿ ಸಮಾಧಾನದಿಂದ ನಡೆಸಿದಂತಹ ಕೀರ್ತಿ ನಮಗೆ ಇದೆ. ಯಾವುದೇ ಚುನಾವಣೆಗಳು ಇರಬಹುದು, ನಾಳೆ ವಿಧಾನಸಭಾ ಚುನಾವಣೆಗಳು ಬಂದರೂ ಕೂಡ ಅದನ್ನು ಎದುರಿಸತಕ್ಕಂತಹ ಎದೆಗಾರಿಕೆ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕ ರಾಜ್ಯದಲ್ಲಿ ಇದೆ. ಆದುದರಿಂದ ಚುನಾವಣೆಗೆ ಹೆದರುವಂತಹ ಪ್ರಶ್ನೆ, ಅದು ಇಲ್ಲವೇ ಇಲ್ಲ. ಯಾವುದೇ ಸಂದರ್ಭದಲ್ಲೂ ಯಾವ ಚುನಾವಣೆ ಬಂದರೂ ಕೂಡ ಅದನ್ನು ನಿರ್ವಹಿಸುವಂತಹ ಕಾನೂನು ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿದೆ ಎನ್ನುವುದನ್ನು ಇವತ್ತು ಹೇಳಲಪೇಕ್ಷಿಸುತ್ತೇನೆ, ಇವತ್ತು ಯೋಜನೆಯ ವಿಚಾರವಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಒಂದು ರೀತಿಯ ಭಯ ಶಂಕೆ ಇದೆ. ಏಕೆಂದರೆ ಬಹಳ ದೊಡ್ಡ ಗಾತ್ರ ಯೋಜನೆಯನ್ನು ೧೯೯೩-೯೪ರಲ್ಲಿ ಮತ್ತು ೧೯೯೪-೯೫ರಲ್ಲಿ ನಾವು ಮಾಡಿದ್ದೇವೆ. ಅದನ್ನು ಸಾಧನೆ ಮಾಡುವಂತಹ ಶಕ್ತಿ ಇವರಿಗೆ ಇಲ್ಲ ಎಂಬ ಶಂಕೆ ಈ ಸದನದಲ್ಲಿ ಮತ್ತು ಈ ಸದನದ ಹೊರಗಡೆ ಬಂದಿರುವಂಥಾದ್ದು ಇದೆ. ಇವತ್ತು ಈ ಯೋಜನಾ ಗಾತ್ರವನ್ನು ದೊಡ್ಡ ರಾಜ್ಯಗಳೊಂದಿಗೆ ಕರ್ನಾಟಕವನ್ನು ಹೋಲಿಸಿ ನೋಡಿದರೆ, ಅಧ್ಯಕ್ಷರೇ ತಮಗೆ ಗೊತ್ತಿದೆ. ೧೯೯೩-೯೪ರಲ್ಲಿ ೩ ಸಾವಿರದ ೨೫ ಕೋಟಿ ರೂಪಾಯಿಗಳ ದೊಡ್ಡ ಯೋಜನೆಯನ್ನು ನಾವು ಕೈಗೊಂಡಿದ್ದೇವೆ. ೬೭೨

ರೂಪಾಯಿಗಳು per captaplan outlay, ಇಡೀ ರಾಷ್ಟ್ರದಲ್ಲೇ ಪ್ಲಾನ್ ಔಟ್‌ಲೇ ಒಂದನೇ ಸ್ಥಾನವನ್ನು ಪಡೆದಿದ್ದೇವೆ. ಒಂದನೇ ಸ್ಥಾನವನ್ನು ಪಡೆಯುತ್ತೇವೆಂದು ಹೇಳಿ ೩ ಸಾವಿರದ ೨೫ ಕೋಟಿ ರೂಪಾಯಿಗಳ ದೊಡ್ಡ ಗಾತ್ರದ ಯೋಜನೆಯನ್ನು ಹಾಕಿದ್ದೇವೆ. ಈ ಒಂದು ವರ್ಷದಲ್ಲಿ ಅನೇಕ ಕಷ್ಟಗಳ ಸಂಪನ್ಮೂಲನದ ದೃಷ್ಟಿಯಿಂದ ರಾಷ್ಟ್ರದ ಕೆಲವು ವ್ಯಾಪಕವಾವಂತಹ ಒಂದು ಆರ್ಥಿಕ ನೀತಿಯ ಬದಲಾವಣೆಯಿಂದ ಬಂದರೂ ಕೂಡ ಕೊಟ್ಟಿರುವಂತಹ ಪರ್ ಕ್ಯಾಪಿಟ ಗನೇ ಸ್ಥಾನವನ್ನು ನಾವು ಗಳಿಸುತ್ತೇವೆ. ಹಿಂದಿನ ಔಟ್‌ಲೇಗಿಂತ ಶೇ. ೫೦ರಷ್ಟು ಹೆಚ್ಚು ನಾವು ಪ್ಲಾನ್ ಔಟ್‌ಲೇ ಮಾಡಿದ್ದೇವೆ. ಅದನ್ನು ನಾವು ಸಾಧನೆ ಮಾಡುತ್ತೇವೆಂದು ಹೇಳಿದ್ದೇನೆ. ಅಂತಹ ಕೊಟ್ಟಿರುವಂತಹ ಒಂದು ಪ್ಲಾನ್ ಔಟ್‌ಲೇಯನ್ನು ನಾವು ಗಳಿಸತಕ್ಕಂತಹ ಕೆಲಸವನ್ನು ನಾವು ಮಾಡಿದ್ದೇವೆ ಈ ಕೆಲಸ ಇವತ್ತು ನಮ್ಮ ಪಕ್ಷದ ಒಂದು ಅಧಿಕಾರದಿಂದ ಆಗಿದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. ನಿನ್ನೆ ಇವತ್ತು ಬಂದಂತಹ ವರ್ತಮಾನದ ಪ್ರಕಾರ ಅನೇಕ ದೊಡ್ಡ ಗಾತ್ರದ ಪ್ಲಾನ್ ಮಾಡಿದ ಮೇಲೆ ಅದನ್ನು ಸಾಧನೆ ಮಾಡಲಾಗದೆ ಅನೇಕ ಬಾರಿ ಕೇಂದ್ರದ ಹಣ ಸಹಾಯ ನಮಗೆ ತಪ್ಪಿಹೋಗುತ್ತದೆ. Central assistance, we lose by our ambitious plan. ಆ ಭಯ ನನಗೂ ಕೂಡ ಭಾದಿಸುತ್ತಿತ್ತು. ಮಿಡ್ ಟರ್ಮ್‌ನಲ್ಲಿ ರಿವ್ಯೂ ಮಾಡುವಾಗ ಕೂಡ ಈ ಭಯ ಪೂರ್ತಿ ನಿವಾರಣೆಯಾಗಿರಲಿಲ್ಲ. ಪ್ಲಾನಿಂಗ್ ಬೋರ್ಡ್‌ಗೆ ನಾವು ಪ್ರಸ್ತಾವನೆಯನ್ನು ಕೊಡುವಾಗ ಕೂಡ ಈ ಭಯದ ವಾತಾವರಣವನ್ನು ಸ್ಪಷ್ಟವಾಗಿ ತಿಳಿಸಿದ್ದೇವೆ. ಆದರೆ ಪ್ಲಾನಿಂಗ್ ಬೋರ್ಡ್ ನೀವು ಪ್ಲಾನನ್ನು ಕಟ್ ಮಾಡಬೇಕಾದಂತಹ ಅವಶ್ಯಕತೆ ಇಲ್ಲ ಎಂದು ನಮಗೆ ಹೇಳಿತು. ಇಡೀ ರಾಷ್ಟ್ರದ ಅನೇಕ ಆರ್ಥಿಕ ತಜ್ಞರನ್ನು ಒಳಗೊಂಡಂತಹ ಪ್ಲಾನಿಂಗ್ ಬೋರ್ಡ್ ಆ ನಿರ್ಣಯ ಕೂಡ ಕೊಟ್ಟಿತ್ತು. ಆದರೆ ಇವತ್ತು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ, ಕೇಂದ್ರದಲ್ಲಿ ಕೇಂದ್ರದ ಪ್ಲಾನಿಂಗ್ ಆಯೋಗ ಮತ್ತು ಎಲ್ಲರ ಹತ್ತಿರ ಸಮಾಲೋಚನೆ ಮಾಡಿದ ಮೇಲೆ, ಕೇಂದ್ರದಿಂದ ಬರತಕ್ಕಂತಹ ಯಾವುದೇ ಸೆಂಟ್ರಲ್ ಅಸಿಸ್ಟೆಂಟ್‌ನ್ನು ನಾವು ಕಳೆದುಕೊಳ್ಳುವುದಿಲ್ಲ. ಅದನ್ನು ನೂರಕ್ಕೆ ನೂರು ಪಾಲು ಉಪಯೋಗ ಮಾಡತಕ್ಕಂತಹ ಒಂದು ಆರ್ಥಿಕ ಸುಭದ್ರತೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆಯಾಗಿದೆ ಎನ್ನುವುದನ್ನು ಬಹಳ ಸಂತೋಷದಿಂದ ಈ ಸದನಕ್ಕೆ ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಏಕೆಂದರೆ ಅನೇಕ ಜನ ಹೇಳಿದರು, ನೀವು ಪ್ಲಾನ್ ಕಟ್ ಮಾಡಿ, ಈ ಪ್ಲಾನ್ ಕಟ್ ಮಾಡದೇ ಇದ್ದರೆ, ನಿಮ್ಮ ಸೆಂಟ್ರಲ್ ಅಸಿಸ್ಟೆಂನ್ಸ್ ಹೊರಟು ಹೋಗುತ್ತದೆ ಈಗಲೇ ಪ್ಲಾನ್ ಕಟ್ ಮಾಡಿ ಎಂದು ಅನೇಕ ಜನ ಸೂಚನೆಯನ್ನು ಕೊಟ್ಟರು. ಆದರೂ ಕೂಡ ನೀವು ಹುಚ್ಚು ಸಾಹಸ ಅಂದುಕೊಳ್ಳಿ ಅಥವಾ ಮಕ್ಕಳ ಆಟಿಕೆ ಎಂದುಕೊಳ್ಳಿ. ಆದರೆ ಆ ಹುಚ್ಚು ಸಾಹಸ, ಮಕ್ಕಳಾಟಿಕೆ ಇವತ್ತು, it has yielded results and I am in a position to utilise the central assistance without a plan cut 100%. ಈ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ಇವತ್ತು ೧೯೯೪-೯೫ರಲ್ಲಿ...

ಶ್ರೀ ಬಿ. ಎಸ್. ಯಡಿಯೂರಪ್ಪ.—೩ ಸಾವಿರದ ೨೫ ಕೋಟಿ ರೂಪಾಯಿಯಲ್ಲಿ ಎಷ್ಟು ಖರ್ಚಾಗಿದೆ ಎಂದು ಫಿಗರ್ ಹೇಳುತ್ತೀರ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಖರ್ಚಾಗದೇ ನಾವು ಹೇಳುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲ ನೀವು ೩ ಸಾವಿರದ ೨೫ ಕೋಟಿ ರೂಪಾಯಿ ನಮ್ಮ ಪ್ಲಾನ್ ಔಟ್‌ಲೇ ಎಂದು ಹೇಳಿಬಿಟ್ಟು ಅದರಲ್ಲಿ ಸುಮಾರು ೮-೯ ನೂರು ಕೋಟಿ ಸಂಪನ್ಮೂಲ ಮಾಡದೇ ಇರಬೇಕಾದರೆ ಇಡೀ ದೇಶಕ್ಕೆ ಮೊದಲನೇ ಸ್ಥಾನಕ್ಕೆ ಹೇಗೆ ಬರುತ್ತೀರಿ ಸ್ವಾಮಿ. ಈ ಸ್ಟೇಜ್‌ನಲ್ಲಿ ನೀವು ಹೇಳಬೇಕು. ನೀವು ಹೇಳುತ್ತೀರಿ ಎಂದು ನಾವು ಕಾಯುತ್ತಿದ್ದೇವೆ. ೩ ಸಾವಿರದ ೨೫ ಕೋಟಿ ರೂಪಾಯಿಯಲ್ಲಿ ತಾವು ಪ್ರಾವಿಸ್ ಮಾಡಿದಂತೆ ಎಷ್ಟು ಖರ್ಚು ಮಾಡಿದ್ದೀರಿ. ನಿಮಗೆ ಎಷ್ಟು ಗಳಿಸುವುದಕ್ಕೆ ಸಾಧ್ಯವಾಗಿದೆ ?

SRI M. VEERAPPA MOILY.—We are going to spend Rs. 3025 crores under this plan. ಅದಕ್ಕೆ ಎಲ್ಲಾ ಆಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತೂ ಸೇರಿ ೨ ದಿವಸ ಇರಬೇಕಾದರೆ ನಾವು ಇಲ್ಲಿ ಕುಳಿತಿದ್ದೇವೆ, ಇನ್ನು ಒಂದೇ ದಿವಸ ಇರುವಂಥಾದ್ದು. ನೀವು ಒಬ್ಬ ಮುಖ್ಯಮಂತ್ರಿಗಳಾಗಿ ಈ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ. ೩ ಸಾವಿರದ ೨೫ ಕೋಟಿ ರೂಪಾಯಿಗಳಲ್ಲಿ ಎಷ್ಟು ಖರ್ಚಾಗಿದೆ. ಈಗ ಮಾರ್ಚ್ ಕೊನೆಯಲ್ಲಿ ತಾವು ಇದ್ದೀರಿ, ತಮ್ಮ ಡ್ಯೂಟಿ ತಾನೇ ? ಬಜೆಟ್ ಭಾಷಣದಲ್ಲಿಯೂ

ನೀವು ಹೇಳಿಲ್ಲ, ಈಗಲಾದರೂ ಹೇಳಿ. ಈಗ ಮಾರ್ಚ್ ತಿಂಗಳ ಕೊನೆಯಲ್ಲಿ ಇದ್ದೇವೆ. ೩ ಸಾವಿರದ ೨೫ ಕೋಟಿ ರೂಪಾಯಿಯಲ್ಲಿ ಸುಮಾರು ೯೦೦ ಕೋಟಿ ರೂಪಾಯಿ ಕೊಡುತ್ತಿರಬೇಕಾದರೆ ಇಡೀ ದೇಶದಲ್ಲಿ ಮೊದಲನೇ ಸ್ಥಾನದಲ್ಲಿ ಇದ್ದೇವೆ ಎಂದು ಹೇಳುವಂಥಾದ್ದು ನಾಚಿಕೆಗೇಡಿತನದ ಸಂಗತಿ. ಇದು ಅಪಮಾನವಾಗುತ್ತದೆ. ದಯಮಾಡಿ ತಾವು ಅರ್ಥ ಮಾಡಿಕೊಳ್ಳಿ. ಇದು ದ್ರೋಹ ಮಾಡಿದಂತಾಗುತ್ತದೆ. ಈ ರೀತಿ ಅಂಕಿ ಅಂಶ ಹೇಳಬೇಡಿ. ಈಗಲಾದರೂ ಸತ್ಯ ಹೇಳಿ.

SRI M. VEERAPPA MOILY.—When I say that I am going to fully utilise the central assistance, that means to say that I am fully performing my plan. ಆದುದರಿಂದ ನಮಗೆ ಬೇರೆ ಏನೂ ಬೇಕಾಗಿಲ್ಲ. ೧೯೯೨-೯೩ರಲ್ಲಿ ನಮ್ಮ ಪ್ಲಾನ್ ೨ ಸಾವಿರ ೩೨.೯೪ ಕೋಟಿ ರೂಪಾಯಿ ಆಗಿದ್ದರೆ, ೧೯೯೩-೯೪ಕ್ಕೆ ರಿವೈಸ್ಡ್ ಎಸ್ಟಿಮೇಟ್ I am telling you the revised estimates, not the before-estimate. According to the revised estimate, it is Rs. 3025·47 lakhs. ಎಂದರೆ ೪೭ ಲಕ್ಷ ಹೆಚ್ಚು ಖರ್ಚು ಮಾಡುತ್ತಿದ್ದೇವೆ. It is not Rs. 3,025 crores only. We are spending Rs. 47 lakhs.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾವಾಗ ಖರ್ಚು ಮಾಡುತ್ತಿದ್ದೀರಿ.

SRI M. VEERAPPA MOILY.—By the end of 31-3-94. It is according to the revised estimate, I am telling you. Don't worry.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದೇ ಹಸಿ ಸುಳ್ಳನ್ನು ಅವತ್ತಿನಿಂದ ಇವತ್ತಿನವರೆಗೂ ಹೇಳಿಕೊಂಡು ಬರುತ್ತಿದ್ದೀರಿ. ಒಂದು ವರ್ಷದಿಂದ ಹೇಳುತ್ತಿದ್ದೀರಿ. ಇನ್ನು ಒಂದು ದಿವಸದಲ್ಲಿ ನೀವು ಹೇಗೆ ಮಾಡುತ್ತೀರಿ. ಬಹುಶಃ ನಮ್ಮ ಸ್ನೇಹಿತರು ಆ ಕಡೆ ಕುಳಿತವರು ನೀವು ಕೇಳಿದರೆ ಇನ್ನು ೨ ದಿವಸದಲ್ಲಿ ೩ ಸಾವಿರ ೨೫ ಕೋಟಿ ಹೇಗೆ ತೆಗೆದುಕೊಳ್ಳುತ್ತೀರಿ. ೯೦೦ ಕೋಟಿ ರೂಪಾಯಿ ಷಾರ್ಟ್ ಇದೆ. ನಿಮ್ಮ ಹತ್ತಿರ ದುಡ್ಡು ಇಲ್ಲ. ಬಿಲ್‌ಗಳು ಪಾವತಿಯಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಅದೇ ಶಾನುಭೋಗರ ಲೆಕ್ಕವನ್ನು ಇಟ್ಟುಕೊಂಡಿದ್ದೀರಿ, ದಯಮಾಡಿ ಹೊಸ ಶಾನುಭೋಗರ ಲೆಕ್ಕ ಮಾಡಿಕೊಳ್ಳಿ.

SRI B. S. YADIYURAPPA.—As on to-day, ಪಿಡಬ್ಲ್ಯೂಡಿ ಇರಿಗೇಷನ್‌ನಲ್ಲಿ ಎಷ್ಟು ಬಾಕಿ ಇದೆ, ಎಷ್ಟು ಕೊಟ್ಟಿದ್ದೀರಿ. ಹೀಗೆ ಹೇಳಿದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನೇ ಹೇಳುತ್ತೇನೆ. ಕೆಲವು ಮೇಜರ್ ಡಿಪಾರ್ಟ್‌ಮೆಂಟ್‌ದು ಸಾಧನೆ ಏನು ಎಂದು ಆ ಪಟ್ಟಿಯನ್ನು ಹೇಳುತ್ತೇನೆ. ನಂತರ ನಿಮ್ಮ ಕಮಿಟಿ ಸಿಸ್ಟಂ ಇದೆ. ಈಗ ಇದೆಲ್ಲಾ ಟ್ರಾನ್ಸ್‌ಫರೆನ್ಸ್ ಜಾಸ್ತಿಯಾಗಿದೆ. ಏನು ನಾವು ಆಷಾಢಭೂತಿ ತರಹ ಮಾಡುವುದಕ್ಕೆ ಆಗುವುದಿಲ್ಲ ಎಲ್ಲಾವನ್ನು ಕೂಡ, it is open to you, accountable to you. ಏನೂ ಭಯ ಪಡುವ ಅವಶ್ಯಕತೆ ಇಲ್ಲ. Revised estimate I am telling you, not the before-estimate. In 1993-94 the revised estimate is Rs. 3025 crores + Rs. 47 lakhs. ಆದುದರಿಂದ, ತಮಗೆ ಗೊತ್ತಿರುವ ಪ್ರಕಾರ ಪ್ರಮುಖವಾದ ಘಟಕದಲ್ಲಿ ಕೂಡ ಅಂದರೆ ೧೯೯೨-೯೩ ರಲ್ಲಿ ೪೭೦ ಕೋಟಿ ರೂಪಾಯಿಗಳನ್ನು ನೀರಾವರಿಯಲ್ಲಿ ಖರ್ಚು ಮಾಡಿದ್ದರೆ, ೧೯೯೩-೯೪ ರಲ್ಲಿ ೬೨೦ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. That is 32% more than 1992-93. ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ೩೨ ಪರ್ಸೆಂಟ್ ಹೆಚ್ಚಳ ಆಗಿದೆ. ಇಷ್ಟು ಪ್ರಮಾಣದ ಹೆಚ್ಚಳ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇರಿಗೇಷನ್‌ನಲ್ಲಿ ಖರ್ಚು ಮಾಡಿದ್ದು ಇಲ್ಲ. ಆ ಸಾಧನೆಯನ್ನು ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಮಾಡಿದೆ ಎಂಬುದನ್ನು ದಯಮಾಡಿ ತಾವು ವಿಚಾರ ಮಾಡಬೇಕಾಗುತ್ತದೆ. ಪಿ. ಡಬ್ಲ್ಯೂಡಿ. ಇಲಾಖೆಯಲ್ಲಿ ೨೨೪ ಕೋಟಿ ರೂಪಾಯಿಗಳನ್ನು ೧೯೯೨-೯೩ ರಲ್ಲಿ ೨೩೩ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಜಿಲ್ಲಾ ಪರಿಷತ್ ಸ್ಟೇಟ್ ಪ್ಲ್ಯಾನ್ ಪೋರ್ಷನ್ ೨೮೧ ಕೋಟಿ ರೂಪಾಯಿ ೧೯೯೨-೯೩ ರಲ್ಲಿ ಮಾಡಿದ್ದರೆ ೨೮೧ ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ, ಆಶ್ರಯ ಮತ್ತು ಅಂಬೇಡ್ಕರ್ ಯೋಜನೆ—ಎಂದರಲ್ಲಿ ನಾವು ೧೯೯೨-೯೩ ರಲ್ಲಿ ೩೦ ಕೋಟಿ ರೂಪಾಯಿ ಖರ್ಚು ಮಾಡಿದ್ದರೆ, ಅದು ಕೂಡ ನನ್ನ ಅವಧಿಯಲ್ಲಿ ಕೊಟ್ಟಂತಹ ಹಣ ೧೯೯೩-೯೪ ರಲ್ಲಿ ೧೨೦ ಕೋಟಿ

ರೂಪಾಯಿ ನಾವು ಖರ್ಚು ಮಾಡಿದ್ದೇವೆ. Under Ashraya, that is 300% more than 1992-93. ಈ ಮುನ್ನೂರು ಪರ್ಸೆಂಟ್ ಜಾಸ್ತಿ. ಬಡವರ ಮನೆಗೆ ಆಶ್ರಯ ಮತ್ತು ಅಂಬೇಡ್ಕರ್ ಅಥವಾ ಯಾವುದೇ ಒಂದು ಬಡವರಿಗೆ ಮನೆ ಕಟ್ಟಿ ಕೊಡುವಂತಹ ಕಾರ್ಯಕ್ರಮಗಳಲ್ಲಿ ಮುನ್ನೂರು ಪರ್ಸೆಂಟ್ ಜಾಸ್ತಿ, ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇನತ್ತಿಗೂ ಕೂಡ, ಎಂದಿಗೂ ಕೂಡ ಆಗಿಲ್ಲ. ಇವು ಬಡವರಿಗೆ ಅನುಕೂಲ ಆಗುವ ಕಾರ್ಯಕ್ರಮಗಳು. ಅರ್ಬನ್ ವಾಟರ್ ಸಪ್ಲೇನಲ್ಲಿ ೧೯೯೨-೯೩ ರಲ್ಲಿ ೪೦ ಕೋಟಿ ರೂಪಾಯಿ ಖರ್ಚು ಆಗಿದ್ದರೆ, ೧೯೯೩-೯೪ ರಲ್ಲಿ ೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಅದು ೨೫ ಪರ್ಸೆಂಟ್ ಹೆಚ್ಚು. ಆಶ್ರಯದಲ್ಲಿ ೧೯೯೨-೯೩ ರಲ್ಲಿ ೧೩.೭೦ ಕೋಟಿ ರೂಪಾಯಿ ಖರ್ಚು. ನೀವು ಮಾರ್ಕ್ ಮಾಡಿಕೊಳ್ಳಿ ಯಡಿಯೂರಪ್ಪನವರೇ, ನಮ್ಮ ಪರವಾಗಿ ನೀವು ಭಾಷಣ ಮಾಡಬೇಕು. It is very much announced and proclaimed. ೧೯೯೩-೯೪ ರಲ್ಲಿ ೩೮ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. That is 177% more than the last year. ಇದು ಇಂಡಸ್ಟ್ರಿಯಲ್ ಸಬ್ಸಿಡಿಯಲ್ಲಿ ೧೯೯೨-೯೩ ರಲ್ಲಿ ೧೪.೯೦ ಕೋಟಿ ರೂಪಾಯಿ ಖರ್ಚು ಆಗಿದ್ದರೆ, ೧೯೯೩-೯೪ ರಲ್ಲಿ ೩೦ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

That is 101% more than the last year. Development Corporations of social welfare sectors ಸಮಾಜ ಕಲ್ಯಾಣ ಇಲಾಖೆಯಲ್ಲಿ ಬಡವರಿಗೆ ಅನುಕೂಲವಾಗುವಂತಹ ಪರಿಸ್ಥಿತಿಯಲ್ಲಿ ೧೯೯೨-೯೩ರಲ್ಲಿ ೯.೨೦ ಕೋಟಿ ರೂಪಾಯಿ ಖರ್ಚು ಆಗಿದ್ದರೆ. ಈ ಇಲಾಖೆಯ ಅಭಿವೃದ್ಧಿಗೆ ೧೯೯೩-೯೪ರಲ್ಲಿ ೧೭.೬೮ ಕೋಟಿ ರೂಪಾಯಿ ಆಗಿದೆ, ೯೨ ಪರ್ಸೆಂಟ್ ಹೆಚ್ಚು ಅನೇಕ ಬಾಬ್ತಿನಲ್ಲಿ ಪ್ರತ್ಯೇಕವಾಗಿ ಆಯಾ ಇಲಾಖೆ ಬೇಡಿಕೆ ಬಂದಾಗ ನಾವು ಅದನ್ನು ಚರ್ಚೆ ಮಾಡುತ್ತೇವೆ. ಆಗ ಅದನ್ನು ಚರ್ಚೆ ಮಾಡಬಹುದು ತಮ್ಮ ಕಮಿಟಿಗಳಲ್ಲಿ ಈ ವಿಷಯದ ಚರ್ಚೆ ಕೂಡ ಮುಂದೆ ನಡೆಸಿಕೊಂಡು ಹೋಗಬಹುದು.

PROF. M. D. NANJUNDA SWAMY.—I was waiting for the figures relating to Agriculture and Industry.

ಶ್ರೀ ಎಂ. ವೀರಪ್ಪ ಮೊಯಿಲಿ.—೧೯೯೩-೯೪ರ ಒಂದು ಅಭಿವೃದ್ಧಿ ಪ್ರಗತಿಯ ಹಿನ್ನೆಲೆಯನ್ನು ನಾವು ಗಮನದಲ್ಲಿಟ್ಟುಕೊಂಡು ೧೯೯೪-೯೫ಕ್ಕೆ ೩,೭೭೫ ಕೋಟಿ ರೂಪಾಯಿಗಳ ಯೋಜನೆಯನ್ನು, ಯೋಜನಾ ಆಯೋಗದಿಂದ ಮಂಜೂರು ಮಾಡಿಸಿಕೊಂಡು ಬಂದಿದ್ದೇವೆ. ನಮ್ಮ ಸ್ಟೇಟ್ ಪ್ಲಾನ್ ೩,೩೫೦ ಕೋಟಿ ರೂಪಾಯಿ ಆಗುತ್ತದೆ. ಇದರಿಂದಾಗಿ ಪರ್ ಕ್ಯಾಪಿಟ್ ಪ್ಲಾನ್ ಔಟ್‌ಲೇ ೭೨೮ ರೂಪಾಯಿ ಆಗುತ್ತದೆ. That is again the Per capita income ಈ ರಾಷ್ಟ್ರದ ಎಲ್ಲಾ ರಾಜ್ಯಗಳಿಗೆ ಹೋಲಿಸಿದರೆ We continue to occupy Number One position in the country even in 1994-95. ಇದನ್ನೂ ಕೂಡ ನಾವು ಸಾಧನೆ ಮಾಡಿ ತೋರಿಸುತ್ತೇವೆ. ಈಗ ರ್‍ಯಾಂಕ್‌ವೈಸ್ ತಮಗೆ ಹೇಳುವುದಾದರೆ, ಕರ್ನಾಟಕದ ಪರ್‌ಕ್ಯಾಪಿಟ್ ಪ್ಲಾನ್ ಔಟ್‌ಲೇನಲ್ಲಿ ಒಂದನೇ ಜಾಗದಲ್ಲಿವೆ. ಪಂಜಾಬ್‌ಗೆ ಎರಡನೇ ಸ್ಥಾನ, ಹರಿಯಾಣಗೆ ಮೂರನೇ ಸ್ಥಾನ. ಗುಜರಾತ್ ನಾಲ್ಕನೆ ಸ್ಥಾನ, ಇದು ೧೯೯೩-೯೪ನೇ ಸಾಲಿನಲ್ಲಿ. ಇನ್ನು ೧೯೯೪-೯೫ರಲ್ಲೂ ಕೂಡ ಕರ್ನಾಟಕವು ಒಂದನೇ ಸ್ಥಾನದಲ್ಲಿ, ಹರಿಯಾಣಗೆ ಎರಡನೇ ಸ್ಥಾನ, ಒರಿಸ್ಸಾಗೆ ಮೂರನೇ ಸ್ಥಾನ, ಪಂಜಾಬ್‌ಗೆ ನಾಲ್ಕನೆ ಸ್ಥಾನ ಗುಜರಾತ್ ಐದನೇ ಸ್ಥಾನದಲ್ಲಿ ಇವೆ. ಅದುದರಿಂದ ಒಂದು ರೀತಿಯ ಭಯ ಆತಂಕಗಳು ಇದ್ದರೂ ಕೂಡ ಈ ರೀತಿ ಒಂದು ಸಾಧನೆಯನ್ನು ಮಾಡಲು ಸಾಧ್ಯವಾಯಿತು. ಆದ್ದರಿಂದ ಇವತ್ತು ನನ್ನ ಬಡ್ಜೆಟ್‌ನಲ್ಲಿ ಹೇಳಿದ ಪ್ರಕಾರ ನಾವು ಇದನ್ನು ಸಾಧನೆ ಮಾಡುತ್ತೇವೆ. ಮಾನ್ಯ ಯಡಿಯೂರಪ್ಪನವರು ಬೌನ್ಸಿಂಗ್ ಆಫ್ ಚೆಕ್ಸ್ ಟ್ರೆಷರಿನಲ್ಲಿ ಆಗುತ್ತಿದೆ ಎಂದು ಹೇಳಿದರು. This alligation is not true. ನಮ್ಮ ವೇಸ್ ಅಂಡ್ ಮೀನ್ಸ್‌ನಲ್ಲಿ ಸ್ವಲ್ಪ ಏರಿಳಿತಗಳು ಆಗುತ್ತವೆ. ಸಮುದ್ರದಲ್ಲಿ ಯಾವ ರೀತಿಯಲ್ಲಿ ಏರಿಳಿತಗಳು ಆಗುತ್ತವೆ ಅದೇ ರೀತಿ ಸಂಪನ್ಮೂಲಗಳ ಸಂಗ್ರಹಣೆಯಲ್ಲಿಯೂ ಸಹ ಏರಿಳಿತಗಳಾಗುತ್ತವೆ. ೩,೦೨೫ ಕೋಟಿ ರೂಪಾಯಿಗಳನ್ನು ನಾವು ಏಪ್ರಿಲ್ ಒಂದನೇ ತಾರೀಖು ಟ್ರೆಷರಿನಲ್ಲಿ ಇಡುತ್ತಿಲ್ಲ. ಈ ಸಂಪನ್ಮೂಲಗಳನ್ನು ಸಂಪಾದನೆ ಮಾಡಬೇಕಾಗಿದೆ. ಕೆಲವು ತಿಂಗಳುಗಳಲ್ಲಿ ಹೆಚ್ಚು ಸಂಪನ್ಮೂಲಗಳು ಬರುತ್ತವೆ. ಕೆಲವು ತಿಂಗಳುಗಳಲ್ಲಿ ಕಡಿಮೆ ಸಂಪನ್ಮೂಲಗಳು ಬರುತ್ತವೆ. ಅವನ್ನು ಸರಿದೂಗಿಸಿಕೊಂಡು ಮುಂದೆ ಹೋಗಬೇಕಾದಂಥ ಅವಶ್ಯಕತೆ ಕೂಡ ಇದೆ. ಆದ್ದರಿಂದ ಖರ್ಚನ್ನು ರೆಗ್ಯುಲೇಟ್ ಮಾಡತಕ್ಕ ಒಂದು ಪ್ರಕ್ರಿಯೆ ಎಲ್ಲಾ ಸಂದರ್ಭದಲ್ಲೂ ಇರುತ್ತದೆ. ಅದು ನೀವು ಅಧಿಕಾರಕ್ಕೆ ಬಂದರೂ ಆಗುತ್ತದೆ. ನಾವು ಅಧಿಕಾರದಲ್ಲಿದ್ದರೂ ಆಗುತ್ತದೆ. ಈ ರೆಗ್ಯುಲೇಷನ್‌ನ್ನು ನಾವು ಮಾಡಲೇ ಬೇಕಾಗುತ್ತದೆ.

ಇದು ಅಣೆಕಟ್ಟೆಯಲ್ಲಿ ನೀರು ತುಂಬಿಸಿದಾಗ ಕಾಲುವೆಗಳ ಆ ನೀರು ಬಿಡಲು ಯಾವ ರೀತಿ ರೆಗ್ಯುಲೇಟ್ ಮಾಡುತ್ತೇವೆ, ಅದೇ ರೀತಿ ರೆಗ್ಯುಲೇಟ್ ಮಾಡಬೇಕಾಗಿದೆ. ಈ ರೀತಿ ರೆಗ್ಯುಲೇಟ್ ಮಾಡುವುದರಲ್ಲಿ ಯಾವ ರೀತಿ ಚಾಣಾಕ್ಷತನ ಹಾಗೂ ಪರಿಣತಿ ಉಪಯೋಗ ಮಾಡುತ್ತೇವೆ ಅದನ್ನು ಹೊಂದಿಕೊಂಡು ಪರಿಸ್ಥಿತಿ ಅವಲಂಬಿಸಿರುತ್ತದೆ. ಇನ್ನು ಅಗ್ರಿಕಲ್ಚರ್ ಮತ್ತು ಅದರ್ ಸೆಕ್ಟರ್‌ಗಳ ಬಗ್ಗೆ ಹೇಳುವುದಾದರೆ, ೧೯೯೩-೯೪ರಲ್ಲಿ ೨೦೯.೨೬ ಕೋಟಿರೂಪಾಯಿಗಳನ್ನು ನಾವು ಪ್ಲಾನ್‌ನಲ್ಲಿ ಖರ್ಚು ಮಾಡಿದ್ದೇವೆ. ಕೈಗಾರಿಕೆಗಳಿಗೆ ೨೧೨.೪೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. This is again an all-time high. ಕೆಲವು ಪ್ರಶ್ನೆಗಳನ್ನು ಮಾನ್ಯ ಯಡಿಯೂರಪ್ಪನವರು ಹಾಗೂ ಅನೇಕ ಸನ್ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. Fake labels, liquor trade and duplicate receipts in KSRTC. ಇದನ್ನು ಕಟ್ಟುನಿಟ್ಟಾಗಿ ಕಂಡುಹಿಡಿಯುತ್ತೇವೆ. ಇದನ್ನು ನಿಗ್ರಹಿಸುತ್ತೇವೆ. ಯಾವುದೇ ವ್ಯಕ್ತಿ ಅಥವಾ ಶಕ್ತಿಗಳು ಇದ್ದರೂ ಕೂಡ ಅಂಜದೆ ನಾವು ಉಗ್ರ ಕ್ರಮಗಳನ್ನು ಬೇರೆ ಬೇರೆ ಹಂತಗಳಲ್ಲಿ ತೆಗೆದುಕೊಳ್ಳುತ್ತೇವೆ. ಇನ್ನು ಬೇರೆ ಕೆಲವು ವಿಚಾರಗಳನ್ನು ನಾನು ಸದನದ ಮುಂದೆ ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೆ. ಇ. ಬಿ.ಗೆ ಎಷ್ಟು ಹಣ ಇಟ್ಟಿದ್ದೀರಿ ? ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪಮೊಯಿಲಿ.—ಅದನ್ನೂ ಹೇಳುತ್ತೇನೆ. ನಾನು ಕೆಲವು ಕನ್‌ಸೆಷನ್‌ಗಳನ್ನು ಈ ಹಿಂದೆ ಘೋಷಣೆ ಮಾಡಿದ್ದೇನೆ, ಅದರಲ್ಲಿ ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಕ್ರೀಡೆಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಈ ಒಂದು ಕರ್ನಾಟಕರಾಜ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಕ್ರೀಡೆಗಳಿಗೆ, in addition to what I have already announced, ಜಿಲ್ಲಾ ವಲಯಕ್ಕೆ ಶೇ. ೨ರಷ್ಟು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯಕ್ರಮಗಳಿಗೆ ಗ್ರಾಮಗಳಲ್ಲಿ ಸಂಸ್ಕೃತಿ ಮತ್ತು ಕ್ರೀಡೆಗಳಿಗಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಮೀಸಲಿರಿಸಲು ತೀರ್ಮಾನ ಕೈಗೊಂಡಿದ್ದೇನೆ. ಶೇ. ೨ರಷ್ಟು ಹಣವನ್ನು ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಕ್ರೀಡೆಗಳ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದೇವೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಅನೇಕ ವರ್ಷಗಳಿಂದ ಬರೀ ೧೯.೦೦ ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಕನ್ನಡ ಸಾಹಿತ್ಯ

೨-೧೦ ಪಿ. ಎಂ.

ಪರಿಷತ್ತಿನ ಇತಿಹಾಸದಲ್ಲೇ ನಾವು ಪ್ರಪ್ರಥಮವಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ೧೮ ಲಕ್ಷ ರೂಪಾಯಿಗಳನ್ನು ಮಾಮೂಲಾಗಿ ಬಿಡುಗಡೆ ಮಾಡುವುದರ ಜೊತೆಯಲ್ಲಿ ೧೯೯೩-೯೪ರ ಸಾಲಿನಲ್ಲಿ ಹೆಚ್ಚುವರಿಯಾಗಿ ೨೦ ಲಕ್ಷ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ಸದರಿ ಸಾಹಿತ್ಯ ಪರಿಷತ್ತು ತೆಗೆದುಕೊಂಡಿರುವ ತ್ರೈವಾರ್ಷಿಕ ಯೋಜನೆಗಳಿಗಾಗಿ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಇದು ಅಲ್ಲದೆ ಮಂಡ್ಯದಲ್ಲಿ ನಡೆದಂತಹ ಸಾಹಿತ್ಯ ಸಮ್ಮೇಳನಕ್ಕೆ ೧೫ ಲಕ್ಷ ರೂಪಾಯಿಗಳನ್ನು ಪ್ರತ್ಯೇಕವಾಗಿ ನಾವು ಬಿಡುಗಡೆ ಮಾಡಿದ್ದೇವೆ. ಹೀಗೆಯೇ ಎಲ್ಲಾ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಮಾಮೂಲಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೊಡತಕ್ಕ ಪರಿಸ್ಥಿತಿ ಇದ್ದರೂ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೊರನಾಡು ಕನ್ನಡ ಸಂಘಸಂಸ್ಥೆಗಳಿಗೆ, ೧೩ ಸಂಘ ಸಂಸ್ಥೆಗಳಿಗೆ ಒಟ್ಟು ೧೨.೫ ಲಕ್ಷ ರೂಪಾಯಿಗಳನ್ನು ನಾವು ಮಂಜೂರುಮಾಡಿದ್ದೇವೆ. ಪವರ್ ಸೆಕ್ಟಾರ್‌ನಲ್ಲಿ ೧೯೯೨-೯೩ರಲ್ಲಿ ೫೮೭.೭೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ೧೯೯೩-೯೪ಕ್ಕೆ ೭೬೭.೭೩ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇದು ಮಾತ್ರವಲ್ಲದೆ ತಮಗೆ ಗೊತ್ತಿದ್ದ ಪ್ರಕಾರ ಇದೇ ಮೊದಲ ಸಾರಿ ಕೆ.ಇ.ಬಿ.ಗೆ ೮೦೦ ಕೋಟಿ ರೂಪಾಯಿಗಳನ್ನು ಪವರ್ ಸಿಸ್ಟಂ ಇಂಪ್ರೂವ್‌ಮೆಂಟ್‌ಗಾಗಿ ಖರ್ಚು ಮಾಡುತ್ತಿದ್ದೇವೆ. ೮೦೦ ಕೋಟಿ ರೂಪಾಯಿಗಳ ಯೋಜನೆ ಅನುಷ್ಠಾನದ ಹಂತದಲ್ಲಿದೆ. ಅದರಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳು ಈಗಾಗಲೇ ಆ ಯೋಜನೆಯಲ್ಲಿ ಖರ್ಚಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ ನಾವು ಆ ಯೋಜನೆಗಳನ್ನು ಕ್ಷಿಪ್ರ ರೀತಿಯಲ್ಲಿ ಅನುಷ್ಠಾನ ಮಾಡತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ತಮಗೆ ಗೊತ್ತಿದೆ, ಐ ಡಿ ಎಸ್ ಎಂ ಟಿ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ. ಅದನ್ನು ೧೯೯೧ರಿಂದ ಅನುಷ್ಠಾನ ಮಾಡುತ್ತಿದ್ದೇವೆ. ಅದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಸೇರಿ ೫೦:೫೦ ಪರ್ಸೆಂಟ್‌ನಲ್ಲಿ ನಾವು ಅವನ್ನು ಅನುಷ್ಠಾನ ಮಾಡುತ್ತಿದ್ದೇವೆ. ೧೯೯೩-೯೪ರಿಂದ ಈ ದಾಮಾಷಾವನ್ನು

ಬದಲಾವಣೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಸಹಾಯ ೬೦ ಪರ್ಸೆಂಟ್‌ಗೆ ಏರಿಸಿದ್ದಾರೆ, ರಾಜ್ಯ ಸರ್ಕಾರದ ಸಹಾಯವನ್ನು ೪೦ ಪರ್ಸೆಂಟ್ ಮಾಡಿದೆ. ೧೯೭೮ ರಿಂದ ೧೯೯೨ರವರೆಗೆ ೬ನೇ ಮತ್ತು ೭ನೇ ಯೋಜನೆಯಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯದ ೩೨ ಟೌನ್‌ಗಳಿಗೆ ಸಹಾಯವನ್ನು ೩೫ ೫೦ ಕೋಟಿ ರೂಪಾಯಿ ಮಂಜೂರು ಮಾಡಿದ್ದರು. ೧೯೯೩-೯೪ರಲ್ಲಿ ನಾವು ವಿಶೇಷವಾಗಿ ಇದರಲ್ಲಿ ಆಸಕ್ತಿ ತೋರಿ ಕೇಂದ್ರ ಸರ್ಕಾರವನ್ನು ಇವತ್ತು ಸಂಪರ್ಕಿಸಿದ ಮೇಲೆ ೩೨ ಟೌನ್ ಅಲ್ಲದೆ ೧೯ ಹೆಚ್ಚು ಟೌನ್ ಗಳನ್ನು ಸೇರಿಸಿ ೪೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕರ್ನಾಟಕದಲ್ಲಿ ಆ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆ. ಅದನ್ನು ಅನುಷ್ಠಾನ ಮಾಡಲಿಕ್ಕೆ ಪ್ರಥಮ ಕಂತಿನಲ್ಲಿ ೩.೫ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ವಿಶೇಷವಾಗಿ ಅಭಿನಂದನೆ ಸಲಿಸ ಲಿಕ್ಕೆ ನಾನು ಅಪೇಕ್ಷೆಪಡುತ್ತಿದ್ದೇನೆ. ಇವತ್ತೇ ಇಡೀ ರಾಷ್ಟ್ರದಲ್ಲಿ ೧೯೯೩-೯೪ರಲ್ಲಿ ವಿಶೇಷವಾದ ಆಸಕ್ತಿ ವಹಿಸಿ ಐಡಿಎಸ್‌ಎಂಟಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಹಿಂದೆ ಆರನೇ ಸ್ಥಾನದಲ್ಲಿದ್ದ ಕರ್ನಾಟಕ ರಾಜ್ಯ ಕಾರ್ಯಕ್ರಮದ ಅನುಷ್ಠಾನ ಮತ್ತು ಕಾರ್ಯಕ್ರಮದ ವಿಸ್ತರಣೆಯಲ್ಲಿ ಇಡೀ ರಾಷ್ಟ್ರ ದಲ್ಲಿಯೇ ಒಂದನೇ ಸ್ಥಾನ ಪಡೆದಿದೆ ಎಂದು ಈ ಸದನಕ್ಕೆ ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತಿದ್ದೇನೆ.

ಶ್ರೀ ಬಿ. ಎಸ್, ಯಡಿಯೂರಪ್ಪ. - ಎಲ್ಲದರಲ್ಲೂ ಮೊದಲನೇ ಸ್ಥಾನದಲ್ಲಿದ್ದೀರಲ್ಲ ಬೇರೆ ರಾಜ್ಯ ಗಳ ಸ್ಥಿತಿ ಏನು ? ಮೊದಲನೇ ಸ್ಥಾನ ಅಂದರೆ ಬೇರೆ ಕಾಂಗ್ರೆಸ್ ರಾಜ್ಯಗಳ ಸ್ಥಿತಿ ಏನಾಗಿರಬಹುದು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಏನು ಮಾಡುತ್ತೀರಿ, ಒಂದನೇ ಸ್ಥಾನ ಬಂದಾಗ ಒಂದನೇ ಸ್ಥಾನ ಬಂದಿಲ್ಲವೆಂದು ಹೇಳಬೇಕೆ ? ಒಂದನೇ ಸ್ಥಾನ ಬಂದಿದ್ದರಿಂದ ಒಂದನೇ ಸ್ಥಾನ ಬಂದಿದೆ ಎಂದು ಹೇಳುತ್ತೇನೆ. ತಮಗೆ ಗೊತ್ತಿದೆ. ಇವತ್ತು ಬೆಳಗಾಂ ಮತ್ತು ಬಿಜಾಪುರ ಭಾಗದ ಅನೇಕ ರೈತರು ಅನೇಕ ನೀರಾವರಿ ಸಹಕಾರ ಸಂಘಗಳನ್ನು ಮಾಡುತ್ತಿದ್ದಾರೆ, ಮತ್ತು ನೋಂದಾಯಿತ ಸಂಘಗಳನ್ನು ಇವತ್ತು ಅವರು ಮಾಡಿ ನೀರಾವರಿ ಸೌಲಭ್ಯಗಳಿಗಾಗಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಿಂದ ವಾಣಿಜ್ಯ ಬ್ಯಾಂಕ್‌ಗಳಿಂದ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಒದಗಿಸ ಬೇಕಾದ ಅಡಮಾನ ದಸ್ತಾವೇಜುಗಳ ಮೇಲೆ ವಿಧಿಸಲಾಗುತ್ತಿರುವ ಮುದ್ರಾಂಕ ಶುಲ್ಕವನ್ನು ಸಂಪೂರ್ಣ ವಿನಾಯಿತಿಗೊಳಿಸುವುದಕ್ಕೆ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಇದರಿಂದ ಇನ್ನೂ ಹೆಚ್ಚು ಹೆಚ್ಚು ಅದು ಲಿಫ್ಟ್ ಇರಿಗೇಷನ್ ಇರಬಹುದು, ನೀರಾವರಿ ಯೋಜನೆಗಳನ್ನು ತಮ್ಮ ಸಾಮರ್ಥ್ಯದಿಂದ ರೈತರು ಮಾಡಿಕೊಳ್ಳುವುದಕ್ಕೆ ಬರುತ್ತದೆ ಅದಕ್ಕೆ ಸಬ್ಸಿಡಿ ಸ್ಕೀಂ ಕೂಡ ಬಡ್ಜೆಟ್ಟಿ ನಲ್ಲಿ ಘೋಷಣೆ ಮಾಡಿದ್ದೇನೆ. ಇನ್ನು ಮುಂದೆ ಅಂಥ ಯೋಜನೆಗಳನ್ನು ರೈತರು ಹೆಚ್ಚು ಕೈಗೆತ್ತಿ ಕೊಳ್ಳತಕ್ಕ ದೃಷ್ಟಿಯಲ್ಲಿ ರಿಜಿಸ್ಟ್ರೇಷನ್ ಶುಲ್ಕವನ್ನು ಸಂಪೂರ್ಣವಾಗಿ ವಿನಾಯಿತಿ ಮಾಡಿದ್ದೇವೆ. ಮತ್ತು ನೋಂದಣಿ ಶುಲ್ಕವನ್ನು ಕನಿಷ್ಟ ಒಂದು ರೂಪಾಯಿಗೆ ಇಳಿಸಲಾಗಿದೆ. ಇನ್ನೂ ಹೆಚ್ಚು ಆಸಕ್ತಿಯಿಂದ ರೈತರು ಇದರ ಪ್ರಯೋಜನ ಪಡೆಯಲಿ ಎಂದು ನಾನು ರೈತರನ್ನು ವಿನಂತಿಕೊಳ್ಳುತ್ತಿ ದ್ದೇನೆ ಅದೇ ರೀತಿ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಲಿಕ್ಕೆ ಸಹಕಾರ ಸಂಘಗಳಿಂದ, ಗೃಹ ನಿರ್ಮಾಣ ಮಂಡಳಿಗಳಿಂದ ಮತ್ತಿತರ ಹಣಕಾಸು ಸಂಸ್ಥೆಗಳಿಂದ ಪಡೆಯಲಾದ ಸಾಲಕ್ಕೆ ವಿಧಿಸಲಾಗುತ್ತಿರುವ ಮುದ್ರಾಂಕ ಶುಲ್ಕವನ್ನು ಸಂಪೂರ್ಣ ಮನ್ನಾ ಮಾಡಿದ್ದೇವೆ. ನೋಂದಣಿ ಶುಲ್ಕವನ್ನು ಕನಿಷ್ಟ ರೂಪಾಯಿ ಒಂದಕ್ಕೆ ಇಳಿಸಿದ್ದೇವೆ. ಇದರಿಂದ ಕೆಲವು ಬಡವರಿಗೆ ಅನುಕೂಲವಾದಂತಹ ಮನೆಗಳನ್ನು ಕಟ್ಟಲಿಕ್ಕೆ ಹೆಚ್ಚು ಅನುಕೂಲವಾಗಬಹುದೆಂದು ನಾನು ಆಶೆಯನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ.

ಇನ್ನು ನಾವು ಫಿಲಂ ಪಾಲಿಸಿ ಬಗ್ಗೆ ಯಾವುದೇ ವಿಶೇಷ ರೀತಿಯ ಒಂದು ಅನೌನ್ಸ್‌ಮೆಂಟನ್ನು ಹಿಂದೆ ಮಾಡಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ವಿ. ಎನ್. ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ಹಾಗಿದಂಥ ಒಂದು ಸಮಿತಿ ನಾವು ಬಜೆಟ್ ನಿರೂಪಣೆ ಮಾಡತಕ್ಕ ಸಂದರ್ಭಕ್ಕೆ ಕೆಲವು ದಿನಗಳ ಮೊದಲು ಮಾತ್ರ ವರದಿಯನ್ನು ಕೊಟ್ಟ ಕಾರಣ ನಾವು ಅದರ ಬಗ್ಗೆ ಘೋಷಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಾವು ಈಗಾಗಲೇ ವಿ. ಎನ್. ಸುಬ್ಬರಾವ್ ಅವರ ವರದಿಯನ್ನು ಪರಿಗಣಿಸಿದ್ದೇವೆ. ಅದರ ಬಗ್ಗೆ ನಾವು ಕೆಲವು ರಿಯಾಯಿತಿಗಳನ್ನು ಮತ್ತೆ ಕೆಲವು ಘೋಷಣೆಗಳನ್ನು ಮಾಡುವುದಕ್ಕೆ ನಾನು ಅಪೇಕ್ಷೆ ಪಡುತ್ತಿದ್ದೇನೆ. ಈಗಾಗಲೇ ಸುಮಾರು ೨ ಕೋಟಿ ರೂಪಾಯಿಗಳನ್ನು ನಾವು ಫಿಲಂ ಸಬ್ಸಿಡೀಸ್ ಎಂದು ೩೧ನೇ ಮಾರ್ಚ್ ೧೯೯೪ ಕ್ಕೆ ಯಾವುದು ಬಾಕಿ ಇದೆ ಅದನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ. ಇಷ್ಟು ಮಾತ್ರವಲ್ಲದೆ, ಕರ್ನಾಟಕ ನಿಜವಾಗಿ ಸಾಕಷ್ಟು ಫಿಲಂ ಅವಾರ್ಡ್‌ಗಳನ್ನು ಈಗಾಗಲೇ ಘೋಷಣೆ

ಮಾಡಿದೆ. ಅದರಲ್ಲಿ ಮುಖ್ಯವಾಗಿ ಇನ್ನೂ ಕೆಲವು ಹೊಸ ಅವಾರ್ಡ್‌ಗಳನ್ನು ಮಾಡಬೇಕೆಂದು ಫಿಲಂ ಇಂಡಸ್ಟ್ರೀಸ್ ಬೇಡಿಕೆ ಇತ್ತು. ಅದಕ್ಕೆ ಈ ಹೇಳಿಕೆಯನ್ನು ನಾನು ಮಾಡಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಸಾಮಾಜಿಕ ಮೌಲ್ಯಗಳನ್ನುಳ್ಳ ಒಳ್ಳೆಯ ಚಿತ್ರಗಳಿಗೆ ೭೫ ಸಾವಿರ ರೂಪಾಯಿ ಕ್ಯಾಷ್ ಅವಾರ್ಡ್ ಇಡುತ್ತಿದ್ದೇವೆ ಮತ್ತು ಒಂದು ಗೋಲ್ಡ್ ಮೆಡಲ್ ಇಡುತ್ತಿದ್ದೇವೆ. ಅಂಥ ಫಿಲಂಗಳಿಗೆ ನೂರಕ್ಕೆ ನೂರು ಪಾಲು ತೆರಿಗೆ ವಿನಾಯಿತಿಯನ್ನು ಒಂದು ವರ್ಷಕ್ಕೆ ಕೊಡುವ ನಿರ್ಣಯ ಮಾಡಿದ್ದೇವೆ. ಮತ್ತು ಬೆಸ್ಟ್ ಚಿಲ್ಡ್ರನ್ ಫಿಲಂಗೆ ೫೦ ಸಾವಿರ ರೂಪಾಯಿ ಕ್ಯಾಷ್ ಅವಾರ್ಡ್ ಮತ್ತು ಗೋಲ್ಡ್ ಮೆಡಲ್ ಇಡುತ್ತಿದ್ದೇವೆ. ಬೆಸ್ಟ್ ಆರ್ಟ್ ಡೈರೆಕ್ಟರಿಗೆ ೧೦ ಸಾವಿರ ರೂಪಾಯಿ ಕ್ಯಾಷ್ ಅವಾರ್ಡ್ ಬೆಸ್ಟ್ ಲಿರಿಸ್ಟ್‌ಗೆ ೧೫ ಸಾವಿರ ರೂಪಾಯಿ. ಬೆಸ್ಟ್ ಮೇಲ್ ಪ್ಲೇ ಬ್ಯಾಕ್ ಸಿಂಗರ್‌ಗೆ ೫ ಸಾವಿರ ರೂಪಾಯಿ, ಹಾಗೂ ಬೆಸ್ಟ್ ಫೀಮೇಲ್ ಪ್ಲೇ ಬ್ಯಾಕ್ ಸಿಂಗರ್‌ಗೆ ೫ ಸಾವಿರ ರೂಪಾಯಿ ಎಂದು ಮಾಡಿದ್ದೇವೆ. ಇನ್ನು ಕೆಲವು ಫಿಲಂಗಳಿಗೆ ಕನಿಷ್ಟ ಮಟ್ಟದ ಕ್ಯಾಷ್ ಅವಾರ್ಡ್ ಕೊಡಲಾಗಿದೆ. ಅದನ್ನು ಪುನರ್ವಿಮರ್ಶಿಸಿ ಈ ರೀತಿ ಕ್ಯಾಷ್ ಅವಾರ್ಡ್ ಕೊಡತಕ್ಕ ನಿರ್ಣಯ ಮಾಡಿದ್ದೇವೆ. Best film of the yearಗೆ ೫೦ ಸಾವಿರ ಕ್ಯಾಷ್ ಅವಾರ್ಡ್ ಇತ್ತು, ಅದನ್ನು ಒಂದು ಲಕ್ಷಕ್ಕೆ ಏರಿಸುತ್ತಿದ್ದೇವೆ. ಡೈರೆಕ್ಟರಿಗೆ ೫ ಸಾವಿರ ಇತ್ತು, ಅದನ್ನು ೨೦ ಸಾವಿರಕ್ಕೆ ಏರಿಸುತ್ತಿದ್ದೇವೆ Second best film of the yearಗೆ ೨೫ ಸಾವಿರ ಇದ್ದುದನ್ನು ೭೫ ಸಾವಿರಕ್ಕೆ ಏರಿಸುತ್ತಿದ್ದೇವೆ. ಮತ್ತು ನಿರ್ದೇಶಕರಿಗೆ ೪ ಸಾವಿರ ರೂಪಾಯಿಗಳಿದ್ದುದನ್ನು ೧೫ ಸಾವಿರ ರೂಪಾಯಿಗಳಿಗೆ ಏರಿಸುತ್ತಿದ್ದೇವೆ. Third best film of the yearಗೆ ೨೦ ಸಾವಿರ ಇದ್ದುದನ್ನು ೫೦ ಸಾವಿರಕ್ಕೆ ಏರಿಸುತ್ತಿದ್ದೇವೆ, ಆ ನಿರ್ದೇಶಕರಿಗೆ ಮೂರು ಸಾವಿರವಿತ್ತು, ಅದನ್ನು ೧೦ ಸಾವಿರಕ್ಕೆ ಏರಿಸುತ್ತಿದ್ದೇವೆ. ಬೆಸ್ಟ್ ಆಕ್ಟರ್, ಅಂಡ್ ಬೆಸ್ಟ್ ಆಕ್ಟ್ರೆಸ್ ಆಫ್ ದಿ ಇಯರ್ ಅದು ೪ ಸಾವಿರ ರೂಪಾಯಿಗಳಿತ್ತು. ಅದನ್ನು ೨೦ ಸಾವಿರ ರೂಪಾಯಿಗಳಿಗೆ ಏರಿಸುತ್ತಿದ್ದೇವೆ. ಬೆಸ್ಟ್ ಸಪೋರ್ಟಿಂಗ್ ಆಕ್ಟರ್ ಮತ್ತು ಬೆಸ್ಟ್ ಸಪೋರ್ಟಿಂಗ್ ಆಕ್ಟ್ರೆಸಸ್ ಮತ್ತು ಬೆಸ್ಟ್ ಚೈಲ್ಡ್ ಆರ್ಟಿಸ್ಟ್‌ಗೆ ಎರಡು ಸಾವಿರ ರೂಪಾಯಿಗಳಿದ್ದುದನ್ನು ೧೦ ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ಮತ್ತು ಬಾಕಿ ಉಳಿದಂಥ ಬೆಸ್ಟ್ ಸ್ಟೋರಿ ರೈಟರ್, ಸ್ಕ್ರೀನ್ ಪ್ಲೇ ರೈಟರ್, ಬೆಸ್ಟ್ ಡೈಲಾಗ್ ರೈಟರ್, ಕ್ಯಾಮರಾಮ್ಯಾನ್, ಮ್ಯೂಸಿಕ್ ಡೈರೆಕ್ಟರ್, ಸೌಂಡ್ ಇಂಜಿನಿಯರ್, ಎಡಿಟರ್—ಇವರಿಗೆ ೪ ಸಾವಿರ ಇದ್ದುದನ್ನು ೧೦ ಸಾವಿರಕ್ಕೆ ಏರಿಸಲಾಗಿದೆ. ಇಷ್ಟು ಮಾತ್ರವಲ್ಲ, ಯಾವುದೇ ಕನ್ನಡ ಚಲನಚಿತ್ರ ಅದು ರಾಷ್ಟ್ರೀಯ ಮಟ್ಟದ ಅಥವಾ ಅಂತರ್‌ರಾಷ್ಟ್ರೀಯ ಮಟ್ಟದ ಬಹುಮಾನವನ್ನು ಪಡೆದರೆ ಆದರೆ ಅಲ್ಲದೆ ಇಂಡಿಯನ್ ಪನೋರಮಾ ಸೆಷನ್‌ಗೆ ಅಂತರ್‌ರಾಷ್ಟ್ರೀಯ ಚಲನಚಿತ್ರ ಉತ್ಸವಕ್ಕೆ ಅದು ಆಯ್ಕೆಯಾದಂಥ ಸಂದರ್ಭದಲ್ಲಿ ಅವರಿಗೆ ಈಗ ಇರತಕ್ಕಂಥ ಸಬ್ಸಿಡಿಯ ಜೊತೆಗೆ ಇನ್ನು ೨ ಲಕ್ಷ ರೂಪಾಯಿಗಳ ಹೆಚ್ಚು ಸಬ್ಸಿಡಿಯನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಕೂಡ ನಾವು ನಡೆಸುತ್ತಿದ್ದೇವೆ. ಮತ್ತು ಇಂಥ ಚಲನಚಿತ್ರಕ್ಕೆ ನೂರಕ್ಕೆ ನೂರು ಪಾಲು ತೆರಿಗೆ ವಿನಾಯಿತಿಯನ್ನು ಕೂಡ ನಾವು ಕೊಡತಕ್ಕಂಥ ಒಂದು ನಿರ್ಣಯವನ್ನು ಮಾಡುತ್ತಿದ್ದೇವೆ. ಇಷ್ಟು ಮಾತ್ರವಲ್ಲದೆ, ನಮ್ಮ ಕರ್ನಾಟಕದಲ್ಲಿ ಕನ್ನಡದ ಒಂದು ಭಾಷೆಯ ಅಭಿವೃದ್ಧಿ ಮತ್ತು ಕನ್ನಡ ಚಲನಚಿತ್ರದ ಅಭಿವೃದ್ಧಿ ಈಗ ತಮಗೆ ಗೊತ್ತಿದೆ, ದೂರದರ್ಶನದಲ್ಲಿ ಟೆಲಿಸೀರಿಯಲ್ ಅಥವಾ ಟೆಲಿಫಿಲಮ್ ಒಳ್ಳೆಯ ಮಟ್ಟದಲ್ಲಿ ಇವತ್ತು ಬರುತ್ತಾ ಇಲ್ಲ. ಇವತ್ತು ಒಳ್ಳೆಯ ಮಟ್ಟದಲ್ಲಿ ಬಾರದಿರುವುದಕ್ಕೆ. ಹಣಕಾಸಿನ ಕೊರತೆ ಕೂಡ ಇರುವುದರಿಂದ ಒಳ್ಳೆಯ ಗುಣಮಟ್ಟದ ಟೆಲಿಸೀರಿಯಲ್ ಬರಬೇಕು ಒಳ್ಳೆಯ ಗುಣಮಟ್ಟದ ಟೆಲಿ ಚಲನಚಿತ್ರಗಳು ಬರಬೇಕೆಂಬ ಉದ್ದೇಶವನ್ನು ನಾವು ಇಟ್ಟುಕೊಂಡು ಈಗ ಒಳ್ಳೆಯ ಗುಣಮಟ್ಟದಲ್ಲಿ ಅದನ್ನು ವಿಸ್ತರಿಸಬೇಕೆಂದು ಹೇಳಿ ನಾವು ಟೆಲಿಫಿಲಮ್ ಮತ್ತು ಟೆಲಿಸೀರಿಯಲ್, ಅದು ಟೆಲಿಸೀರಿಯಲ್ ನಾಟ್ ಲೆಸ್‌ದ್ಯಾನ್ ೩೦ ಇನ್ ಎಪಿಸೋಡ್ ಇದ್ದರೆ ೧೯೯೪–೯೫ ರಿಂದ ಒಂದು ಲಕ್ಷ ರೂಪಾಯಿ ಸಬ್‌ಸಿಡಿಯನ್ನು ಕೊಡಲಿಕ್ಕೆ ಕೂಡ ನಾವು ನಿರ್ಣಯ ಮಾಡಿದ್ದೇವೆ. ಇದರಿಂದ ದೂರದರ್ಶನದಲ್ಲಿ ಒಳ್ಳೆಯ ಗುಣಮಟ್ಟದ ಟೆಲಿಫಿಲಮ್ಸ್ ಒಳ್ಳೆಯ ಗುಣಮಟ್ಟದ ಟೆಲಿಸೀರಿಯಲ್ಸ್ ಕನ್ನಡದಲ್ಲಿ ಬರತಕ್ಕಂಥ ದೃಷ್ಟಿಯಿಂದ ಈ ಒಂದು ರೀತಿಯ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಸನ್ಮಾನ್ಯ ದೇವರಾಜ ಅರಸ್‌ರವರ ಜನ್ಮ ದಿವಸ ಆಗಸ್ಟ್ ೨೦ನೇ ತಾರೀಖು ಬರುವುದರಿಂದ ನಾವು ಏಜೀಸ್ ಆಫೀಸ್ ಹತ್ತಿರ ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಲಿಕ್ಕೂ ಕೂಡ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಈಗಾಗಲೇ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಬಹಳ ವರ್ಷಗಳಿಂದ ಈ ಪಾಲಿಟೆಕ್ನಿಕ್ ಟೀಚರ್ಸ್ ಅಸೋಸಿಯೇಷನ್‌ನವರು ನಮಗೆ ಯು. ಜಿ. ಸಿ. ಸ್ಕೇಲನ್ನು ಕೊಡಬೇಕೆಂಬ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟುಕೊಂಡೇ ಬರುತ್ತಿದ್ದಾರೆ. ನಾವು ಅನೇಕ ಸಂದರ್ಭಗಳಲ್ಲಿ ಸಂಪನ್ಮೂಲದ ದೃಷ್ಟಿಯಿಂದ ಈ ಬೇಡಿಕೆಯನ್ನು ಮುಂದೆ ಹಾಕಿಕೊಂಡೇ ಬರುತ್ತಿದ್ದೇವೆ. ತಮಗೆ ಗೊತ್ತಿದೆ, ಪಾಲಿಟೆಕ್ನಿಕ್‌ನಲ್ಲಿ ಬಹಳ ಪ್ರಮುಖವಾದಂಥ ತಾಂತ್ರಿಕ ಶಿಕ್ಷಣ ವ್ಯವಸ್ಥೆಯನ್ನು ಇವತ್ತು ಕೂಡ

ತಕ್ಕಂಥ ಒಂದು ಸಂದರ್ಭದಲ್ಲಿ ಒಳ್ಳೆಯ ಗುಣಮಟ್ಟದ ಉಪನ್ಯಾಸಕರು ಆ ಪಾಲಿಟೆಕ್ನಿಕ್‌ಗಳಲ್ಲಿ ಇಲ್ಲದಿದ್ದರೆ ಒಂದು ಒಳ್ಳೆಯ ಗುಣಮಟ್ಟದ ಶಿಕ್ಷಣವನ್ನು ಅಲ್ಲಿ ನಿರೀಕ್ಷೆ ಮಾಡಲಿಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಗುಜರಾತಿನಲ್ಲಿ, ತಮಿಳುನಾಡಿನಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಮಧ್ಯಪ್ರದೇಶದಲ್ಲಿ ಎ. ಐ. ಟಿ. ಸಿ. ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಫಾರ್ ಟೆಕ್ನಿಕಲ್ ಎಜ್ಯುಕೇಷನ್ ಎಂದು ಏನಿದೆ ಆ ಒಂದು ಸಂಸ್ಥೆಯವರು ಒಂದು ಪೇ ಸ್ಕೇಲ್‌ನ್ನು ಕೊಡಬೇಕೆಂದು ಹೇಳಿ ಈ ನಾಲ್ಕು ರಾಜ್ಯಗಳಲ್ಲಿ ಈಗಾಗಲೇ ಅದನ್ನು ಕೊಟ್ಟಿದ್ದಾರೆ. ಸರ್ಕಾರ ಅನೇಕ ವರ್ಷಗಳಿಂದ ಇವತ್ತು ಬಾಕಿ ಇರತಕ್ಕಂಥ ಈ ಬೇಡಿಕೆಯನ್ನು ಪರಿಗಣಿಸಿ ಅದನ್ನು ಮಂಜೂರು ಮಾಡಬೇಕೆಂದು ಹೇಳಿ ನಮ್ಮ ಸರ್ಕಾರ ಒಪ್ಪಿಕೊಂಡಿದೆ. ಆದ್ದರಿಂದ ಮುಂದೆ ಬರತಕ್ಕ ಸಾಲಿನಿಂದ ಅಂದರೆ ೧೯೯೪-೯೫ರಿಂದ ಎ. ಐ. ಸಿ. ಟಿ. ಇ. ಪೇ ಸ್ಕೇಲನ್ನು ಪಾಲಿಟೆಕ್ನಿಕ್‌ನಲ್ಲಿರತಕ್ಕ ಉಪನ್ಯಾಸಕರಿಗೆ ಕೊಡಲಿಕ್ಕೆ ನಾವು ನಿರ್ಣಯವನ್ನು ಮಾಡಿದ್ದೇವೆ ಎಂದು ಘೋಷಣೆ ಮಾಡುವುದಕ್ಕೆ ನಾನು ಅಪೇಕ್ಷೆ ಪಡುತ್ತಿದ್ದೇನೆ. ಅದರ ಪ್ರಕಾರ ಲೆಕ್ಚರರ್ಸ್‌ಗೆ ೧೯೦೦-೩೭೫೦ ಪೇ ಸ್ಕೇಲ್ ಇದ್ದದ್ದು ೨೨೦೦-೪೦೦೦ ರೂಪಾಯಿಗೆ ಬರುತ್ತದೆ. ಹೆಡ್ ಆಫ್ ಸೆಕ್ಷನ್ಸ್ ೩೭೫೦ ಇದ್ದದ್ದು ೩೦೦೦ ದಿಂದ ೫೦೦೦ ಆಗುತ್ತದೆ. ಪ್ರಾಂಶುಪಾಲರಿಗೆ ೨೨೦೦-೪೦೭೦ ಇದದ್ದು ೩೭೦೦-೫೭೦೦ ಆಗುತ್ತದೆ. ಸೀನಿಯರ್ ಪ್ರಿನ್ಸಿಪಾಲರಿಗೆ ೩೧೭೦ ಇದ್ದದ್ದು ೩೭೦೦ ಮತ್ತು ೫೭೦೦ ಆಗುತ್ತದೆ. ಇಷ್ಟು ಮಾತ್ರವಲ್ಲದೆ ಪಾಲಿಟೆಕ್ನಿಕ್‌ನಲ್ಲಿರತಕ್ಕ ಶಿಕ್ಷಣದ ವ್ಯವಸ್ಥೆಯ ಹಂತವನ್ನು ಮೇಲೆತ್ತುವುದಕ್ಕೆ ಇನ್ನು ಮುಂದೆ ಯಾವುದೇ ಒಂದು ನೇಮಕಾತಿ ಮಾಡುವಾಗ ಎ. ಐ. ಸಿ. ಟಿ. ಯವರು ಏನು ಕ್ವಾಲಿಫಿಕೇಷನ್ ಮತ್ತು ನಾರ್ಮ್ಸ್‌ನ್ನು ನಮೂದಿಸಿದ್ದಾರೆ. ಅದೇ ಪ್ರಕಾರ ಮುಂದೆ ಬರತಕ್ಕ ನೇಮಕಾತಿಗಳು ಪಾಲಿಟೆಕ್ನಿಕ್‌ಗೆ ಕೂಡ ಆಗುತ್ತದೆ ಎಂಬುದನ್ನು ನಾನು ಇವತ್ತು ತಿಳಿಸಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಕರ್ನಾಟಕ ರಾಜ್ಯ ವಕ್ಫ್ ಬೋರ್ಡಿಗೆ ಆಗಿರುವ ಬಜೆಟ್ ಅಲಾಟ್‌ಮೆಂಟ್ ಬಗ್ಗೆ ಹೇಳಬೇಕಾದರೆ, ೧೯೯೨-೯೩ರಲ್ಲಿ ೧೫೫ ಲಕ್ಷ ರೂಪಾಯಿಗಳನ್ನು ಕರ್ನಾಟಕ ರಾಜ್ಯ ವಕ್ಫ್ ಬೋರ್ಡಿಗೆ ಕೊಟ್ಟಿದ್ದಾರೆ, ೧೯೯೩-೯೪ ರಲ್ಲಿ ೨೭೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದಲ್ಲದೆ ೩೧-೩-೧೯೯೪ ರೊಳಗೆ ಪುನಃ ೧೦೦ ಲಕ್ಷ, ಮತ್ತೊಂದು ೩೦ ಲಕ್ಷ ಕೊಟ್ಟು ೧೯೯೨-೯೩ ರಲ್ಲಿ ೧೫೫ ಲಕ್ಷ ರೂಪಾಯಿ ಕೊಟ್ಟಿದ್ದರೆ ಈ ವರ್ಷ ೩೦೩ ಲಕ್ಷ ರೂಪಾಯಿಗಳನ್ನು ಕರ್ನಾಟಕ ರಾಜ್ಯ ವಕ್ಫ್ ಬೋರ್ಡಿಗೆ ನಾವು ಕೊಡುತ್ತಿದ್ದೇವೆ. ಇದು ಇಡೀ ಕರ್ನಾಟಕದ ಇತಿಹಾಸದಲ್ಲಿ ಅತೀ ಹೆಚ್ಚಿನ ಮೊತ್ತ ಎಂದು ಹೇಳಲಿಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಅದೇ ಪ್ರಕಾರ ನಾವು ಈಗಾಗಲೇ ಆರಾಧನೆಗೆ ಕೂಡ ೮ ಕೋಟಿ ಬಜೆಟ್ ಪ್ರಾವಿಷನ್ ಇಟ್ಟು ೨೧-೩-೧೯೯೪ರೊಳಗೆ ಬಿಡುಗಡೆ ಮಾಡುತ್ತಿದ್ದೇವೆ. ಈ ಸದನದಲ್ಲಿ ಈಗಾಗಲೇ ಎಕ್ಸೈಜ್ ವಿಚಾರದಲ್ಲಿ ಸಾಕಷ್ಟು ಚರ್ಚೆ ಆಗಿದೆ. ಯಾವ ರೀತಿಯ ಕಾರ್ಯಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ ಎಂಬುದನ್ನು ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ನಾನು ಹೇಳಿದ್ದೇನೆ. ನಾನು ಅಧಿಕಾರ ತೆಗೆದುಕೊಳ್ಳುವ ಹಿಂದೆ ಎರಡು ವರ್ಷಗಳಲ್ಲಿ ಎಕ್ಸೈಜ್ ರೆವಿನ್ಯೂ ೫೦೦ ಕೋಟಿ ರೂಪಾಯಿಯಲ್ಲಿ ಸ್ಥಗಿತವಾಗಿತ್ತು. ೧೯೯೧-೯೨ರಲ್ಲಿ ೫೧೦.೦೭ ಕೋಟಿ ಆಗಿದ್ದರೆ ೧೯೯೨-೯೩ರಲ್ಲಿ ೫೧೫.೭೬ ಕೋಟಿ ರೂಪಾಯಿ ಆಗಿದೆ. ೫೦೦ ಕೋಟಿ ರೂಪಾಯಿಗೆ ಸ್ಟ್ಯಾಗ್ನೇಟ್ ಆಗತಕ್ಕ ಪರಿಸ್ಥಿತಿ ಇದ್ದರೂ ೧೯೯೩-೯೪ರಲ್ಲಿ ನಾವು, the department has already achieved Rs. 547.48 crores by the end of February, 1994 registering an increase of Rs. 91.94 crores, 20% more compared to the corresponding period of the last year. ಈಗಾಗಲೇ ನಾವು ಇನ್ನೂ ಕೂಡ ಅನೇಕ ಹೆಜ್ಜೆಗಳನ್ನು ತೆಗೆದುಕೊಂಡಿದ್ದರಿಂದ ಬಹುಶಃ ೨೦೧ ಕೋಟಿಯಲ್ಲಿ ೫೦ ಕೋಟಿ ಕಡಿಮೆಯಾಗಬಹುದೇ ಹೊರತು, ನಾವು ಆ ಮಟ್ಟವನ್ನು ಮುಟ್ಟತಕ್ಕ ವ್ಯವಸ್ಥೆ ಇದ್ದರೂ ಕೂಡ ತಿಂಗಳ ಕೊನೆಗೆ ೫೦ ಅಥವಾ ೬೦ ಕೋಟಿ ರೂಪಾಯಿ ಕಡಿಮೆಯಾಗಬಹುದು. ಇದು ಅತೀ ದೊಡ್ಡ ಮೊತ್ತ. ಎಕ್ಸೈಜ್ ರೆವಿನ್ಯೂ ಗ್ರೋತ್‌ರೇಟಿನಲ್ಲಿ ನೋಡಿದರೆ ಹೆಚ್ಚು ಕುಡಿಯುತ್ತಿದ್ದಾರೆ ಎಂಬುದು ಅರ್ಥವಲ್ಲ. ಆದರೆ ಹಿಂದೆ ಕುಡಿಯುವುದು ಅಕೌಂಟಿಗೆ ಬರುತ್ತಿರಲಿಲ್ಲ. ಆದ್ದರಿಂದ ಯಾರೂ ಕುಡಿದರೂ ಕೂಡ ಅದು ಅಕೌಂಟ್‌ಗೆ ಬರಬೇಕೆಂದು ಹೇಳಿ, ನಾವು ಕುಡಿಯುವುದರಲ್ಲಿ ಕೂಡ ಲೆಕ್ಕ ಸಿಗಬೇಕೆಂದು ಹೇಳಿ ನಾವು ಇವತ್ತು ಮಾಡಿದ್ದರಿಂದ ವಿಶೇಷ ರೀತಿಯಲ್ಲಿ ಈ ಕಾರ್ಯಕ್ರಮದಲ್ಲಿ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಂದರೆ ಇದುವರೆಗೂ ಲೆಕ್ಕ ಸಿಕ್ಕಿರಲಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆದುದರಿಂದ ಇವತ್ತು ಅದರಲ್ಲೂ ಕೂಡ ಅತ್ಯಂತ ದೊಡ್ಡ ಗಾತ್ರದ ಏರಿಕೆ ನಾವು ಎಕ್ಸೈಸ್ ರೆವಿನ್ಯೂದಲ್ಲಿ ನಾವು ಮಾಡುವುದಕ್ಕೆ ಖಂಡಿತವಾಗಿ ಸಾಧ್ಯವಾಗಿದೆ. ಅನೇಕ ಜನ ನಿಷ್ಠುರ ಆಗತಕ್ಕ ರೀತಿಯಲ್ಲಿ ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ನಾನು ಕೊಟ್ಟ

ಅಂಕಿಸಂಖ್ಯೆಯಿಂದ ತಮಗೆ ಗೊತ್ತಿರಬಹುದು. ಕಳೆದ ೩ ವರ್ಷಗಳಲ್ಲಿ ಅರ್ರ್ಯಾಕ್, ಐಎಂಎಲ್ ಹಾಗೂ ಬೀರ್ ಎಷ್ಟು ಮಾರಾಟ ಆಗಿದೆ ಎಂದು ವಿವರ ಕೊಡುತ್ತೇನೆ. ಅರ್ರ್ಯಾಕ್ ೧೯೯೧-೯೨ರಲ್ಲಿ ೬೨೪.೪೩ ಲಕ್ಷ ಲೀಟರ್, ೧೯೯೨-೯೩ರಲ್ಲಿ ೫೭೬.೬೧ ಲಕ್ಷ ಲೀಟರ್ ಹಾಗೂ ೧೯೯೩-೯೪ (ಫೆಬ್ರವರಿ ಅಂತ್ಯಕ್ಕೆ)ರಲ್ಲಿ ೬೦೨.೯೪ ಲಕ್ಷ ಲೀಟರ್ ಮಾರಾಟವಾಗಿದೆ. ಹಾಗೆಯೇ ಐಎಂಎಲ್ ೧೯೯೧-೯೨ರಲ್ಲಿ ೧೪೦.೨೮ ಲಕ್ಷ ಲೀಟರ್, ೧೯೯೨-೯೩ರಲ್ಲಿ ೧೬೨.೨೪ ಲಕ್ಷ ಲೀಟರ್ಸ್ ಹಾಗೂ ೧೯೯೩-೯೪ (ಫೆಬ್ರವರಿ ಅಂತ್ಯಕ್ಕೆ)ರಲ್ಲಿ ೧೯೨.೯೬ ಲಕ್ಷ ಲೀಟರ್ ಮಾರಾಟವಾಗಿದೆ. ಮತ್ತು ಬೀಯರ್ ೧೯೯೧-೯೨ರಲ್ಲಿ ೨೯೬.೨೫ ಲಕ್ಷ ಲೀಟರ್ಸ್, ೧೯೯೨-೯೩ರಲ್ಲಿ ೩೫೪.೧೩ ಲಕ್ಷ ಲೀಟರ್ಸ್ ಹಾಗೂ ೧೯೯೩-೯೪ (ಫೆಬ್ರವರಿ ಅಂತ್ಯಕ್ಕೆ)ರಲ್ಲಿ ೪೦೧.೬೩ ಲಕ್ಷ ಲೀಟರ್ಸ್ ಮಾರಾಟವಾಗಿದೆ. ಎಲ್ಲಾ ಹಂತದಲ್ಲಿ ಕೂಡ ಬಿಗಿಯಾದ ಕಾರ್ಯಕ್ರಮ ತೆಗೆದುಕೊಂಡ ಕಾರಣ ನಮ್ಮಲ್ಲಿ ಇಂತಹ ಒಂದು ವಿಶೇಷ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು. For the first time in several years the licence of a distillery was suspended after detecting duty evasion amounting to Rs. 73 lakhs. In one of the biggest cases of duty evasion detected **IML** stocks amounting to about Rs. 30 lakhs were seized. ಅನೇಕ ರೀತಿಯಲ್ಲಿ, ನಾವು ವಿಶೇಷ ರೀತಿಯಲ್ಲಿ ರೈಡ್‌ಗಳನ್ನು ನಡೆಸಿ ನಮ್ಮ ಒಂದು ಉತ್ಪತ್ತಿಯನ್ನು ಉಳಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಯಿತು. ಇನ್ನು ವೆಟರ್ನರಿ ಆಸ್ಪತ್ರೆಗಳ ವಿಚಾರ ಹೇಳುವುದಾದರೆ ಸುಮಾರು ೧೫-೧೬ ವರ್ಷಗಳಲ್ಲಿ ಒಂದೂ ವೆಟರ್ನರಿ ಆಸ್ಪತ್ರೆ ಆಗಿದ್ದಿಲ್ಲ. ನಮ್ಮ ಅಧಿಕಾರ ಅವಧಿಯಲ್ಲಿ ೭೦೦ ಹಾಗೂ ೨೬೦, ಎಂದರೆ ಸುಮಾರು ೯೬೦ ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಅಷ್ಟೇ ಮಟ್ಟದಲ್ಲಿ ನಾವು ಆಸ್ಪತ್ರೆಗಳನ್ನು, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೂಡ ನಾವು ಮಾಡಿದ್ದೇವೆ. ಇನ್ನೂ ಅನೇಕ ವಿಚಾರಗಳು ಇವೆ. ಅದು ನೇಮಕಾತಿ ವಿಚಾರ ಇರಬಹುದು, ಬೇರೆ ವಿಚಾರ ಇರಬಹುದು. ಅವನ್ನೆಲ್ಲಾ ಪ್ರತ್ಯೇಕವಾಗಿ ಹೇಳುವುದಕ್ಕೆ ಹೋದರೆ ಬಹಳ ಸಮಯವಾಗುವುದರಿಂದ ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ನಾಗೇಗೌಡರಿಗೆ ಮೀಸೆ ಇಲ್ಲದೇ ಇದ್ದರೂ ಮೀಸೆ ಮೇಲೆ ಕೈ ಹಾಕುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹೌದು. ಮೀಸೆಯಲ್ಲಿ ಕೈ ಹಾಕಲಿಕ್ಕೆ ಕಾರಣ ಇದೆ.

ಶ್ರೀ ವಾಟಾಳ್ ನಾಗರಾಜ್.—ಅವರಿಗೆ ಮೀಸೇನೇ ಇಲ್ಲವಲ್ಲಾ !

ಶ್ರೀ ಕೆ. ಹೆಚ್. ರಂಗನಾಥ್.—ಮಾತನಾಡುವಂತಹವರಿಗೆ ಸಹಾಯ ಮಾಡಿದರೆ ಮೀಸೆಗೆ ಕೈ ಹಾಕಬೇಕಾದ್ದು ಇಲ್ಲ. ಪಾಪ, ಮಾತನಾಡದ ಮೂಕ ಪ್ರಾಣಿಗಳಿಗೆ ಸಹಾಯ ಮಾಡುವಂತಹ ವಿಚಾರ. ಆದಕ್ಕೋಸ್ಕರ ಅವರು ಮೀಸೆ ಮೇಲೆ ಕೈ ಹಾಕಿದರು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಬಹಳ ಸಂತೋಷದ ವಿಷಯ ಎಂದರೆ the industrial production has gone up by 4% this year. There is also improvement as far as agricultural production is concerned. ಡ್ರಾಟ್ ಇದ್ದರೂ ಕೂಡ ಅಗ್ರಿಕಲ್ಚರ್ ಪ್ರೊಡಕ್ಷನ್‌ನಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದೇವೆ. ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಸ್ ರೆವಿನ್ಯೂವಿನಲ್ಲಿ ೨೫ ಪರ್ಸೆಂಟ್ ಗ್ರೋತ್ ರೇಟ್ ಇದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಅಗ್ರಿಕಲ್ಚರ್ ಪ್ರೊಡಕ್ಷನ್‌ನಲ್ಲಿ ಪ್ರಗತಿ ಎಂದು ಹೇಳಿದಿರಿ. ಎಷ್ಟು ಪರ್ಸೆಂಟ್ ಪ್ರಗತಿ ಆಗಿದೆ ಎಂದು ಹೇಳುತ್ತೀರಾ ?

SRI M. VEERAPPA MOILY.—For a decade *i.e.*, during 80's the agricultural production and productivity was stagnated. Now, it is picking up, inspite of the drought sad other things. ಆದುದರಿಂದ ಎಕ್ಸೈಸ್ ಮತ್ತು ಸೇಲ್ಸ್ ಟ್ಯಾಕ್ಸ್‌ನಲ್ಲಿ ೨೫ ಪರ್ಸೆಂಟ್ ನಾವು ಹೆಚ್ಚಳವನ್ನು ಈಗಾಗಲೇ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನು ಉಡನ್ ಟಾಯ್ಸ್ ಬಗ್ಗೆ ನಾವು ಸಂಪೂರ್ಣವಾಗಿ ಟ್ಯಾಕ್ಸ್ ವಿನಾಯಿತಿ ಮಾಡಬೇಕೆಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಟ್ಯಾಕ್ಸ್ ರಿಲ್ಯಾಕ್ಸೇಷನ್ ಬಗ್ಗೆ ಹೇಳಿದಿರಿ ಎಂದು ಕಾಣುತ್ತದೆ. ತಮಗೆ ಗೊತ್ತಿರುವ ಹಾಗೆ, ನಮ್ಮ ರೈತರು ಟ್ರ್ಯಾಕ್ಟರ್, ಟಿಲ್ಲರ್ ಕೊಂಡುಕೊಳ್ಳಬೇಕಾದರೆ ಸಾವಿರಕ್ಕೆ ೧೨೦ ರೂಪಾಯಿ ಪ್ರಕಾರ ಸ್ಟಾಂಪ್ ಡ್ಯೂಟಿ ಕಟ್ಟಬೇಕು. ಈಗಾಗಲೇ ೫೦ ಸಾವಿರದವರೆಗೆ ವಿನಾಯಿತಿ ಕೊಟ್ಟಿದ್ದೀರಿ. ಟ್ರ್ಯಾಕ್ಟರ್ ಬೆಲೆ ೨ ಲಕ್ಷ ಇದ್ದರೆ, ಒಂದೂವರೆ ಲಕ್ಷಕ್ಕೆ ಸ್ಟಾಂಪ್ ಡ್ಯೂಟಿ ಕಟ್ಟಬೇಕು. ಅದನ್ನು ರಿಲ್ಯಾಕ್ಸ್ ಮಾಡಿದರೆ ರೈತರು ಉಳಿಯುತ್ತಾರೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಯಡಿಯೂರಪ್ಪನವರೇ, ಟ್ರ್ಯಾಕ್ಟರ್, ಪವರ್ ಟಿಲ್ಲರ್ ಬೇಡ, ಈಗ ನಮ್ಮಪ್ಪ ಸತ್ತರೆ ನನ್ನ ಹೆಸರಿಗೆ ನಾನು ಜಮೀನು ಮಾಡಿಕೊಳ್ಳಬೇಕಾದರೆ ಸ್ಟಾಂಪ್ ಡ್ಯೂಟಿ ಕಟ್ಟಬೇಕು. ನನ್ನ ಭೂಮಿಯನ್ನು ನನ್ನ ಹೆಸರಿಗೆ ನೋಂದಣಿ ಮಾಡುವುದಕ್ಕೆ ಸ್ಟಾಂಪ್ ಡ್ಯೂಟಿ ಕಟ್ಟಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೇನೂ ಇಲ್ಲ. ಲಿಗಲ್ ಹೇರ್ ಎಂದು ಅರ್ಜಿ ಕೊಟ್ಟರೆ ಆಗುತ್ತದೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ವಸೂಲಿ ಮಾಡುತ್ತಿದ್ದಾರೆ. ಭಾಗ ಆಗಬೇಕಾದರೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಯಡಿಯೂರಪ್ಪನವರು ಎತ್ತಿರುವ ವಿಚಾರದ ಬಗ್ಗೆ ಪರಿಶೀಲಿಸುತ್ತೇನೆ. ಅದರ ಬಗ್ಗೆ ಮುಂದೆ ಬರತಕ್ಕ ದಿವಸಗಳಲ್ಲಿ ಹೇಳುತ್ತೇನೆ. ಇನ್ನೊಂದು ವಿಚಾರ ಹೇಳುವುದು ಮರೆತೆ. ಮುಖ್ಯವಾಗಿ ಇವತ್ತು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬಿಲ್ ಇದೆ. ಅದರಲ್ಲೂ ಕನ್ನಡ ಚಲನಚಿತ್ರಗಳಿಗೆ ಒಂದು ವಿಶೇಷವಾದ ಒತ್ತು ಕೊಡಬೇಕು ಮತ್ತು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳಿ, I would like to say something about the entertainment tax. I am happy to announce the following concessions. For cinema theatres in places having population of more than 15,000 but less than a lakh, the option of paying entertainment tax at 15% of the gross collection capacity on minimum number of 14 shows per week. This will reduce the tax burden on the cinema theatres and fillip to screening of more kannada films in rural areas.

Secondly, I am happy to announce the removal of surcharge payable for admission on tickets upto Rs. 1·25 in those theatres coming under the ceiling system. This removal of surcharge will be applicable only for kannada films, It is not applicable to other language films By this measure the poorest category of filmgoers, will have to pay lesser ticket value and this will encourage viewership.

೨.೪೦ ಪಿ.ಎಂ.

ಪನೋರಮ ಬಗ್ಗೆ ಈಗಾಗಲೇ ಹೇಳಿದ್ದೇನೆ. ಕನ್ನಡ ಚಲನಚಿತ್ರಗಳ ಈ ಪ್ರಕಟಣೆಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಸ್ವಾಗತವನ್ನೇ ಮಾಡುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳನ್ನು ನಾವು ರದ್ದು ಮಾಡಿದ್ದೇವೆಂದು ಹೇಳಿದರೆ, ಆಗ ನಾನು ಸ್ವಾಗತ ಮಾಡುತ್ತೇನೆ. ಕಡ್ಡಾಯವಾಗಿ ಕನ್ನಡ ಚಿತ್ರ ಪ್ರದರ್ಶನ, ಇಷ್ಟು ದಿವಸ ಇರಬೇಕೆಂದು ತಾವು ಹೇಳಿದರೆ, ಅದನ್ನು ಸ್ವಾಗತ ಮಾಡುತ್ತೇನೆ. ಚಲನಚಿತ್ರ ಮಂದಿರಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದುವರೆಗೂ ಇಷ್ಟು ಯಾರೂ ಮಾಡಿಯೇ ಇಲ್ಲ. ಕನ್ನಡ ಚಲನಚಿತ್ರಗಳಿಗೆ ಇಷ್ಟು ಯಾರು ಮಾಡಿದ್ದಾರೆ. ದಯಮಾಡಿ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಏನೋ ಸ್ವಲ್ಪ ಚಾರು, ಚೂರು ಕೊಟ್ಟಿದ್ದೀರಿ. ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ನಾನು ನೇರವಾಗಿ ಕೇಳುತ್ತಿದ್ದೇನೆ. ನೀವೇನೋ ಸ್ವಲ್ಪ ಸ್ವಲ್ಪ ಕೊಟ್ಟಿದ್ದೀರಿ. ಆದರೆ, ಗಂಜಿ ಕುಡಿಯುವವರಿಗೆ ಸ್ವಲ್ಪ ಗಂಜಿ ಕೊಟ್ಟ ಹಾಗೆ ಆಗಬಾರದು. ತಮಗೆ ನೇರವಾಗಿ ೩–೪ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಆಮೇಲೆ ತಮ್ಮನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಬಹಳ ವರ್ಷಗಳಿಂದ ಕಾಡುತ್ತಿರತಕ್ಕ ಒಂದು ದೊಡ್ಡ ಪ್ರಶ್ನೆ. ಲಂಬಾಣಿ ವಿಲೇಜಸ್‌ಗೆ ಇನ್ನೂ ಕೂಡ ರೆವಿನ್ಯೂ ವಿಲೇಜಸ್ ಸ್ಟೇಟಸ್ ಕೊಡದೇ ಇದ್ದುದರಿಂದ, ನಾವು ಈಗಾಗಲೇ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ೫೧೨ ಲಂಬಾಣಿ ಗ್ರಾಮಗಳನ್ನು ರೆವಿನ್ಯೂ ವಿಲೇಜಸ್ ಆಗಿ ಪರಿವರ್ತನೆ ಮಾಡುವುದಕ್ಕೆ ಪ್ರಿಲಿಮಿನರಿ ನೋಟಿಫಿಕೇಷನ್‌ಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಆದ್ದರಿಂದ, ಮುಂದೆ ಬರತಕ್ಕ ಒಂದೆರಡು ತಿಂಗಳೊಳಗಾಗಿ. ಲಂಬಾಣಿ ತಾಂಡಗಳನ್ನು ರೆವಿನ್ಯೂ ವಿಲೇಜ್‌ಗಳನ್ನಾಗಿ ಪರಿವರ್ತನೆ ಮಾಡತಕ್ಕಂಥ ಎಲ್ಲಾ ಪ್ರಕ್ರಿಯೆಗಳನ್ನೂ ನಾವು ಮುಗಿಸಿಬಿಡುತ್ತೇವೆ ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತೆ ೧೯೯೪–೯೫ರಲ್ಲಿ ಸುಮಾರು ೩೦ ಮಿನಿ ವಿಧಾನಸೌಧಗಳನ್ನು ತಾಲ್ಲೂಕು ಮಟ್ಟದಲ್ಲಿ ಕಟ್ಟುವುದಕ್ಕೆ ಕೂಡ ಪ್ರಾರಂಭ ಮಾಡುತ್ತೇವೆ ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇನ್ನು ಪ್ರತಿ ತಾಲ್ಲೂಕಿನಲ್ಲಿ ಕೂಡ ಡಾ॥ ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರತ್ಯೇಕವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತು ಮುಂದೆ ಬರತಕ್ಕ ದಿವಸಗಳಲ್ಲಿ ಡಾ॥ ಅಂಬೇಡ್ಕರ್ ಪ್ರತಿಮೆಯನ್ನು ಎಲ್ಲಾದರೂ ರಚನೆ ಮಾಡುವುದಕ್ಕೆ ಮುಂದೆ ಬರುವುದಿದ್ದರೆ, ಅದಕ್ಕೆ ಪ್ರತ್ಯೇಕವಾಗಿ ೨೫ ಲಕ್ಷ ರೂಪಾಯಿಗಳನ್ನು ತೆಗೆದಿರಿಸುತ್ತೇನೆ ಮತ್ತು ಯಾವುದಾದರೂ ಡಾ॥ ಅಂಬೇಡ್ಕರ್ ಪ್ರತಿಮೆಯನ್ನು ಮಾಡುವುದಕ್ಕೆ ಮುಂದೆ ಬರುವುದಿದ್ದರೆ, ಅವಕ್ಕೆ ಅನುದಾನವನ್ನೂ ಬಿಡುಗಡೆ ಮಾಡುತ್ತೇನೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇನ್ನು ಬೇರೆ ಬೇರೆ ತೆರಿಗೆ ವಿಚಾರಗಳಲ್ಲಿ, ಬೇರೆ ಬೇರೆ ಸೂಚನೆಗಳನ್ನು ಸನ್ಮಾನ್ಯ ಸದಸ್ಯರು ಈಗಾಗಲೇ ಕೊಟ್ಟಿದ್ದಾರೆ. ಅದನ್ನು ನಾನು ಪ್ರತ್ಯೇಕವಾಗಿ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ. ಮತ್ತು ಈ ಚರ್ಚೆಯಲ್ಲಿ ಭಾಗವಹಿಸಿದಂಥ ನನ್ನ ಎಲ್ಲಾ ಸಹದ್ಯೋಗಿಗಳಿಗೂ ಮತ್ತು ಸ್ನೇಹಿತರಿಗೂ ವಂದನೆಗಳನ್ನು ಸಮರ್ಪಿಸುತ್ತೇನೆ. ೧೯೯೩–೯೪ರಲ್ಲಿ ಲಂಬಾಣಿ ಜನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಪ್ರತ್ಯೇಕವಾಗಿ ಲಂಬಾಣಿ ಅಭಿವೃದ್ಧಿ ನಿಗಮವನ್ನು ರಚನೆ ಮಾಡುತ್ತೇವೆಂಬ ವಿಚಾರವನ್ನು ತಿಳಿಸಿ, ಮುಂದೆ ಬರತಕ್ಕ ಅಂದರೆ, ೧೯೯೪–೯೫ನೇ ಸಾಲು ಆಶ್ವಾಸನೆ ಯುಗ ಅಲ್ಲ, ಅದು ಅನುಷ್ಠಾನದ ಯುಗವೆಂದು ಹೇಳುತ್ತೇನೆ. ಇನ್ನು ಬೆಳಗಾಂ ಜಿಲ್ಲೆಯಲ್ಲಿ ಒಂದು ತೋಟಗಾರಿಕಾ ಕಾಲೇಜು ಮಾಡಬೇಕೆಂದು ಬಹಳ ಬೇಡಿಕೆ ಇತ್ತು. ಇದು ಅರೆಬಾವಿಯ ಸನ್ಮಾನ್ಯ ಶಾಸಕರಿಂದ ಬಂದಿತ್ತು. ಇದು ತೀವ್ರ ಚಿಂತನೆಯಲ್ಲಿದೆ. ಇದನ್ನು ಘೋಷಣೆ ಮಾಡಬೇಕೆಂದು ನನ್ನ ಮನಸ್ಸಿನಲ್ಲಿತ್ತು. ಆದರೆ, ಕೆಲವು ದಿವಸ ಇದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಮುಂದೆ ಬರತಕ್ಕಂಥ ಕೆಲವು ದಿವಸಗಳಲ್ಲಿ ಇದನ್ನು ಘೋಷಣೆ ಮಾಡುತ್ತೇನೆಂದು ಹೇಳುತ್ತೇನೆ. ಇನ್ನು, ತಾವೆಲ್ಲರೂ ಸಕ್ರಿಯವಾಗಿ ಈ ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ಬಹಳ ಸಂತೋಷ...

ಶ್ರೀ ಬಿ.ಎಸ್. ಯಡಿಯೂರಪ್ಪ.—ನೀವು ಘೋಷಣೆ ಮಾಡಿ, ನಮ್ಮದೇನೂ ವಿರೋಧ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾಕಷ್ಟು ಘೋಷಣೆಗಳಾಗಿವೆ, ಆದರೂ, ೧೯೯೪–೯೫ನೇ ಸಾಲಿನಿಂದ, ಬೆಳಗಾಂ ಜಿಲ್ಲೆಯಲ್ಲಿ ಒಂದು ತೋಟಗಾರಿಕಾ ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಘೋಷಣೆಯನ್ನು ಮಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈಗಾಗಲೇ ನಾನು ಹೇಳಿದ ಪ್ರಕಾರ, ೧೯೯೩–೯೪ನೇ ಇಸವಿ ಆಶ್ವಾಸನೆ ಯುಗ ಅಲ್ಲ ಅನುಷ್ಠಾನದ ಯುಗ ಹಾಗೆಯೇ ೧೯೯೪–೯೫ನೇ ಸಾಲೂ ಕೂಡ ಅನುಷ್ಠಾನದ ಯುಗವಾಗುತ್ತದೆ. ಏನೇ ಕಷ್ಟವಾದರೂ ಕೂಡ ನಾವು ಸಂಪನ್ಮೂಲವನ್ನು ಕ್ರೋಡೀಕರಿಸುತ್ತೇವೆ. ಆದ್ದರಿಂದ, ಇವತ್ತು ಅನುಷ್ಠಾನದ ಯುಗದ ಪ್ರವಾಹದ ಎದುರು ಈಜಾಡತಕ್ಕ ಪ್ರಯತ್ನದಲ್ಲಿ ಹತಾಶರಾದಂಥ ನಮ್ಮ ದೇಶಪಾಂಡೆಯವರು ಮತ್ತು ನಮ್ಮ ಸ್ನೇಹಿತರು ಬಹುಶಃ ಈ ಪ್ರವಾಹದ ವಿರುದ್ಧ ಈಜಾಡುವುದಕ್ಕೆ ಅಸಮರ್ಥತೆಯಿಂದ ಈ ಸದನದಲ್ಲಿ ಭಾಗವಹಿಸದೇ ಹಿಂದೆ ಹೋಗಿದ್ದಾರೆ. ಇದೊಂದು ವಿಷಾದಕರ ಸಂಗತಿ. ಮತ್ತೆ ನಮ್ಮ ಇನ್ನು ಕೆಲವು ಸ್ನೇಹಿತರು ಈಜಾಡಲಿಕ್ಕೆ ಹೋಗುವುದಿಲ್ಲವೆಂಬ ಆತ್ಮ ವಿಶ್ವಾಸವಿರುವುದರಿಂದ, ಅವರು ಸದನದಲ್ಲಿ ಹಾಜರಿದ್ದು, ಅವರು ಕೊಟ್ಟಂಥ ಸಹಕಾರಕ್ಕೆ ನನ್ನ ಅಭಿನಂದನೆಗಳನ್ನು ತಿಳಿಸುತ್ತೇನೆ. ಮತ್ತೆ ನಾನು ಇಲ್ಲಿ ಕುಳಿತುಕೊಂಡು

ಉತ್ತರ ಕೊಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಸನ್ಮಾನ್ಯ ಸಭಾಧ್ಯಕ್ಷರ ಸೌಜನ್ಯಕ್ಕೆ ತಲೆಬಾಗಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಇನ್ನೊಂದು ವಿಚಾರ ಮರೆತುಬಿಟ್ಟಿದ್ದೆ. ಬಹಳ ಕಾಲದಿಂದ ಬಹುಶಃ ಎರಡು ದಶಕಗಳಿಂದ. ಅಗ್ರಿಕಲ್ಚರ್ ಲೇಬರರ್ಸ್ ಮತ್ತು ಎಲ್ಲಾ ಕೆಟಗರಿಯಲ್ಲೂ ಕೂಡ ಮಿನಿಮಂ ವೇಜಸ್ ಹೆಚ್ಚು ಮಾಡಿರಲಿಲ್ಲ. ೧೨ ರೂಪಾಯಿಯಿಂದ ಕನಿಷ್ಟ ೨೬ ರೂಪಾಯಿಗೆ ಏರಿಸತಕ್ಕ ಕಾರ್ಯಕ್ರಮವನ್ನು ಹಾಕಿದ್ದೇವೆ. ಅದರಂತೆ ಈ ಮಿನಿಮಂ ವೇಜಸ್‌ನ್ನು ಅಗ್ರಿಕಲ್ಚರ್ ಲೇಬರರ್ಸ್ ಮತ್ತು ಎಲ್ಲಾ ಸೆಕ್ಟಾರ್‌ಗಳಲ್ಲೂ. ೨೬ ರೂಪಾಯಿಯಿಂದ ಸುಮಾರು ೩೫ ರೂಪಾಯಿಗಳಿಗೆ ಏರಿಸಿದ್ದೇವೆ ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತು ಈಗಾಗಲೇ. ೧೯೯೩-೯೪ ರಲ್ಲಿ ಮೂರು ತಿಂಗಳ ಅವಧಿಯಲ್ಲಿ, ಹ್ಯಾಂಡ್ ಲೂಮ್ಸ್ ಮತ್ತು ಹೋಟೆಲುಗಳಿಗೆ ಸಂಬಂಧಪಟ್ಟಂತೆ, ಮಿನಿಮಂ ವೇಜಸ್‌ನ್ನು ಅನೇಕ ವರ್ಷಗಳ ಮೇಲೆ ರಿವೈಸ್ ಮಾಡಿದ್ದೇವೆ. ಇದನ್ನು ಹಿಂದೆ ಅಂದರೆ, ೧೯೮೯ ರಲ್ಲಿ ರಿವೈಸ್ ಮಾಡಲಾಗಿತ್ತು. ಆದ್ದರಿಂದ, ಇದನ್ನು ಫೆಬ್ರುವರಿ ೧೯೯೪ ರಲ್ಲಿ ಮಾಡಿದ್ದೇವೆ. ಮುಂದೆ ಬರತಕ್ಕಂಥ ಎರಡು ತಿಂಗಳುಗಳಲ್ಲಿ ಉಳಿದ ಮಿನಿಮಂ ವೇಜಸ್‌ನ್ನು ಕೂಡ ಅಂದರೆ ಉಳಿದ ಸೆಕ್ಟಾರ್‌ಗಳಲ್ಲಿರತಕ್ಕ ಕನಿಷ್ಟ ವೇತನಗಳನ್ನೂ ಏರಿಸತಕ್ಕ ಎಲ್ಲಾ ಪ್ರಕ್ರಿಯೆಗಳನ್ನು ನಾವು ಕೈಗೊಂಡಿದ್ದೇವೆಂದು ತಿಳಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ೩-೪ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳಿಂದ ನಿಶ್ಚಿತವಾದ ಉತ್ತರಗಳನ್ನು ನಿರೀಕ್ಷೆ ಮಾಡುತ್ತೇನೆ. ತಾವು ಇದುವರೆಗೂ ಹೇಳಿದಂತೆ ಉತ್ತರವನ್ನು ಕೊಡಬೇಡಿ. ಈ ತಾಲ್ಲೂಕು ಪಂಚಾಯಿತಿಗಳು ಹಾಗೂ ಜಿಲ್ಲಾ ಪಂಚಾಯಿತಿಗಳ ಚುನಾವಣೆಯನ್ನು ಕೊನೇಪಕ್ಷ ಮೇ ತಿಂಗಳೊಳಗಾದರೂ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೀರಾ? ಇದನ್ನು ಸ್ಪಷ್ಟ ಮಾಡಬೇಕು. ಎರಡನೆಯದು, ಅನೇಕ ವರ್ಷಗಳಿಂದ, ಅಂದರೆ, ನೀವು ಅಲ್ಲಿ ಕುಳಿತುಕೊಳ್ಳುವುದಕ್ಕೂ ಕೂಡ ಆಶೀರ್ವಾದ ಮಾಡಿದಂಥ ರೈತರಿಗೆ ಒಂದು ರೀತಿಯ ದ್ರೋಹ ಮಾಡಿಕೊಂಡು ಬರುತ್ತಿದ್ದೀರಿ. ಭರವಸೆ ಕೊಟ್ಟು: ವಂಚನೆ ಮಾಡಿಕೊಂಡು ಬರುತ್ತಿದ್ದೀರಿ. ಇದು ನಿಮ್ಮ ಕೊನೇ ಬಜೆಟ್, ಈಗ ಒಂದು ಅವಕಾಶ ಸಿಕ್ಕಿದೆ, ಅದಕ್ಕಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡುವಂಥಾದ್ದು ಮತ್ತು ಒತ್ತಾಯ ಮಾಡುವಂಥಾದ್ದು ಏನೆಂದರೆ......

(ಗೊಂದಲ)

ಶ್ರೀ ಪಾಟೀಲ್ ನಾಗರಾಜ್.—ಮುಖ್ಯ ಮಂತ್ರಿಗಳ ಉತ್ತರವಾದ ಮೇಲೆ, ಕೆಲವು ವಿಚಾರಗಳನ್ನು ಕೇಳಬೇಕೆಂದರೆ, ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಜಿ. ರಾಜುಗೌಡ.—ಅವರು ಕೇಳಬೇಕಾದರೆ, ಸೌಜನ್ಯದಿಂದ ಕೇಳಲಿ. ವಚನಭ್ರಷ್ಟ ಎಂದು ಹೇಳುವುದು ಸರಿಯೇ? ವಚನಭ್ರಷ್ಟ ಎಂದು ಹೇಳಿದರೆ, ಯಾರು ವಚನಭ್ರಷ್ಟರಾಗಿದ್ದರು? ದ್ರೋಹ ಎಂದು ಹೇಳಿದರೆ ಸರಿಯೇ? ಇದು ಸರಿಯಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಅಧಿಕಾರದ ಮತ್ತು ಏರಿದರೆ ಹೇಗಾಗುತ್ತದೆ ಎನ್ನುವುದಕ್ಕೆ ಇದು ಉದಾಹರಣೆ. ಅಧಿಕಾರದ ಮತ್ತು ನೆತ್ತಿಗೆ ಏರಿದರೆ, ಈ ರೀತಿ ಮನಬಂದಂತೆ ವರ್ತನೆ ಮಾಡುವಂತಾದ್ದಾಗುತ್ತದೆ, ಮಾನ್ಯ ಅಧ್ಯಕ್ಷರೇ ಇದುವರೆಗೆ ರೈತರಿಗೆ ಅನ್ಯಾಯ ಮಾಡಿಕೊಂಡು ಬಂದಿದ್ದಾರೆ. ಇದು ತಮ್ಮ ಕೊನೆ ಬಜೆಟ್. ಇನ್ನು ನಿಮಗೆ ಅವಕಾಶ ಸಿಗುವುದಿಲ್ಲ. ಕೊನೆ ಪಕ್ಷ, ತಮಗೆ ಕಳಕಳಿ ಇದ್ದರೆ, ಸಹಕಾರ ಸಂಘದಲ್ಲಿ ರೈತರು ಪಡೆದಿರತಕ್ಕಂಥ ಸಾಲದ ಮೇಲಿರತಕ್ಕಂಥ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಧೈರ್ಯವಾಗಿ ತಾವು ಅನೌನ್ಸ್ ಮಾಡಬೇಕು. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಮೇ ತಿಂಗಳ ಒಳಗಾಗಿ ಮಾಡಲಾಗುತ್ತದೆಯೋ ಎಂದು ಸ್ಪಷ್ಟ ಮಾಡಬೇಕು. ರೈತರು ವ್ಯವಸಾಯ ಮಾಡುವುದಕ್ಕೆ ಟ್ರ್ಯಾಕ್ಟರ್‌ನ್ನು ಪಡೆಯುವುದಕ್ಕೆ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳಬೇಕಾದರೆ ೧೨ ಪರ್‌ಸೆಂಟ್ ರಿಜಿಸ್ಟ್ರೇಷನ್ ಫೀಯನ್ನು ಕಟ್ಟಬೇಕಾಗುತ್ತದೆ. ಅದೇ ಇಂಡಸ್ಟ್ರಿಯಲಿಸ್ಟ್‌ಗಳು ಒಂದು ಸಾವಿರ ರೂಪಾಯಿ ಸಾಲಕ್ಕೆ ೧ ರೂಪಾಯಿ ನಾಮಿನಲ್ ಚಾರ್ಜ್ ಕಟ್ಟುತ್ತಾನೆ. ಆದ್ದರಿಂದ, ಈ ಸ್ಟ್ಯಾಂಪ್ ಡ್ಯೂಟಿಯನ್ನು ತೆಗೆದು ಹಾಕಬೇಕೆಂದು ಕೇಳುತ್ತೇನೆ.

ಆಮೇಲೆ ತಾವು ಕ್ಷೀರ ಯೋಜನೆಮೂಲಕ ೧ನೇ ತರಗತಿಯ ಮಕ್ಕಳಿಗೆ ಹಾಲು ಕೊಡುತ್ತಿದ್ದೀರಿ ತಮಗೆ ಗೊತ್ತಿರುವ ಹಾಗೆ, ಗ್ರಾಮೀಣ ಪ್ರದೇಶಗಳಲ್ಲಿ ೧ನೇ ತರಗತಿಯಿಂದ ೪ನೇ ತರಗತಿಯ ಮಕ್ಕಳು ಒಂದೇ ರೂಮಿನಲ್ಲಿ ಕುಳಿತುಕೊಳ್ಳುವ ಪ್ರಸಂಗ ಇದೆ. ಒಂದು ಮಗು ಹಾಲು ಕುಡಿಯುವುದನ್ನು ಇನ್ನೊಂದು ಮಗು ನೋಡುತ್ತಿರುತ್ತದೆ. ಆದ್ದರಿಂದ, ೧ನೇ ತರಗತಿಯ ಮಕ್ಕಳಿಗೆ ಕೊಡುವ ಹಾಲನ್ನು ನಿಲ್ಲಿಸಿಬಿಡಿ ಅಥವಾ ತಮಗೆ ಪ್ರಾಮಾಣಿಕತೆ ಇದ್ದರೆ ೪ನೇ ತರಗತಿಯ ಮಕ್ಕಳಿಗೂ ಹಾಲು ಕೊಡುವ ಯೋಜನೆಯನ್ನು ವಿಸ್ತರಿಸಿ. ನಂತರ ಪಿ.ಡಬ್ಲ್ಯೂಡಿ. ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ ಈಗಾಗಲೇ ಕೆಲಸ ಮಾಡಿಸಿರುವುದಕ್ಕಾಗಿ ಕಂಟ್ರಾಕ್ಟರುಗಳಿಗೆ ೧೨೦ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಮಾರ್ಚ್ ಕೊನೆಯೊಳಗೆ ಒಂದು ಪೈಸೆ ಬ್ಯಾಲೆನ್ಸ್ ಇಲ್ಲದೆ ಪೇಮೆಂಟ್ ಮಾಡುತ್ತೇವೆಂದು ಸ್ಪಷ್ಟವಾಗಿ ಭರವಸೆ ಕೊಡುತ್ತೀರಾ ?

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೆ, ಮಹಿಳಾ ಮಂಡಳಿಗಳ ರಿಜಿಸ್ಟ್ರೇಷನ್ ರಿನ್ಯೂವಲ್ ಫೀಜನ್ನು ವರ್ಷಕ್ಕೆ ನೂರು ರೂಪಾಯಿ ಮಾಡಿದ್ದೀರಿ. ಈ ಮಹಿಳಾ ಮಂಡಳಿಗಳಿಗೆ ಎಲ್ಲಿಂದ ಹಣ ಬರುತ್ತದೆ ? ಮಹಿಳಾ ಮಂಡಳಿಗಳ ಪುನಶ್ಚೇತನಕ್ಕೆ ವರ್ಷಕ್ಕೆ ೧೦೦೦೦ ರೂಪಾಯಿ ಯಾದರು ಕೊಡಬೇಕೆಂದು ಮಾನ್ಯ ಸದಸ್ಯಿಣಿಯರಾದ ಸುಮಾವಸಂತರವರು ಮಾತನಾಡುವಾಗ ಹೇಳಿರುವಾಗ ರಿಜಿಸ್ಟ್ರೇಷನ್ ರಿನ್ಯೂವಲ್ ಫೀಜ್ ಎಂದು ೧೦೦ ರೂಪಾಯಿ ಹಾಕಿರುವುದು ಸರಿಯಲ್ಲ. ಇದನ್ನು ತೆಗೆದು ಹಾಕಬೇಕೆಂದು ಎಲ್ಲಾ ಮಹಿಳಾ ಮಂಡಳಿಗಳ ಪರವಾಗಿ ನಾನು ಕೇಳುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.—ಸನ್ಮಾನ್ಯ ಮುಖ್ಯ ಮಂತ್ರಿಗಳು, ಶ್ರೀರಂಗಪಟ್ಟಣ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಏನೂ ಹೇಳಲಿಲ್ಲ. ಟಿಪ್ಪೂ ಸುಲ್ತಾನ್‌ರವರ ಫೋಟೋಗಳನ್ನು ಎಲ್ಲಾ ಆಫೀಸ್‌ಗಳಿಗೂ ಹಾಕಿಸಿದ್ದೀರಿ, ಅದೇ ರೀತಿ ಹಿಂದೆ ಕರ್ನಾಟಕ ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಅಭಿವೃದ್ಧಿಗೆ ತಾವು ಏನಾದರೂ ಮಾಡಬೇಕು.

ಶ್ರೀ ಕೆ. ಹರ್ಷಕುಮಾರಗೌಡ.—ಮಾನ್ಯ ಅಧ್ಯಕ್ಷರೆ ತಮ್ಮ ಮೂಲಕ ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮೈಸೂರು ನಗರದ ಹಲವಾರು ಬೇಡಿಕೆಗಳ ಬಗ್ಗೆ ಏನೂ ಕಾರ್ಯಗತವಾಗಿಲ್ಲ. ನೂರು ವರ್ಷದ ಹಳೆಯ ಒಳ ಚರಂಡಿಯ ಮರು ವ್ಯವಸ್ಥೆಗೆ ೧೦೦ ಕೋಟಿ ರೂಪಾಯಿ ಬಿಡುಗಡೆಯಾಗಬೇಕಿತ್ತು. –ಮೈಸೂರು ನಗರದಲ್ಲಿ ಟ್ರಾಫಿಕ್ ಸಾಂದ್ರತೆ ಹೆಚ್ಚಿರುವುದರಿಂದ ೫೦ ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಲಾರಿ ಟರ್ಮಿನಸ್ ಆಗಬೇಕಾಗಿದೆ. ನರ್ಸರಿ ಟೀಚರ್ಸ್ ತಮ್ಮ ಸೇವಾ ಅವಧಿಯಲ್ಲಿ ಯಾವುದೇ ಅನುಕೂಲತೆಗಳು ಸಿಗದೆ ನಿವೃತ್ತರಾಗುತ್ತಿರುವ ಬಗ್ಗೆ ಅವರು ಈಗಾಗಲೇ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ತುರ್ತಾಗಿ ಅನುಕೂಲತೆಗಳನ್ನು ಒದಗಿಸಿಕೊಡಬೇಕೊಡಬೇಕು. ಸತ್ಯಾಗ್ರಹಿಗಳಲ್ಲಿ ಒಬ್ಬರು ಉಪವಾಸದಿಂದ ಆಸ್ಪತ್ರೆ ಸೇರಿದ್ದಾರೆ. ಆಮೇಲೆ ಮೈಸೂರು ನಗರವು ಅಗರಬತ್ತಿ ತಯಾರಿಕೆಯಲ್ಲಿ ಹೆಸರುವಾಸಿಯಾಗಿದೆ. ನಮ್ಮ ದೈನಂದಿನ ಬದುಕು ಪೂಜೆ ಮಾಡುವುದರಿಂದ ಪ್ರಾರಂಭವಾಗುವುದರಿಂದ ಅಗರಬತ್ತಿಯನ್ನು ಉಪಯೋಗ ಮಾಡುತ್ತೇವೆ ಈ ಅಗರಬತ್ತಿಗೆ ೧೦ ಪರ್‌ಸೆಂಟ್ ಟ್ಯಾಕ್ಸ್ ಹಾಕಲಾಗಿದೆ. ಮೈಸೂರು ನಗರ ಒಂದರಲ್ಲೇ ಸುಮಾರು ೩೦ ರಿಂದ ೪೦ ಸಾವಿರ ಜನ ಈ ಅಗರಬತ್ತಿ ತಯಾರಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲೂ ನಿರುದ್ಯೋಗ ಕಡಿಮೆ ಮಾಡುವಲ್ಲಿ ಇದು ಒಂದು ಒಳ್ಳೆಯ ಉದ್ದಿಮೆಯಾಗಿದೆ. ಆದ್ದರಿಂದ ಇದಕ್ಕೆ ಹಾಕಿರುವ ಟ್ಯಾಕ್ಸ್‌ನಲ್ಲಿ ೪ ಪರ್‌ಸೆಂಟ್ ಆದರೂ ಕಡಿಮೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಕುಳಿತೇ ಭಾಷಣ ಮಾಡತಕ್ಕಂಥ ವ್ಯವಸ್ಥೆಗೆ ತಲುಪಿದ್ದು ನಮಗೆಲ್ಲಾ ಅತ್ಯಂತ ನೋವಾಗಿದೆ. ಅವರು ಬೇಗ ಗುಣಮುಖರಾಗಲೆಂದು ತಮ್ಮ ಮೂಲಕ ಅವರಿಗೆ ಹೇಳುತ್ತಿದ್ದೇನೆ. ಗೊಂದಲದಲ್ಲಿ ಆಯವ್ಯಯವನ್ನು ಮಂಡಿಸುವಾಗ ಮುಖ್ಯ ಮಂತ್ರಿಗಳು ೬ ಗ್ಲಾಸ್ ನೀರು ಕುಡಿದರು. ಈಗ ಅವರು ಬಹಳ ತೊಂದರೆಯಲ್ಲಿ ಉತ್ತರ ಕೊಡುವುದಕ್ಕೆ ಬಂದಿದ್ದಾರೆ. ಆದರೂ ನಾನು ಅವರಿಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ಕೆಲವು ಜನರಿಗೆ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಿ ಮನೆಗಳ ಆಧಾರದ ಮೇಲೆ ರಿಜಿಸ್ಟ್ರೇಶನ್ ಮಾಡುತ್ತಿದ್ದಾರೆ. ಅದು ಅಗಾಧವಾದ. ಆದರ ಬದಲು ನಿವೇಶನದ ಆಧಾರದ ಮೇಲೆ ರಿಜಿಸ್ಟ್ರೇಷನ್ ಮಾಡಬೇಕೆಂದು ಕೇಳುತ್ತೇನೆ. ಎರಡನೆಯದಾಗಿ ಗಡಿನಾಡು ಪ್ರದೇಶದ ಅಭಿವೃದ್ಧಿ ಬಗ್ಗೆ ನಾನು ಹಲವಾರು ಸಾರಿ ತಮಗೆ ಪತ್ರ ಬರೆದಿದ್ದೇನೆ ಮತ್ತು ಖುದ್ದಾಗಿ ಮಾತನಾಡಿ

ದ್ದೇನೆ. ಇದಕ್ಕಾಗಿ ತಾವು ೧೫ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಇಡುವ ಬಗ್ಗೆ ಯೋಚನೆ ಮಾಡಿಲ್ಲ. ಗಡಿನಾಡು ಅಭಿವೃದ್ಧಿಗೆ ಒಂದು ವಿಶೇಷವಾದ ಯೋಜನೆ ಮಾಡಿ ಅದಕ್ಕೆ ಹೆಚ್ಚಿನ ಹಣ ನೀಡಬೇಕೆಂದು ನನ್ನ ಅತ್ಯಂತ ಕಳಕಳಿಯ ಮನವಿ. ತಾವು ಕನ್ನಡ ಗಡಿನಾಡ ಬಗ್ಗೆ ಕನ್ನಡನಾಡಿನ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೀರಿ. ಆದ್ದರಿಂದ ಗಡಿನಾಡು ಅಭಿವೃದ್ಧಿಗೆ ಹೆಚ್ಚು ಹಣವನ್ನು ಕೊಡುವ ಬಗ್ಗೆ ಭರವಸೆ ಕೊಡಬೇಕು. ಮತ್ತು ಮಲೆನಾಡು ಅಭಿವೃದ್ಧಿಗೆ ತಾವು ಕೊಟ್ಟಿರ ತಕ್ಕಂಥ ಹಣ ಬಹಳ ಕಡಿಮೆ ಇರುವುದರಿಂದ ಕನಿಷ್ಟ ಪಕ್ಷ ೫೦ ಕೋಟಿ ರೂಪಾಯಿಯಾದರೂ ಇಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಆಮೇಲೆ ಬಂದಂಥ ಮುಖ್ಯ ಮಂತ್ರಿಗಳೆಲ್ಲಾ ಹಿಂದುಳಿದ ವರ್ಗದವರಿಗೆ ಅಪಾರವಾಗಿ ಸಹಾಯ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ನೀವು ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಯಾವಾಗ ಜಾರಿಗೆ ತರುತ್ತೀರೆಂದು ಸ್ಪಷ್ಟಪಡಿಸಿ. ನಂತರ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನಕ್ಕೆ ಸರ್ಕಾರದಲ್ಲಿ ಕಾನೂನು ತರುತ್ತೀರಾ ಎಂದು ಕೇಳುತ್ತೇನೆ. ಆಮೇಲೆ ಚಾಮರಾಜನಗರದಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವುದಕ್ಕೆ ಈ ಸಾರಿ ಬಜೆಟ್‌ನಲ್ಲಿ ಸೇರಿಸುತ್ತೇವೆಂದು ಸ್ಪಷ್ಟವಾಗಿ ಈಗಾಗಲೇ ಭರವಸೆ ಕೊಟ್ಟಿದ್ದೀರಿ. ಅದರಂತೆ ತಾವು ಮಾಡಿ. ಕೊನೆಯದಾಗಿ ಕನ್ನಡ ಪುಸ್ತಕ ಬರಹಗಾರರಿಗೆ ಸಹಾಯಧನ ಕೊಡುತ್ತೇವೆಂದು ತಾವು ಹೇಳಿದ್ದೀರಿ. ನಾನೇ ಒಂದು ಪುಸ್ತಕವನ್ನು ಬರೆಯಬೇಕೆಂದು ಮಾಡಿದ್ದೇನೆ. ಅದು ಬಹಳ ಸಂದರ್ಭವಾಗಿರುತ್ತದೆ. ಅದರ ಹೆಸರು '' ಮೊಯಿಲಿಯವರ ಭರವಸೆಗಳು ಮತ್ತು ಘೋಷಣೆಗಳು '' ಈ ಪುಸ್ತಕಕ್ಕೆ ತಾವು ಸಹಾಯಧನವನ್ನು ಕೊಡುತ್ತೀರಾ ?

SRI. QAMARUL ISLAM.—Sir, I want to be specific. The Hon'ble Chief Minister has announced the second phase of Bhima Scheme in Gulbarga but no provision was made in the Budget for the second phase of Bhima scheme. will you make some provision in this Budget ? The second question Is, Bidar Hiriyur road and Bangalore–Mysore Roads have been taken up for improvement, Bidar–Hiriyur road covers four dictricts of Hyderabad Karnataka area also Bijapur. I wanted to know why this road has not been taken up for the Improvement whereas Mysore-Bangalore and Mysore Honnavar has already been taken up. I wanted that this road is to be included in this Budget. You have already assured when you have come to Hyderabad Karnataka that Rs.65 crores has been allotted for HKDB. Atleast 100 crores Is required. So, Rs 45crore should be given. You know that this area has to be improveds Rs.45 crores in adidtion to Rs. 65 crores should be given int his. Budget.

ಶ್ರೀ ಟಿ. ಪಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಾದ್ಯಂತ ಸತತವಾಗಿ ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಿಕ್‌ನೆಸನ್ನು ಡಿಕ್ಲೇರ್ ಮಾಡುವಂತಹ ಅಧಿಕೃತ ಸಮಿತಿ ನಮ್ಮ ರಾಜ್ಯದಲ್ಲಿಲ್ಲ. ಬೇರೆ ರಾಜ್ಯಗಳಲ್ಲಿ ಎಲ್ಲಾ ಕಡೆ ಇರಬೇಕಾದರೆ ಇದರ ಪ್ರಸ್ತಾವನೆ ೧೦ ವರ್ಷಗಳಿಂದಲೂ ಮೂಲೆ ಗುಂಪಾಗಿ ಬಿದ್ದಿದೆ. ಅದರ ಪರಿಣಾಮ, ಒಂದು ಉದಾಹರಣೆ ಕೊಡುತ್ತೇನೆ, ನಿನ್ನೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇವತ್ತು ಮಿನಿ ಸಿಮೆಂಟ್ ಪ್ಲಾಂಟ್‌ಗಳು ಸಣ್ಣ ಕೈಗಾರಿಕೆ ವ್ಯಾಪ್ತಿಯಲ್ಲಿ ಬರುತ್ತಾ ಇರುವಂಥವು ಮೀಡಿಯಂ ಸ್ಕೇಲ್ ಆದರೆ ಬಿಐಎಫ್‌ಆರ್ ಇರುತ್ತದೆ. ಇದಕ್ಕೆ ಯಾವುದೇ ಅಧಿಕೃತ ಸಮಿತಿ ಇಲ್ಲ. ಹಾಗಾಗಿ ಅವರಿಗೆ ಯಾವುದೇ ತರಹದ ಸೌಲಭ್ಯ ಕೊಡದಿರುವಂತಹ ಪರಿಸ್ಥಿತಿ ಒದಗಿರುವುದರಿಂದ ಆ ಕಮಿಟಿ ಬೇಗ ಮಾಡುತ್ತೀರಾ ಮತ್ತು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಂತಹ ಸುಮಾರು ೧೦೦ ಕೋಟಿ ರೂಪಾಯಿ ಬಂಡವಾಳ ಹಾಕಿ ಯಾವುದೇ ರೀತಿ ಆ ಬಂಡವಾಳ ವಾಪಸ್ ಬರದೇ ಇರುವಂತಹ ಮಟ್ಟಕ್ಕೆ ಆರ್ಥಿಕ ಸಂಸ್ಥೆಗಳು ಆಗಿರಬೇಕಾದರೆ ಅದಕ್ಕೆ ಮಿನಿ ಸಿಮೆಂಟ್ ಕಾರ್ಖಾನೆಗಳನ್ನು ಪುನಶ್ಚೇತನ ಮಾಡುವುದಕ್ಕೆ ಯಾವತರಹದ ಕಾರ್ಯಕ್ರಮ ಹಾಕುತ್ತೀರಾ ? ಮತ್ತು ನಮ್ಮ ಡಿಪಿಎಪಿ ಸ್ಕೀಮಿನಲ್ಲಿ ೧೯೭೮–೮೦ರ ಅವಧಿಯಲ್ಲಿ ರಾಜ್ಯಾದ್ಯಂತ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಸುಮಾರು ೮–೧೦ ಕೋಟಿ ರೂಪಾಯಿ ಹಣ ಸಾಲದು ಎಂದು ಆ ಕೆರೆಗಳಾಗಲೀ ಕಟ್ಟೆಗಳಾಗಲೀ ನಿಂತುಹೋಗಿವೆ. ಜಿಲ್ಲಾಪರಿಷತ್ತಿನವರೂ ಅವುಗಳ ಕಡೆ ಗಮನಹರಿ

ಸುತ್ತಿಲ್ಲ ಮತ್ತು ಮೈನರ್ ಇರಿಗೇಷನ್‌ನವರೂ ಗಮನಹರಿಸದಂತಿರುವ ಪರಿಸ್ಥಿತಿ ಇರುವುದರಿಂದ ಇವತ್ತು ನೀವು ೮-೧೦ ಕೋಟಿ ರೂಪಾಯಿ ಬಂಡವಾಳ ಕೊಡುವುದರಿಂದ ಸುಮಾರು ೭೦ರಿಂದ ೮೦ಕೋಟಿ ಅಸೆಟ್ ಕ್ರಿಯೇಟ್ ಮಾಡಿದಂತಾಗುತ್ತದೆ. ಅದಕ್ಕಾಗಿ ಬಜೆಟ್‌ನಲ್ಲಿ ಅವಕಾಶ ಮಾಡಿಕೊಡಬೇಕು.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಭಾಷಣದ ಕನ್ನಡ ಅನುವಾದದ ೨೧ನೇ ಪುಟದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಸಂಬಂಧಪಟ್ಟಂತೆ ೧೯೯೧-೯೨ ಹಾಗೂ ೧೯೯೨-೯೩ರಲ್ಲಿ ೬೪೮೦ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಯೋಜನೆಗೆ ಅನುಮತಿ ನೀಡಿದೆ ಮತ್ತು ಪ್ರಸಕ್ತ ಹಣಕಾಸು ವರ್ಷದಲ್ಲಿ ೧೦,೩೦೦ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಬಂಡವಾಳಕ್ಕೆ ಅನುಮೋದನೆ ನೀಡಲಾಗಿದೆ, ಇನ್ನು ಮೂರ್‍ನಾಲ್ಕು ವರ್ಷಗಳಲ್ಲಿ ಯೋಜನೆಗಳಲ್ಲಿ ಸುಮಾರು ೨೬,೨೦೦ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಆಗುವುದೆಂದು ನಾನು ನಿರೀಕ್ಷಿಸಿದ್ದೇನೆ ಎಂದಿದ್ದಾರೆ. ಅನಂತರ ೨೨ನೇ ಪುಟದಲ್ಲಿ ೨೨೦೦ ಕೋಟಿ ರೂಪಾಯಿಗಳ ಅಂದಾಜು ಬಂಡವಾಳ ಹೂಡಿಕೆಯೊಂದಿಗೆ ಸಿಮೆಂಟ್ ಸ್ಥಾವರನ್ನು ಸ್ಥಾಪನೆ ಮಾಡಲಾಗುವುದು ಎಂದಿದ್ದಾರೆ. ಮತ್ತೊಂದು ೩೨೫೦ ಕೋಟಿ ರೂಪಾಯಿಗಳ ಹೆಚ್ಚಿನ ಬಂಡವಾಳ ಹೂಡಿಕೆಯ ಮಂಗಳೂರು ರಿಫೈನರೀಸ್ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್‌ನ ಎರಡನೇ ಹಂತದ ವಿಸ್ತರಣಾ ಯೋಜನೆ ಅನುಷ್ಠಾನದ ಹಂತದಲ್ಲಿರುವ ದೊಡ್ಡ ಯೋಜನೆಗಳಿವೆರಡು. ಒಟ್ಟು ಲೆಕ್ಕಹಾಕಿದರೆ ೩೧,೪೫೦ ಕೋಟಿ ರೂಪಾಯಿ ಆಗುತ್ತದೆ. ನಾನು ಮಧ್ಯೆ ಪ್ರಶ್ನೆ ಕೇಳಿದಕ್ಕೆ ತಾವು ಹೇಳಿದಿರಿ, ಕಳೆದ ವಾರ್ಷಿಕ ಯೋಜನೆ ವರ್ಷದಲ್ಲಿ ಕೈಗಾರಿಕೆಗೆ ನಾವು ೨೧೨ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಅಂದರೆ ಈಗ ನಾನು ಒಟ್ಟು ಲೆಕ್ಕ ಏನು ಹೇಳಿದೆ ಅದನ್ನು ಪ್ರತಿ ವರ್ಷದ ವಾರ್ಷಿಕ ಯೋಜನಾ ವೆಚ್ಚದಿಂದ ಭಾಗಕಾರ ಮಾಡಿದರೆ ನಾವೇನು ವಾರ್ಷಿಕ ಕೈಗಾರಿಕಾ ಯೋಜನೆ ಮಾಡಿದ್ದೇವೆ ಅದರ ೧೬೦ ವರ್ಷಕ್ಕೆ ಸಮ ೧೬೦ ವರ್ಷ ವಾರ್ಷಿಕ ಯೋಜನೆ ಕೈಗಾರಿಕೆಗೆ ತಾವು ಬಂಡವಾಳವನ್ನು ನಿರೀಕ್ಷೆ ಮಾಡಿದ್ದೀರಿ. ಈ ಬಂಡವಾಳ ಎಲ್ಲಿಂದ ಬರುತ್ತದೆ ? ಏನು ಮಾಡುವುದಕ್ಕೆ ಕರ್ನಾಟಕಕ್ಕೆ ಬರುತ್ತಿದೆ ಎಂದು ದಯವಿಟ್ಟು ಸ್ಪಷ್ಟಪಡಿಸಬೇಕು.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ವಿಷಯಗಳ ಕಮಿಟಿ ಎಂದು ಈಗ ೧೫ ಕಮಿಟಿಗಳನ್ನು ಮಾಡಿದ್ದೀರಿ. ಆದರೆ ಎಸ್‌ಪಿಸಿ ಫಂಡ್ ನಮ್ಮ ಹರಿಜನ ಗಿರಿಜನರಿಗಾಗಿ ಮೀಸಲಿಡುವಂಥಹದು ೩೯ ಇಲಾಖೆಗಳಿಗೆ ಅದು ಹಂಚಿಹೋಗಿದೆ. ಅದನ್ನು ಯಾರೂ ಪರಿಶೀಲನೆ ಮಾಡುವವರೇ ಇಲ್ಲ. ಈಗ ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ಎಲ್ಲ ಇಲಾಖೆಗಳವರನ್ನು ಕರೆದು ಮಾತನಾಡಿ ಅದನ್ನು ಒಟ್ಟಾರೆ ಕೂಡಿಸಿ ಮೂರ್‍ನಾಲ್ಕು ಯೋಜನೆ ಮಾಡುತ್ತೇವೆಂದಿದ್ದಾರೆ. ಎಸ್‌ಸಿಎಸ್‌ಟಿ ಶಾಸಕರು ೩೭ ಜನ ಆರಿಸಿ ಬಂದಿದ್ದು ಅವರು ತಿಂಗಳಿಗೊಂದು ಸಾರಿ ಆದರೂ ಆ ಎಸ್‌ಪಿಸಿಯನ್ನು ರಿವ್ಯೂ ಮಾಡಿ ಯೋಜನೆ ತಯಾರು ಮಾಡಿ ಕೊಡುವಂತಹ ಒಂದು ಹೊಸ ಕಮಿಟಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿ ಕೊಡಬೇಕೆಂದು ಆ ಎಸ್‌ಪಿಸಿ ಫಂಡ್ ಲ್ಯಾಪ್ಸಾಗದಂತೆ ಅದನ್ನು ರಿವ್ಯೂ ಮಾಡಿ ಅದನ್ನು ಯಾವುದಕ್ಕೆ ಉಪಯೋಗಿಸಬೇಕೆಂಬ ಅಭಿಪ್ರಾಯ ಕೊಡುವಂತಹ ಒಂದು ಸಮಿತಿ ರಚನೆ ಮಾಡಿಕೊಡಬೇಕು, ಅದರಿಂದ ಉಪಯೋಗವಾಗುತ್ತದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದಲ್ಲದೆ ಶಾಸಕರನ್ನೆಲ್ಲ ಸೇರಿಸಿ ಕಾರ್ಯಕ್ರಮ ರೂಪಿಸಿ ಯಾವ ಯೋಜನೆ ಮಾಡಿದರೆ ಆ ಜನಕ್ಕೆ ಉಪಯೋಗ ಆಗುತ್ತದೆಂದು ವರದಿ ತೆಗೆದುಕೊಂಡು ಅದರ ಮೇಲೆ ಆ ಸಮಿತಿ ಮಾಡುವುದಕ್ಕೆ ಅನುಮತಿ ಕೊಡಬೇಕು. ಮತ್ತು ರೈತರ ಬಡ್ಡಿ ಮಾಫಿ ಮಾಡಬೇಕೆಂದು ಯಡಿಯೂರಪ್ಪನವರು ಮಾತನಾಡಿದರು. ನಾನೂ ಸಹಿತ ಅದರ ಬಗ್ಗೆ ಕೇಳುತ್ತೇನೆ. ಪ್ರತಿ ಸಾರಿಯೂ ೭ ಪರ್ಸೆಂಟ್ ಬಡ್ಡಿಗೆ ಇಳಿಸುತ್ತಿದ್ದಿರಿ, ಸಬ್ಸಿಡಿ ಕೊಟ್ಟು ಎಲ್ಲ ಮಾಡಿ. ಈ ಸಾರಿ ತಾವು ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದೀರಿ, ಬಹಳ ಸಂತೋಷ. ಆದರೆ ರೈತರಿಗೆ ೭ ಪರ್ಸೆಂಟ್ ಬಡ್ಡಿ ಕೊಟ್ಟು ಉಳಿದದ್ದನ್ನು ಸಬ್ಸಿಡಿ ಕೊಡುತ್ತೇವೆಂದು ಹೇಳಲಿಲ್ಲ. ದಯಮಾಡಿ ಆ ಸಬ್ಸಿಡಿ ಕೊಡುವಂತಹ ವ್ಯವಸ್ಥೆಯನ್ನು ಮುಂದುವರಿಸಿ ರೈತರಿಗೆ ೭ ಪರ್ಸೆಂಟ್ ಬಡ್ಡಿಗೇ ತರಬೇಕು. ಏಕೆಂದರೆ ಸಾಲ ತೆಗೆದುಕೊಂಡಿರುವವರು ಬಹಳ ಕಡಿಮೆ ಜನ ಎಂದು ಲೆಕ್ಕಹಾಕಬೇಡಿ. ರೈತ ಎಂಬುದರ ಬಗ್ಗೆ ಲೆಕ್ಕ ಇಟ್ಟುಕೊಂಡು ತಾವು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಕಂದಾಯ ಇಲಾಖೆ. ಈಗ ತಾವು ಪಟೇಲರಿಗೆ ಸಂಬಳ ೫೦೦ ರೂಪಾಯಿಗಳಿಗೆ ಏರಿಸಿದ್ದೀರಿ. ಆದರೆ ಕಂದಾಯ ಇಲಾಖೆಯಲ್ಲಿ ಸಹಾಯಕ ಹುದ್ದೆ ಎಂದು ಬರೀ ಹರಿಜನರನ್ನು ತೋಟ ತಳವಾರರಿದ್ದವರನ್ನು ನೇಮಕ ಮಾಡಿಕೊಂಡಿದ್ದೀರಿ. ಅವರು ಜವಾನರಿಗಿಂಥ ಹೆಚ್ಚಿನ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಬೆಳಗ್ಗೆಯಿಂದ ರಾತ್ರಿ ತನಕ ವಿಲೇಜ್ ಅಕೌಂಟೆಂಟ್ ಜೊತೆಯಲ್ಲಿ, ರೆವಿನ್ಯೂ ಇನ್ಸ್‌ಪೆಕ್ಟರ್ ಜೊತೆಯಲ್ಲಿ ಚಾರ್ಜಿಲ್ಲದೇನೆ ಅವನು ಕಾಗದ ತೆಗೆದುಕೊಂಡು ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಹೋಗಿ ಕೊಡುತ್ತಾನೆ. ಅದನ್ನು ಖಾಯಂ ಹುದ್ದೆ ಎಂದು ಪರಿಗಣಿಸಿ ಇಲ್ಲಾಂದರೆ ಸಂಬಳವನ್ನಾದರೂ ಸ್ವಲ್ಪ ಹೆಚ್ಚಿಗೆ ಮಾಡುವ ರೀತಿಯಲ್ಲಿ ಉಪಕಾರ ಮಾಡಿಕೊಡಬೇಕು. ಕೊನೇಪಕ್ಷ ಒಂದೂವರೆ ಸಾವಿರ

ರೂಪಾಯಿಗಳಿಗಾದರೂ ಅವರ ಸಂಬಳ ಏರಿಸಬೇಕು. ಆಮೇಲೆ ಹರಿಜನ ಗಿರಿಜನರಿಗೆ ಲಕ್ಷಬಾವಿ ಯೋಜನೆಯಲ್ಲಿ ಅಥವಾ ಎಲ್ಲಾದರೂ ಒಂದು ಪಿಕಪ್ ಕಟ್ಟಿ ನೀರು ಬರುವಂತೆ ಮಾಡುತ್ತೀರಿ. ಆದರೆ ಅವನೇ ಒಂದು ಸ್ವಂತ ಬೋರ್‌ವೆಲ್ ತೆಗೆದುಕೊಂಡಿರುತ್ತಾನೆ. ಆದರೆ ನಿಮ್ಮ ನಿಯಮಾವಳಿ ಬರುವುದಿಲ್ಲ. ೨೦೦ ಅಥವಾ ೩೦೦ ಮೀಟರ್ ಒಳಗೆ ಹಾಕಿಕೊಳ್ಳುವುದಕ್ಕೆ. ಅವರಿಗೆ ಯಾವ ಬ್ಯಾಂಕಿನಲ್ಲೂ ಸಿಗುವುದಿಲ್ಲ, ಪಂಪ್‌ಸೆಟ್ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅವರಿಗೆ ನೀರಾವರಿ ಮಾಡಿಕೊಳ್ಳುವುದಕ್ಕೆ ಪಂಪ್‌ಸೆಟ್ ಸೌಲಭ್ಯವನ್ನು ತಾವು ಈ ಎಸ್‌ಸಿಪಿ ಫಂಡ್‌ನಲ್ಲಿ ಪ್ರೊವೈಡ್ ಮಾಡಿ ಎಲ್ಲಾದರೂ ಕಟ್ಟೆ ಇದ್ದರೋ, ಹಳ್ಳ ಇದ್ದರೋ ಬಾವಿ ಇದ್ದರೋ ಅವನು ಹಾಕಿಕೊಳ್ಳುವುದಕ್ಕೆ ಎಸ್‌ಸಿಎಸ್‌ಟಿಗೆ ಕೊಡುವುದರಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಬಗರ್‌ಹುಕುಂ ಸಾಗುವಳಿ ಖಾಯಂ ಮಾಡುವುದಕ್ಕೆ ಬಹಳ ಮೀಟಿಂಗ್ ಮಾಡಿದೆವು

೩–೧೦ ಪಿ.ಎಂ.

ತಾವು ತಹಸೀಲ್ದಾರರಿಗೆ ಈ ಗೋಮಾಳವನ್ನು ರಿಸಂಪ್‌ಷನ್ ಮಾಡತಕ್ಕಂತಹ ಅಧಿಕಾರ ಕೊಡಬೇಕು. ಇದರಲ್ಲಿ ಏನೂ ತಲೆ ಹೋಗುವುದಿಲ್ಲ. ಕಾರಣವೇನೆಂದರೆ ಸೆಕ್ಷನ್ ೧೭ರಲ್ಲಿ ಈಗಾಗಲೇ ಪವರ್ಸ್ ಅನ್ನು ಜಿಲ್ಲಾಧಿಕಾರಿಗಳಿಗೆ ಡೆಲಿಗೇಟ್ ಮಾಡಿದ್ದೇವೆ. ಅನ್ ಆಥರೈಸ್ಡ್ ಆಗಿ ಕಲ್ಟಿವೇಷನ್ ಮಾಡಿದ್ದರೆ ಮಾತ್ರ ರಿಡಕ್ಷನ್ ಮಾಡಬೇಕೆಂದಿದೆ. ತಹಸೀಲ್ದಾರರಿಗೆ ಆ ಅಧಿಕಾರ ಕೊಟ್ಟರೆ ಏನೂ ಹೋಗುವುದಿಲ್ಲ, ಅನುಕೂಲವಾಗುತ್ತದೆ. ತಾವು ಅದರಲ್ಲಿ ಇನ್ನೊಂದು ಮಾಡಿಬಿಟ್ಟಿದ್ದೀರಿ. ಅವನು ಎಷ್ಟು ವರ್ಷದಿಂದ ಮಾಡುತ್ತಿದ್ದ ಅಷ್ಟು ವರ್ಷದವರೆಗೂ ಟಿ.ಟಿ. ಹಾಕಿ ಅದನ್ನು ೫೦ ಟೈಮ್ಸ್ ಅಸೆಸ್‌ಮೆಂಟ್ ಮಾಡಿ ಪೆನಾಲ್ಟಿ ಹಾಕಿ ಕೊಡಬೇಕು ಅಂದರೆ ಬಡವನಿಗೆ ನಾವು ಜಮೀನು ಕೊಡುವುದರ ಜೊತೆಯಲ್ಲಿ ಪೆನಾಲ್ಟಿ ಹಾಕಿದರೆ ೨–೩ ಸಾವಿರ ಆಗುತ್ತದೆ. ಆ ಪೆನಾಲ್ಟಿಯನ್ನು ಡಿ.ಟಿ.ಯನ್ನು ರದ್ದು ಮಾಡಬೇಕು. ಹಾಗೂ ಆ ಜಮೀನಿಗೆ ಹಾಕತಕ್ಕಂತಹ ಬೆಲೆಯನ್ನು ಕಂತು ರೂಪದಲ್ಲಿ ಕಟ್ಟತಕ್ಕಂಥದ್ದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ.

ಶ್ರೀ ಮಂಜುನಾಥ್ ಸಿ. ಕುನ್ನೂರು.—ಹುಬ್ಬಳ್ಳಿ–ಧಾರವಾಡ ಮಹಾನಗರಗಳಲ್ಲಿ ಹೈಕೋರ್ಟ್ ಬೆಂಚ್ ಆಗಬೇಕೆಂದು ಬಹಳ ದಿವಸಗಳಿಂದ ಬೇಡಿಕೆ ಇದೆ. ಆದ್ದರಿಂದ ಈ ಹೈಕೋರ್ಟ್ ಬೆಂಚನ್ನು ಕೂಡಲೇ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಜಿಲ್ಲಾ ಪುನರ್ ವಿಂಗಡನೆ ಮಾಡತಕ್ಕಂತಹ ಕಾಲಕ್ಕೆ ಹಾವೇರಿ, ಧಾರವಾಡ ಜಿಲ್ಲೆಯ ದಕ್ಷಿಣ ಭಾಗದ ಲೋಕ ಸಭಾ ಕ್ಷೇತ್ರದಲ್ಲಿರತಕ್ಕಂತಹ ಎಲ್ಲಾ ತಾಲ್ಲೂಕುಗಳನ್ನು ಸೇರಿಸಿ ಹಾವೇರಿ ಭೌಗೋಳಿಕವಾಗಿ ಅದೊಂದು ಮಧ್ಯವರ್ತಿ ಸ್ಥಳವಾದುದರಿಂದ ಜಿಲ್ಲೆ ಮಾಡತಕ್ಕಂತಹ ಕಾಲಕ್ಕೆ ಅದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕ್ಷೀರ ಯೋಜನೆ ಬಗ್ಗೆ ಈಗಾಗಲೇ ಮಾನ್ಯ ಯಡಿಯೂರಪ್ಪನವರು ಹೇಳಿದರು. ಈಗ ಏಳನೇ ತರಗತಿಯವರೆಗೆ ಮಾತ್ರ ಹಾಲಿನ ಲಾಭ ಇರುವುದರಿಂದ ಈ ಯೋಜನೆಯನ್ನು ೧ ರಿಂದ ೪ನೇ ತರಗತಿಯವರೆಗೆ ಕೊಡಬೇಕು. ಇಲ್ಲದಿದ್ದರೆ ಇದನ್ನು ರದ್ದು ಮಾಡಿದರೂ ಅಡ್ಡಿ ಇಲ್ಲವೆಂದು ಹೇಳಬಯಸುತ್ತೇನೆ. ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡತಕ್ಕಂಥದ್ದು ಬಹಳ ಸ್ವಾಗತಾರ್ಹ. ನನ್ನ ಮತ ಕ್ಷೇತ್ರದಲ್ಲಿ ಮಾರುತಿಪುರ ಎಂಬ ಗ್ರಾಮ ಇದೆ, ಆ ಗ್ರಾಮದಲ್ಲಿ ೧–೨ ಸಾವಿರ ಜನಸಂಖ್ಯೆ ಇದೆ. ಅಲ್ಲಿರತಕ್ಕಂತಹವರು ಕೇವಲ ವಡ್ಡರ ಜನಾಂಗದವರು. ಅವರು ಎಸ್.ಸಿ. ಕಾಸ್ಟ್‌ಗೆ ಸೇರತಕ್ಕಂಥವರು. ಆದ್ದರಿಂದ ಅದನ್ನು ಕಂದಾಯ ಗ್ರಾಮವನ್ನಾಗಿ ಮಾಡಬೇಕೆಂದು ನಾನು ಅನೇಕ ದಿವಸಗಳಿಂದ ಹೇಳುತ್ತಿದ್ದೇನೆ. ಪ್ರಿಲಿಮಿನರಿ ನೋಟಿಫಿಕೇಷನ್ ಹೊರಡಿಸತಕ್ಕಂಥ ಕಾಲದಲ್ಲಿ ಈ ಮಾರುತಿಪುರ ಗ್ರಾಮವನ್ನೂ ಕೂಡ ಕಂದಾಯ ಗ್ರಾಮವನ್ನಾಗಿ ಮಾರ್ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಜೊತೆಗೆ ನಮ್ಮ ಮತ ಕ್ಷೇತ್ರದಲ್ಲಿ ಕುನ್ನೂರು ಎಂಬ ಗ್ರಾಮ ಇದೆ ಅಲ್ಲಿ ೧೫೦ ಎಕರೆ ಜಮೀನನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಡಲಿಕ್ಕೆ ತಯಾರಿದ್ದೇವೆ. ಅಲ್ಲಿ ಈಗಾಗಲೇ ನಾನು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಉತ್ತರ ಕರ್ನಾಟಕದಲ್ಲಿ ಮಾವಿನ ಹಣ್ಣುಗಳನ್ನು ವಿಶೇಷವಾಗಿ ಬೆಳೆಯುತ್ತಿದ್ದಾರೆ. ಅಲ್ಲಿ ಮ್ಯಾಂಗೋ ರೀಸರ್ಚ್ ಸ್ಟೇಷನ್ ಅನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—೧೦–೧೨ ಜನ ಏನು ಕೇಳಿದ್ದಾರೆ ಅವರಿಗೆ ಉತ್ತರ ಕೊಡಿ. ಉಳಿದಂತಹವರು ಕೇಳಿದಾಗ ಮತ್ತೊಂದು ಸಲ ಉತ್ತರ ಕೊಡಿ. ಇಲ್ಲದಿದ್ದರೆ ಈ ಪ್ರಶ್ನೆಗಳಿಗೆ ಮಹತ್ವ ಬರುವುದಿಲ್ಲ. ನ್ಯಾಯವಾಗಿ ಕ್ಲಾರಿಫಿಕೇಷನ್ ಅನ್ನು ವಿರೋಧ ಪಕ್ಷದವರು ಕೇಳಿದಾಗ ಉತ್ತರ ಕೊಡಿ. ನಿಮ್ಮವರಿಗೆ ಉತ್ತರ ಕೊಡುವುದಕ್ಕೆ ನಿಮ್ಮ ಭಾಷಣವೇ ಅದಕ್ಕೆ ಉತ್ತರ. ನಿಮ್ಮ ಭಾಷಣ ಬೇಕಾದಷ್ಟು ಇದೆ.

ಶ್ರೀ ಮಂಜುನಾಥ ಸಿ. ಕುನ್ನೂರು.—ಮಾನ್ಯ ಅಧ್ಯಕ್ಷರೆ, ನೀರಾವರಿ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ವಿಶೇಷವಾಗಿ ಆಸಕ್ತಿ ವಹಿಸಿ ತಮ್ಮದೇ ಆದ ಕೊಡುಗೆಯನ್ನು ನೀರಾವರಿಗೆ ಕೊಟ್ಟಿದ್ದಾರೆಂದು ಹೇಳಲು ನನಗೆ ಬಹಳ ಸಂತೋಷವೆನಿಸುತ್ತದೆ. ಈ ವಿಚಾರದಲ್ಲಿ ಕೃಷ್ಣಾ ಜಲಾನಯನದಲ್ಲಿ ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ಕೊಡತಕ್ಕಂತಹ ಕಾರ್ಯಕ್ರಮವೇನು ಇದೆ ಆಗ ಈ ಮಾಲತಿ ಜಲಾನಯನವನ್ನು ಒಳಗೊಂಡು ಜಾರಿಗೆ ತರಬೇಕು. ಇದರ ಬಗ್ಗೆ ತಜ್ಞರ ಸಮಿತಿಯನ್ನು ಮಾಡಿಸಿ ಈ ಯೋಜನೆಯನ್ನು ಜಾರಿಗೆ ತರಬೇಕು.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಈ ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದ ಈ ರಾಷ್ಟ್ರದ ಬಹಳ ದೊಡ್ಡ ಸ್ವಾತಂತ್ರ್ಯ ಯೋಧರೂ ಆದ ಮೈಸೂರಿನ ಹುಲಿ ಎಂದು ಹೇಳತಕ್ಕಂತಹ ಕೀರ್ತಿಯನ್ನು ಪಡೆದ ಟಿಪ್ಪುಸುಲ್ತಾನರ ಬಗ್ಗೆ ಇಡೀ ವರ್ಷ ಕಾರ್ಯಕ್ರಮಗಳನ್ನು ಹಾಕಿ ಟಿಪ್ಪು ಸುಲ್ತಾನದವರು ಎಷ್ಟು ದೊಡ್ಡ ಸ್ವಾತಂತ್ರ್ಯ ಯೋಧರು, ಎಂತಹ ತ್ಯಾಗಿಗಳು, ಎಂತಹ ಬಲಿದಾನ ಮಾಡಿದವರು ಎನ್ನುವುದನ್ನು ಇಡೀ ನಾಡಿನ ಜನರಿಗೆ ನೆನಪು ಮಾಡಬೇಕೆಂದು ಏನೋ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅದು ಇಡೀ ವರ್ಷ ಆಗಬೇಕು ಎನ್ನುವುದನ್ನು ಕೇಳಿದ್ದೇನೆ. ಆದರೆ ಇಷ್ಟರವರೆಗೆ ಪತ್ರಿಕೆಗಳಲ್ಲಿ ಎಲ್ಲಿಯೂ ಸಭೆಗಳು ಆಗಿದ್ದು ಆಗಲಿ, ಕವಿಗೋಷ್ಠಿಗಳು ಆಗಿದ್ದು ಆಗಲಿ ಅಥವಾ ಭಾಷಣಗಳು ಆಗಿದ್ದು ಆಗಲಿ ಅಥವಾ ಇನ್ನಿತರ ಯಾವುದೇ ಅದರ ಬಗ್ಗೆ ಪ್ರಚಾರ ಮಾಡತಕ್ಕದ್ದನ್ನು ನಾನು ಕಾಣಲಿಲ್ಲ. ಅದು ಎಲ್ಲಿಗೆ ಮುಟ್ಟಿದೆ ? ಅದನ್ನು ಇಡೀ ಒಂದು ವರ್ಷ ಮಾಡಬೇಕೆಂದು ನಿಶ್ಚಯ ಮಾಡಿದ್ದೀರಿ, ಅದಕ್ಕೆ ಏನೋ ಒಂದು ಸಮಿತಿ ಮಾಡಿದ್ದೇವೆಂದು ಹೇಳುತ್ತಿದ್ದೀರಿ ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆದ್ದರಿಂದ ಇದು ಬಹಳ ಪ್ರಾಮುಖ್ಯವಾದುದು. ಬಹಳ ಒಳ್ಳೆಯ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಟಿಪ್ಪು ಸುಲ್ತಾನರ ಬಗ್ಗೆ ನಾಡಿನ ಮೂಲೆ ಮೂಲೆಗಳಿಗೂ ಮನೆ, ಮನೆಗೂ ವಿಷಯ ಗೊತ್ತಾಗಬೇಕೆಂದು ಮಾಡಿದ್ದಾರೆ, ಅದು ಏನು ಆಗಿದೆ ಎಂದು ಹೇಳುವಂತಹದು ಒಂದು. ಇನ್ನೊಂದು ನಮ್ಮ ಉಲ್ಲಾಳದಲ್ಲಿ ಪೋರ್ಚುಗೀಸರ ಎದುರಿಗೆ ಹೋರಾಡಿ. ಒಬ್ಬ ಮಹಿಳೆ ಇಡೀ ಕರ್ನಾಟಕದಲ್ಲೇ ಅಲ್ಲ, ಇಡೀ ರಾಷ್ಟ್ರದಲ್ಲಿ ಹೆಸರನ್ನು ಗಳಿಸಿದ ಅಬ್ಬಕ್ಕ ಮಹಾರಾಣಿ ಅವರ ನಾಡು ಉಲ್ಲಾಳ. ಈ ಉಳ್ಳಾಲದಲ್ಲಿ ಯಾವುದೇ ಒಂದು ಅಭಿವೃದ್ಧಿ ಆಗದೇ ಇದ್ದರೂ ಸಹ ಈ ಅಬ್ಬಕ್ಕ ಮಹಾರಾಣಿ ಇದ್ದಂತಹ ಪ್ರದೇಶದಲ್ಲಿ ಒಂದು ಪ್ರವಾಸೋದ್ಯಮ ನೆಲೆ ಮಾಡಿಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ನಿಜವಾಗಿ ನಾನಾ ಭಾಗಗಳಿಂದ ಬಂದಂತಹ ಜನ ಅಬ್ಬಕ್ಕ ರಾಣಿಯ ಶಕ್ತಿ ಸಾಮರ್ಥ್ಯದ ಆ ಒಂದು ಹಿನ್ನೆಲೆಯನ್ನು ತಿಳಿದುಕೊಳ್ಳಲಿಕ್ಕೂ, ಸೈಯದ್ ಮದನಿ ದರ್ಗಾದ ಒಂದು ಹಿನ್ನೆಲೆಯನ್ನು ತಿಳಿದುಕೊಳ್ಳಲಿಕ್ಕೂ ಸಮುದ್ರದ ಬದಿಯ ಆ ಸಂತೋಷವನ್ನು ಪಡೆಯಲಿಕ್ಕೂ ಬಹಳ ಅವಕಾಶ ಇರತಕ್ಕ ಇಲ್ಲಿ ಒಂದು ಪ್ರವಾಸೋದ್ಯಮ ನೆಲೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗ ಯಾರೋ ಹೇಳುತ್ತಾರೆ. ಅಲ್ಲಿ ಏನೋ ಒಂದು ಪಾರ್ಕ್ ಮಾಡಲಿಕ್ಕೆ ಅಧಿಕಾರಿಗಳು ನಮ್ಮ ಯಾವುದೇ ಎಂಎಲ್‌ಎ ಗಳಿಗೆ ಗೊತ್ತಿಲ್ಲದೆ ಜಿಲ್ಲಾ ಪರಿಷತ್ತಿನ ಅಧಿಕಾರಿಗಳು ಏನೋ ಮಾಡುತ್ತಾರೆ ಎಂಬ ವಿಷಯ ಇದೆ. ಅದಲ್ಲ, ಸರಿಯಾದ ರೀತಿಯಲ್ಲಿ ಆಗಬೇಕು, ಇನ್ನೊಂದು ಬಹಳ ಪ್ರಾಮುಖ್ಯವಾದುದು ಪಾಣೆ ಮಂಗಳೂರಿನ ಸಂಕ. ಈ ಸಂಕ ಬಹಳಷ್ಟು ನಾಗರೀಕರಿಗೆ ಸಲೀಸಾಗಿ ಹೋಗಲಿಕ್ಕೂ ಗೊತ್ತಿಲ್ಲ ಬರಲಿಕ್ಕೂ ಗೊತ್ತಿಲ್ಲ. ಆಚೆ ಕಡೆಗೆ ಒಂದು ಇನ್ನೂರು ವಾಹನಗಳು ಈಚೆ ಕಡೆಗೆ ಒಂದು ಇನ್ನೂರು ವಾಹನಗಳು ಆಗಿ ಒಂದು ಗಂಟೆ ಎರಡು ಗಂಟೆ ವಾಹನದಲ್ಲಿ ಹೋಗ ತಕ್ಕವರಿಗೆ ತಡೆ ಆಗುತ್ತದೆ. ಆದ್ದರಿಂದ ಈ ಪಾಣೆ ಮಂಗಳೂರು ಸೇತುವೆಯನ್ನು ಒಂದು ಒಳ್ಳೆಯ ರೀತಿಯಲ್ಲಿ ಮಾಡಿ ಆಚೆ ಬದಿಗೆ ಇನ್ನೂರು ವಾಹನಗಳು, ಈ ಬದಿಯಲ್ಲಿ ಇನ್ನೂರು ವಾಹನಗಳು ನಿಂತು ಕಷ್ಟಪಡುವುದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಹತ್ತಿರ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳು ವಿದ್ಯುತ್ ಅಭಾವದಿಂದ ತತ್ತರಿಸುತ್ತಿವೆ. ಇವತ್ತು ೪೮೦ ವೋಲ್ಟೇಜ್ ಇರತಕ್ಕ ವಿದ್ಯುಚ್ಛಕ್ತಿ ಇವತ್ತು ೨೦೦ ವೋಲ್ಟೇಜ್ ಸಹ ಇಲ್ಲದೇ ಇರತಕ್ಕ ಪರಿಸ್ಥಿತಿ ತಲುಪಿದ್ದಾವೆ. ತಾವು ಸಹ ಸಣ್ಣ ಕೈಗಾರಿಕಾ ಮಂತ್ರಿಗಳು ಆಗಿದ್ದಾಗ ಇವೆಲ್ಲ ವಿಚಾರಗಳು ತಮಗೆ ಗೊತ್ತಿದೆ ಎಂದು ಕೇಳಿ ಕೊಳ್ಳುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ೪೦ ಸಾವಿರ ಕೈಗಾರಿಕೆಗಳು ನಡೆಯದೇ ಇವತ್ತು ನಿಂತು ಹೋಗತಕ್ಕಂಥ ಹಂತಕ್ಕೆ ತಲುಪಿದ್ದಾವೆ. ಮಾರ್ಚ್ ೩೧ ಸಾಲೆ ಆಗುತ್ತಿದೆ. ಕರ್ನಾಟಕ ಹಣಕಾಸು ನಿಗಮದವರು ಇವತ್ತು ಬೀಗ ಹಾಕಿ ಹರಾಜು ಆಗತಕ್ಕ ಮಟ್ಟಕ್ಕೆ ಹೋಗುತ್ತಿದ್ದಾರೆ. ದಯಮಾಡಿ ಅದಕ್ಕೆ ಈ ರೀತಿಯ ಕ್ರಮ ತೆಗೆದುಕೊಳ್ಳಬಾರದು. ಇದಕ್ಕೆ ಏನಾದರೂ ಒಂದು

ಕಾರ್ಯಕ್ರಮ ಹಾಕಿಕೊಳ್ಳಬೇಕು. ರಾಜ್ಯ ಮಟ್ಟದ ಒಂದು ಸಮಿತಿ ಮಾಡಿ ಈ ವಿದ್ಯುಚ್ಛಕ್ತಿ ಅಭಾವದಿಂದ ಈ ಕೈಗಾರಿಕೆಗಳು ತತ್ತರಿಸುತ್ತಿದ್ದಾವೆಯೇ ಹೊರತು ಇನ್ಯಾವ ಕಾರಣದಿಂದಲೂ ಅಲ್ಲ ಎಂಬುದನ್ನು ಅರ್ಥ ಮಾಡಿಕೊಂಡು, ರಾಜ್ಯ ಮಟ್ಟದಲ್ಲಿ ಒಂದು ಸಮಿತಿ ಮಾಡಿ ಇದನ್ನು ಪರಿಹಾರ ಮಾಡಲಿಕ್ಕೆ ತಾವು ಭರವಸೆ ಕೊಡಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿ. ವಿ. ವೆಂಕಟರಾಯಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನನ್ನದು ಬಾಗೇಪಲ್ಲಿ ಕ್ಷೇತ್ರ. ಬಾಗೇಪಲ್ಲಿ ಬಾರ್ಡರ್ ಏರಿಯಾ ಹಾಗೂ ಮೋಸ್ಟ್ ಬ್ಯಾಕ್‌ವರ್ಡ್ ಏರಿಯಾ ಅದು ಪ್ರಿಡಾಮಿನೆಂಟಲ್ ಕಮರ್ಷಿಯಲ್ ಏರಿಯಾ ಆಗಿತ್ತು. ಕದರಿ ತಾಲ್ಲೂಕು ಬಾರ್ಡರ್ ತಾಲ್ಲೂಕು. ಅಲ್ಲಿಂದ ನಕ್ಸಲೈಟ್ ಆಗಾಗ ಬರುತ್ತಿರುತ್ತಾರೆ. ಈಗಲೂ ಕೂಡ ಗೂಳೂರ್ ಆ ಕಡೆ ನಕ್ಸಲೈಟ್ಸ್ ಇದ್ದಾರೆ. ಇವರು ಸ್ವಲ್ಪ ಪ್ರಭಾವಶಾಲಿಗಳು ಆಗುವುದಕ್ಕೆ ಅವಕಾಶ ಕೊಟ್ಟರೆ ನಮ್ಮ ಸ್ಟೇಟಿಗೇ ಅಪಾಯವಾಗುತ್ತದೆ. ಬಾಗೇಪಲ್ಲಿಯಲ್ಲಿ ಸೇರಿಕೊಂಡು ಅಲ್ಲಿಂದ ಮುಂದೆ ಬರುವುದಕ್ಕೆ ಅವಕಾಶ ಆಗುತ್ತದೆ. ಒಂದು ಸಲ ಈ ಡಿಸ್ಟ್ರಿಕ್ಟ್ ಎಂಎಲ್‌ಎಸ್ ಮೀಟಿಂಗ್‌ನಲ್ಲಿ ನಾನು ಈ ವಿಚಾರವನ್ನೆಲ್ಲಾ ಹೇಳಿದ್ದೆ. ನಮ್ಮ ಮುಖ್ಯಮಂತ್ರಿಗಳು ಡೆಪ್ಯುಟಿ ಕಮೀಷನರ್‌ರವರಿಗೆ ಒಂದು ಆದೇಶ ಕೊಟ್ಟರು, ಒಂದಿಷ್ಟು ಪೆಟ್ಟಿ ಪ್ರಾಜೆಕ್ಟ್ ತಯಾರು ಮಾಡಿ ಬಾಗೇಪಲ್ಲಿಗೆ ಎಂದು. ಇದುವರೆಗೂ ಯಾವುದೇ ಪೆಟ್ಟಿ ಪ್ರಾಜೆಕ್ಟ್ ಬೆಳಕಿಗೆ ಬರಲಿಲ್ಲ. ಈಗ ಕೇಳುವುದು ಬೇಕಾದಷ್ಟು ಇದೆ. ಮೊದಲು ಕೆರೆಗಳ ಡೀಸಿಲ್ಟಿಂಗ್ ಆಗಬೇಕಾಗಿದೆ. ಇದು ಒಂದನೆಯದು. ಆಮೇಲೆ ಹತ್ತು ಸಾವಿರ ಹೆಕ್ಟೇರ್ಸ್ ಮೇಲೆ ಫಾರೆಸ್ಟ್ ಏರಿಯಾ ಇದೆ, ಅದು ಅಫಾರ್‌ಸ್ಟೇಷನ್ ಆಗಬೇಕು, ಇದು ಎರಡನೆಯದು. ಇವೆರಡೂ ಬಹಳ ಮುಖ್ಯ. ಡೀಸಿಲ್ಟಿಂಗ್ ಆಗುವುದು ಮತ್ತು ಅಫಾರೆಸ್ಟೇಷನ್ ಆಗುವುದು. ಆಮೇಲೆ ಹಾಸ್ಪಿಟಲ್ಸ್ ಕಡಿಮೆ ಇದೆ, ವೆಟರಿನರಿ ಹಾಸ್ಪಿಟಲ್ಸ್ ಕಡಿಮೆ ಇದೆ, ಪೋಲೀಸ್ ಸ್ಟೇಷನ್ಸ್ ಕಡಿಮೆ ಇದೆ. ಇವಕ್ಕೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಐದು ಕೋಟಿ ರೂಪಾಯಿ ಸ್ಪೆಷಲ್ ಪ್ರಾಜೆಕ್ಟ್ ೧೯೯೪-೯೫ನೇ ಸಾಲಿಗೆ ಅಲಾಟ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೊಡದೇ ಇದ್ದರೆ ತುಂಬಾ ಅನಾನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಸಾಕಾದಷ್ಟು ಹಣ ಒದಗಿಸಿದ್ದಾರೆ, ಬಹಳ ಸಂತೋಷ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೆ ನಂಜನಗೂಡು ಕ್ಷೇತ್ರದಲ್ಲಿ ಎಂಟು ಕೋಟಿ ರೂಪಾಯಿ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಹಿಂದಿನ ಸರ್ಕಾರದಿಂದಲೂ ಬಜೆಟ್‌ನಲ್ಲಿ ಸೇರಿಸಿ ಮುಂದುವರಿಸಿಕೊಂಡು ಬರುತ್ತಿದೆ, ಅಲ್ಲಿ ಮುಳ್ಳೂರು ಗುಡ್ಡ ಎಂದು ಇದೆ. ಮಾದಹಳ್ಳಿ ಗುಡ್ಡ ಎಂದು ಇದೆ, ಕಡಿಜೇಡಿ ಗುಡ್ಡ ಎಂದು ಇದೆ. ಈ ಮೂರು ಗುಡ್ಡಗಳಿಗೂ ಕಪಿಲಾ ನದಿಯಿಂದ ನೀರನ್ನು ಸರಬರಾಜು ಮಾಡಿ ಸುಮಾರು ಒಂದೊಂದು ಗುಡ್ಡದಿಂದ ೩೦-೪೦ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡು ಬರುವುದಕ್ಕೆ ಹಿಂದಿನ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಮಂಜೂರು ಮಾಡಲಾಗಿತ್ತು. ಒಂದೊಂದು ಗುಡ್ಡಕ್ಕೆ ಅವತ್ತಿನ ದಿವಸ ಎರಡೆರಡು ಕೋಟಿ ರೂಪಾಯಿಗಳ ಯೋಜನಾ ಸಂಪುಟದಲ್ಲಿ ಇದ್ದು ಅದನ್ನು ಅಸ್ತು ಮಾಡಿತ್ತು. ಮತ್ತು ಟೆಕ್ನಿಕಲ್ ಹಾಗೂ ಫೈನಾನ್ಸ್ ಡಿಪಾರ್ಟ್‌ಮೆಂಟ್, ಎರಡೂ ಇಲಾಖೆಗಳೂ ಅದನ್ನು ಅನುಮೋದಿಸಿತ್ತು. ಬಂಗಾರಪ್ಪನವರ ಸರ್ಕಾರದಲ್ಲಿಯೂ ಸಹ ಈ ಟೌನ್‌ಗೆ ಮತ್ತು ಗ್ರಾಮಾಂತರ ಪ್ರದೇಶಕ್ಕೆ ನೀರನ್ನು ಒದಗಿಸಲು ಎಂಟು ಕೋಟಿ ರೂಪಾಯಿಗಳ ಯೋಜನೆ ಸಂಪುಟದಲ್ಲಿ ಇತ್ತು. ಮಾನ್ಯ ಘೋರ್ಪಡೆಯವರಿಗೂ ಗೊತ್ತಿದೆ, ಮಾನ್ಯ ಮೊಯಿಲಿಯವರಿಗೂ ಗೊತ್ತು. ಈ ನಾಲ್ಕು ಯೋಜನೆಗಳಿಗೂ ಮಂಜೂರು ಮಾಡಿ ಬಂದಿದ್ದು. ಆದರೆ ಈಗ ನಾನು ಬಜೆಟ್‌ನಲ್ಲಿ ನೋಡಿದಾಗ ಬಹಳ ಆಶ್ಚರ್ಯ ಆಯಿತು. ನಂಜನಗೂಡು ಟೌನ್‌ಗೆ ಮಾತ್ರ ಒಂದು ಕೋಟಿ ೯೫ ಲಕ್ಷ ರೂಪಾಯಿ ಯೋಜನೆ ಮಂಜೂರು ಮಾಡಿ. ಈ ಮೂರು ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಇದು ಟೆಕ್ನಿಕಲ್ ಆಗಿ ಅಪ್ರೂವಲ್ ಆಗಿದೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಅಪ್ರೂವಲ್ ಆಗಿದೆ. ಗ್ರಾಮಾಂತರ ಪ್ರದೇಶದ ಜನರಿಗೆ ಇದು ಒಳ್ಳೆಯ ನೀರು ಸರಬರಾಜು ಯೋಜನೆಯೆಂದು ಹೇಳಿ ನಾವು ಅದನ್ನು ಉದ್ಘಾಟನೆ ಮಾಡಿದ್ದೇವೆ, ನಾವು ಆ ಯೋಜನೆಗೆ ಶಂಕು ಸ್ಥಾಪನೆ ಸಹ ಮಾಡಿದ್ದೇವೆ, ಎಲ್ಲವನ್ನೂ ಮಾಡಿದ್ದೇವೆ. ಆದರೆ ನಾವು ಬಜೆಟ್‌ನಲ್ಲಿ ತೆಗೆದು ನೋಡುವಾಗ ಈ ಮೂರು ಯೋಜನೆಗಳನ್ನೂ ಕೈಬಿಟ್ಟಿದ್ದಾರೆ. ನಂಜನಗೂಡ್ ಟೌನ್ ಮಾತ್ರ ಎಂದು ಬಂದಿದೆ. ಇದು ಹೇಗೆ ಆಯಿತು ಎನ್ನುವುದು ನನಗೆ ಆಶ್ಚರ್ಯ ಆಗಿದೆ. ಎರಡನೆಯದು, ಈ ಮೂರು ಯೋಜನೆಗಳನ್ನು ಕೈಬಿಟ್ಟರು ಎಂದು ಹೇಳಿದರೆ ಗ್ರಾಮಾಂತರ ಪ್ರದೇಶದ ಜನಕ್ಕೆ ಒಂದೊಂದು ಯೋಜನೆಯಿಂದ ೪೦-೫೦ ಊರುಗಳಿಗೆ ಅನುಕೂಲ ಆಗಿತ್ತು. ಪೊಲ್ಯೂಷನ್ ವಾಟರ್ ಕುಡಿದು ಬಹಳ ಜನ ಕಷ್ಟಪಡುತ್ತಿದ್ದಾರೆ, ರೋಗರುಜಿನ ಆಗುತ್ತಿದೆ. ಆದ್ದರಿಂದ ಈ ಯೋಜನೆಯನ್ನು ಸೇರಿಸ

ಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇನೆ. ಹಿಂದಿನ ಸರ್ಕಾರದವರು ಏನು ಯೋಜನೆಗಳಿಗೆ ಮಂಜೂರಾತಿ ಕೊಟ್ಟು ಜಾಗ್ರತೆ ಕ್ರಮ ಕೈಗೊಳ್ಳಲಿಕ್ಕೆ ಮಾಡಿದರೋ ಅದೇ ರೀತಿ ಆ ಮೂರು ಯೋಜನೆಗಳನ್ನು ಕೈಬಿಟ್ಟಿದ್ದಾರೋ ಏನೋ ನನಗೆ ಗೊತ್ತಿಲ್ಲ. ಆದರೆ ಬಜೆಟ್‌ನಲ್ಲಿ ಮಾತ್ರ ಸೇರಿಲ್ಲ. ಆದ್ದರಿಂದ ಬಜೆಟ್‌ನಲ್ಲಿ ಸೇರಿಸಿ ಆ ಯೋಜನೆಗಳನ್ನು ಮಾಡಿಕೊಡಬೇಕೆಂದು ಒಂದು ಮನವಿ. ಎರಡನೆಯದು ಕಪಿಲಾ ಯೋಜನೆ ಏನು ಇದೆ. ಕಬಿನಿ ಡ್ಯಾಮ್ ಯೋಜನೆಯ ಬಗ್ಗೆ ಒಂದು ಸಾರಿ ಪ್ರಸ್ತಾಪ ಮಾಡಿದ್ದೆ. ಕಬಿನಿ ಡ್ಯಾಂನಿಂದ ನುಗೂ ಡ್ಯಾಮ್‌ಗೆ ಲಿಫ್ಟ್ ಇರಿಗೇಷನ್ ಅನ್ನು ೩೦ ಕೋಟಿ ರೂಪಾಯಿ ಅಂದಾಜಿನಲ್ಲಿ ತಾವು ಮಾಡಿಕೊಡಿ ಎಂದು ಮನವಿ ಮಾಡಿಕೊಂಡಿದ್ದೆ. ಆದ್ದರಿಂದ ಏನು ಆಗುತ್ತದೆ ಎಂದರೆ, ನುಗೂ ಡ್ಯಾಂನಲ್ಲಿ ಯಾವಾಗಲೂ ನೀರು ಇರುವುದೇ ಇಲ್ಲ. ಆದ್ದರಿಂದ ಅಲ್ಲಿ ಬರತಕ್ಕ ಸುಮಾರು ೧೫–೨೦ ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶದ ಜನರು ಸಫರ್ ಮಾಡುತ್ತಿದ್ದಾರೆ. ಆದ್ದರಿಂದ ಈ ಕಬಿನಿ ಡ್ಯಾಮ್‌ನಿಂದ ನುಗೂ ಡ್ಯಾಮ್‌ಗೆ ಲಿಫ್ಟ್ ಇರಿಗೇಷನ್ ಮಾಡಿದರೆ ೧೫–೨೦ ಸಾವಿರ ಎಕರೆ ಪ್ರದೇಶದ ಜನರಿಗೆ ನೀರಿನ ಅನುಕೂಲ ಆಗುತ್ತದೆ. ದಯಮಾಡಿ ಅದನ್ನು ಮಾಡಿಕೊಡಿ ಎಂದು ನಾನು ಅನೇಕ ಸಾರಿ ಖುದ್ದಾಗಿ ಭೇಟಿ ಆಗಿದ್ದೆ, ಮನವಿ ಕೊಟ್ಟಿದ್ದೆ. ಅದು ಬಹುಶಃ ಈ ನೀರಾವರಿ ಯೋಜನೆಯಲ್ಲಿ ಬೇರೆ ಯಾವುದೋ ಕವರ್ ಆಗಿದೆ. ಆದರೆ ಬಜೆಟ್‌ನಲ್ಲಿ ಅದನ್ನು ಸೇರಿಸಿಲ್ಲ, ದಯವಿಟ್ಟು ಅದನ್ನು ಸೇರಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮೂರನೆಯದು ಆನೆಗಳ ಕಾಟ ಜಾಸ್ತಿ ಇದೆ. ಅಲ್ಲಿ ಟ್ರೆಂಚ್ ಹೊಡೆಯಿರಿ, ಆನೆಗಳ ಕಾಟ ತಪ್ಪಿಸಿ. ಅದಕ್ಕೋಸ್ಕರ ಒಂದು ಬಜೆಟ್ ಪ್ರಾವಿಷನ್ ಮಾಡಿಕೊಡಿ ಎಂದು ನಾನು ಕೇಳಿದ್ದೆ. ಅಲ್ಲಿ ಒಂದು ಟ್ರೆಂಚೂ ಹೊಡೆದಿಲ್ಲ. ಆನೆಗಳ ಕಾಟ ತಪ್ಪಿಸಲಿಕ್ಕೆ ಕ್ರಮ ಮಾಡಿಲ್ಲ. ಅದಕ್ಕೆ ಒಂದು ಬಜೆಟ್ ಪ್ರಾವಿಷನ್ ಸಹ ಮಾಡಿಲ್ಲ. ಅದಕ್ಕೋಸ್ಕರ ಸಾಕಷ್ಟು ಸಾರಿ ಕೇಳಿದ್ದೇನೆ. ನಂಜನಗೂಡು ತಾಲ್ಲೂಕು ಅಥವಾ ಮೈಸೂರು ಜಿಲ್ಲೆಯಲ್ಲಿ ಮಾತ್ರ ಆನೆಗಳ ಕಾಟ ಇರುವುದಿಲ್ಲ. ಇಡೀ ರಾಜ್ಯದಲ್ಲಿ ಇದೆ. ಅದಕ್ಕೋಸ್ಕರ ಟ್ರೆಂಚಿನ ಹಣ ಕೊಡಲಿಕ್ಕೆ ಬಜೆಟ್‌ನಲ್ಲಿ ಸ್ವಲ್ಪ ಪ್ರಾವಿಷನ್ ಮಾಡಿ ಅದನ್ನು ವ್ಯವಸ್ಥೆ ಮಾಡಿಕೊಡಬೇಕೆಂದು ಈ ಕ್ಲಾರಿಫಿಕೇಷನ್ ಕೇಳತಕ್ಕ ಈ ಸಂದರ್ಭದಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಸ್. ಶಫಿ ಅಹಮದ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳವರು ತುಮಕೂರು ಜಿಲ್ಲೆಗೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟಿದ್ದಾರೆ. ಬಹಳ ಮುಖ್ಯವಾಗಿ ಅಂಡರ್ ಗ್ರೌಂಡ್ ಡ್ರೈನೇಜ್ ಬಗ್ಗೆ ತಾವು ಕಳೆದಸಾರಿ ಆಶ್ವಾಸನೆ ಕೊಟ್ಟಿದ್ದೀರಿ. ಈ ಅಂಡರ್ ಗ್ರೌಂಡ್ ಡ್ರೈನೇಜನ್ನು ಮಂಜೂರು ಮಾಡಿಕೊಡುವುದು ಮತ್ತು ಇನ್ನೊಂದು ಬಹಳ ಮಹತ್ವವಾದುದು ಈ ಬಜೆಟ್‌ನಲ್ಲಿ ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ತೆಗೆದುಕೊಳ್ಳುವ ವಿಚಾರ ಕೋಲಾರದಲ್ಲಿ ಮಾತ್ರ ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ತೆಗೆದುಕೊಂಡಿದ್ದೀರಿ. ತುಮಕೂರು ಜಿಲ್ಲೆಯಲ್ಲಿ ಸಹ ಈ ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್ ತೆಗೆದುಕೊಳ್ಳುವುದು ಮತ್ತು ಬಜೆಟ್‌ನಲ್ಲಿ ಈಗ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ತಾವು ಯಾವ ರೀತಿ ಮಾಡಿದ್ದೀರಿ. ಅದೇ ರೀತಿ ಈಗ ಬೆಂಗಳೂರು, ಕೋಲಾರ, ತುಮಕೂರು ಮತ್ತು ಪಾರ್ಟ್ಸ್ ಆಫ್ ಮಂಡ್ಯ ಜಿಲ್ಲೆ ಈ ಜಿಲ್ಲೆಗಳಿಗೆ ಬಂಜರು ಭೂಮಿ ಅಭಿವೃದ್ಧಿ ನಿಗಮವನ್ನು ರಚಿಸುವುದು. ಇನ್ನೊಂದು ಬಹಳ ಮುಖ್ಯವಾಗಿ ತಾವು ಮೊನ್ನೆ ಶ್ರೀ ಸಿದ್ಧಗಂಗಾ ಮಠಕ್ಕೆ ಬಂದಿದ್ದೀರಿ ಅಲ್ಲಿ ಪರಮ ಪೂಜ್ಯ ಸ್ವಾಮೀಜಿಗಳು ಈ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರ್ ಎಕ್ಸಿಬಿಷನ್ ಮಾಡುತ್ತಿದ್ದಾರೆ. ಇಡೀ ರಾಜ್ಯಮಟ್ಟದಲ್ಲಿ ಬಹಳ ಪ್ರಸಿದ್ಧವಾದ ಒಂದು ಕ್ಷೇತ್ರ. ಮಾನ್ಯ ಮುಖ್ಯಮಂತ್ರಿಗಳು ಸಹ ಮೂರನೇ ತಾರೀಖು ಅಲ್ಲಿಗೆ ಬರುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ತಾವೂ ಸಹ ಒಂದು ಆಶ್ವಾಸನೆಯನ್ನು ಕೊಟ್ಟು ಬಂದಿದ್ದೀರಿ. ಇಡಸ್ಟ್ರಿಯಲ್ ಎಕ್ಸಿಬಿಷನ್ ಅನ್ನು ಹಾಸನ ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ಯಾವ ರೀತಿ ಮಾಡುತ್ತಿದ್ದೀರಿ, ಅದೇರೀತಿಯಾಗಿ ಈ ಬಜೆಟ್‌ನಲ್ಲಿ ತಾವು ಮಂಜೂರು ಮಾಡಿ ಕನಿಷ್ಟ ಪಕ್ಷ ಐದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಕೊಟ್ಟಿದ್ದೇ ಆದರೆ ಪರಮ ಪೂಜ್ಯ ಸ್ವಾಮೀಜಿಯ ವರಜನ್ಮ ಹಬ್ಬವನ್ನು ಮೂರನೇ ಬಾರಿಗೆ ಆಚರಣೆ ಮಾಡುತ್ತಿದ್ದೇವೆ. ಆ ಸಂದರ್ಭದಲ್ಲಿ ನೀವು ಘೋಷಣೆ ಮಾಡಲು ಅನುಕೂಲ ಆಗುತ್ತದೆ. ಆದ್ದರಿಂದ ಈ ಐದು ಕಾರ್ಯಕ್ರಮಗಳನ್ನು ಮಾಡಿಕೊಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುಪರ್ಣ (ಮೂಡಬಿದರೆ).—ಮಾನ್ಯ ಅಧ್ಯಕ್ಷರೆ, ಅಬಕಾರಿಗೆ ಸಂಬಂಧಿಸಿದಂತೆ, ಏನು ಅರಾಕ್ ಶಾಪ್‌ಗಳಿವೆ, ಅವುಗಳನ್ನು ಈ ವರ್ಷ ಗ್ರೂಪ್‌ಪ್ರೈಸ್ ಆಕ್ಷನ್ ಮಾಡಿದ್ದರು ನನಗನ್ನಿಸುತ್ತದೆ. ಅಬಕಾರಿ ವ್ಯವಹಾರದಲ್ಲಿ ಏಕಸ್ವಾಮ್ಯ (ಮನೋಪಲಿ) ತಪ್ಪಿಸಬೇಕಾದರೆ ಇಂಡಿವಿಜುಯಲ್ ಶಾಪ್ ಸೇಲ್ ನಿಲ್ಲಿಸಿದರೆ ಸೆಕೆಂಡ್ ಸೇಲ್ ತನಗೆ ತಾನೇ ನಿಲ್ಲುತ್ತದೆ. ಇದರಿಂದ

ಕಾಮಗಾರಿಗಳನ್ನು ಮುಗಿಸಲು ಸಾಧ್ಯವಾಗುತ್ತದೆ. ಅಲ್ಲಿ ಒಂದು ತಾರತಮ್ಯವಿದೆ. ಅದೇನೆಂದರೆ,
ಕೆಲವೊಂದು ಪ್ರಾಜೆಕ್ಟ್‌ಗೆ ಕಾಂಪೋನೆಂಟ್ಸ್‌ಗೆ ವಿಶ್ವ ಬ್ಯಾಂಕ್‌ನ ಏಡ್‌ನಿಂದ ರೀಇಂಬರ್ಸ್‌ಮೆಂಟ್ ಇದೆ,
ಮತ್ತೆ ಕೆಲವೊಂದು ಕಂಪೋನೆಂಟ್ಸ್‌ಗಳಿಗೆ ವಿಶ್ವ ಬ್ಯಾಂಕಿನ ರೀಎಂಬರ್ಸ್‌ಮೆಂಟ್ ಇರಲಾರದ್ದು ಇದೆ.
ಇವರು ಏನು ಮಾಡುತ್ತಾರೆಂದರೆ, ವಿಶ್ವ ಬ್ಯಾಂಕ್ ಏಡ್‌ಗೆ ಮಾತ್ರ ಥ್ರಸ್ಟ್ ಕೊಡುತ್ತಿದ್ದಾರೆ.
ಏಕೆಂದರೆ ಅಮೌಂಟ್ ರೀಎಂಬರ್ಸ್‌ಮೆಂಟ್ ಆಗುತ್ತದೆಂದು. ವಿಶ್ವ ಬ್ಯಾಂಕ್ ಯಾವುದನ್ನು
ರೀ ಇಂಬರ್ಸ್‌ಮೆಂಟ್ ಮಾಡುವುದಿಲ್ಲವೋ ಅದನ್ನು ಕೈಬಿಡುತ್ತಿದ್ದಾರೆ. ನಾವು ಇರಿಗೇಷನ್‌ನಲ್ಲಿ
ಕೊನೆಯಪಕ್ಷ ಬೆರ್ ಲೋ ವೆಲಾಸಿಟಿ ಕೆನಾಲನ್ನಾದರೂ ಮಾಡಿಕೊಂಡು, ಅದರ ಡಿಸೈನ್‌ನ್ನು ಮಾಡಿ
ಕೊಂಡು ಅದರ ಲೈನಿಂಗ್‌ನ್ನು ಮುಂದಿಟ್ಟುಕೊಂಡು ಎರಡು ಸಾವಿರ ಇಸವಿಯೊಳಗೆ ನೀರನ್ನು
ಉಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡಬೇಕು, ಆದ್ದರಿಂದ ಲೋ ವೆಲಾಸಿಟಿ ಕೆನಾಲ್
ಗಳನ್ನು ಡಿಸೈನ್ ಮಾಡಿಕೊಂಡು ಅದರ ಕೆಲಸವನ್ನು ತೀವ್ರಗತಿಯಲ್ಲಿ ತೆಗೆದುಕೊಂಡು ಮಾಡಿದರೆ,
ಅದಕ್ಕೆ ಇಮ್ಮಿಡಿಯೇಟ್ ಲೈನಿಂಗ್ ಬೇಕಾಗಿಲ್ಲ. ಬರೀ ಎಕ್ಸ್‌ಪ್ಲವೇಷನ್ ಮಾಡಿಕೊಂಡು ಹೋದರೆ
ಸಾಕಾಗುತ್ತದೆ. ಎರಡು ಸಾವಿರ ಇಸವಿಯಲ್ಲಿ ಅದರಲ್ಲಿ ನೀರನ್ನು ಹರಿಯಬಿಡಬಹುದು. ಇದರ ಬಗ್ಗೆ
ತಾವು ವಿಚಾರ ಮಾಡಬೇಕು. ಮತ್ತು ರೀಎಂಬರ್ಸ್ ಮಾಡತಕ್ಕ ಕಾಂಪೋನೆಂಟ್ಸ್‌ಗೆ ತಾವು ಎಷ್ಟು
ಥ್ರಸ್ಟ್‌ನ್ನು ಕೊಡುತ್ತೀರೋ ಅಷ್ಟೇ ಥ್ರಸ್ಟ್‌ನ್ನು ರೀಇಂಬರ್ಸ್‌ಮೆಂಟ್ ಆಗದೇ ಇರತಕ್ಕ
ಕಾಂಪೋನೆಂಟ್ಸ್‌ಗೂ ಕೊಡಬೇಕು ಎಂಬುದು ನಮ್ಮ ಬಾಂಬೆ-ಕರ್ನಾಟಕ ಮತ್ತು ಹೈದರಾಬಾದ್-
ಕರ್ನಾಟಕ ಭಾಗದ ಜನರ ಬೇಡಿಕೆಯಾಗಿದೆ. ಮತ್ತೆ ಅದಕ್ಕೆ ಈಗ ಪ್ರಾಧಿಕಾರವನ್ನು ಮಾಡತಕ್ಕಂಥ
ವಿಚಾರ ಮಾಡುತ್ತಿದ್ದೀರಿ. ಇದು ಬಹಳ ಸಂತೋಷದ ಸುದ್ದಿ. ಅದನ್ನು ತಾವು ಮಾಡಬೇಕು.
ಕೊನೆಯದಾಗಿ ಸಂತೆಕಲ್ಲೂರಿನ ಗನಮಾಟೇಶ್ವರರು ಎಂದು ಹೇಳಿ, ಕೃಷಿಯನ್ನು ಯಾವ ರೀತಿ
ವೈಜ್ಞಾನಿಕವಾಗಿ ಮಾಡಬೇಕು ಎಂಬ ಬಗ್ಗೆ ೧೫೦ ವರ್ಷಗಳ ಹಿಂದೆಯೇ ಒಂದು ಗ್ರಂಥವನ್ನು
ಬರೆದಿದ್ದಾರೆ. ಆ ಗ್ರಂಥದ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಬಂಗಾರಪ್ಪನವರನ್ನು, ನಾವು
೧೫-೨೦ ಜನ ಎಂ. ಎಲ್. ಎ ಗಳು ಹೋಗಿ ಕೇಳಿದೆವು. ರಾಯಚೂರಿನಲ್ಲಿ ಒಂದು ವಿಭಾಗವನ್ನು
ಪ್ರಾರಂಭ ಮಾಡುತ್ತೇವೆ ಅಥವಾ ಅದರ ಬಗ್ಗೆ ಸಂಶೋಧನೆಯನ್ನು ಮಾಡುವುದಕ್ಕೆ ರಾಯಚೂರಿನಲ್ಲಿ
ಈಗಾಗಲೇ ಕಾಲೇಜು ಇದೆ. ಆದ್ದರಿಂದ ಗನಮಾಟೇಶ್ವರರ ಹೆಸರಿನಲ್ಲಿ ಸಂಶೋಧನೆಯ ಕೇಂದ್ರವನ್ನು
ಮಾಡಬೇಕು ಎಂದು ಅವರಲ್ಲಿ ಬೇಡಿಕೊಂಡಿದ್ದೆವು. ಆಗ ಅವರು ಅದನ್ನು ಮಾಡುತ್ತೇವೆಂದು ಹೇಳಿದ್ದರು.
ಆದರೆ ಅದರ ಬಗ್ಗೆ ಇಲ್ಲಿಯವರೆಗೆ ಏನೂ ವಿಚಾರ ಬಂದಿಲ್ಲ. ತಾವು ದಯಮಾಡಿ ಆ ಗ್ರಂಥವನ್ನು ತರಿಸಿ
ನೋಡಬೇಕು. ಇವತ್ತು ಕೃಷಿ ಪಂಡಿತರೇನಿದ್ದಾರೆ, ವಿಜ್ಞಾನಿಗಳೇನು ಇದ್ದಾರೆ, ವೈದ್ಯರುಗಳೇನಿದ್ದಾರೆ
ಅವರುಗಳು ಆ ಗ್ರಂಥವನ್ನು ಅಧ್ಯಯನ ಮಾಡುತ್ತಿದ್ದಾರೆ. ಅದು ಅಷ್ಟರಮಟ್ಟಿಗೆ ನಿಜವಾಗಿದೆ.
ಇವತ್ತು ಅಮೇರಿಕಾ ದೇಶದವರೂ ಸಹ ಇದನ್ನು ಅಳವಡಿಸಿಕೊಳ್ಳಬೇಕು ಎನ್ನುವ ವಿಚಾರವನ್ನು
ಮಾಡುತ್ತಿದ್ದಾರೆ. ೧೫೦ ವರ್ಷಗಳ ಹಿಂದೆ ಬರೆದಂಥ ಈ ಗ್ರಂಥದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು
ದಯಮಾಡಿ ಏನಾದರೂ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ
ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿ. ಚಿಕ್ಕಮಾದು (ಹುಣಸೂರು).—ಸನ್ಮಾನ್ಯ ಅಧ್ಯಕ್ಷರೆ, ದಿವಂಗತ ದೇವರಾಜ
ಅರಸುರವರ ಪ್ರತಿಮೆಯನ್ನು ಈ ವರ್ಷದ ಆಗಸ್ಟ್ ೨೦ ರಂದು ಅನಾವರಣ ಮಾಡತಕ್ಕ ವಿಚಾರ ನಿಜ
ವಾಗಲೂ ಕೂಡ ಸ್ವಾಗತಾರ್ಹವಾದುದು. ಆ ಕೀರ್ತಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಬೇಕಾಗುತ್ತದೆ.
ಈ ಪ್ರತಿಮೆಯನ್ನು ವಿ. ಜಿ. ಕಛೇರಿಯ ಮುಂದೆ ಅನಾವರಣ ಮಾಡಲಾಗುವುದೆಂದು ಮುಖ್ಯ ಮಂತ್ರಿ
ಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು. ದಯಮಾಡಿ ಈ ಪ್ರತಿಮೆಯನ್ನು ವಿಧಾನ ಸೌಧದ
ಮುಂಭಾಗದಲ್ಲಿ ಮಾಡಿದ್ದರೆ ನಿಜವಾಗಿಯೂ ಮಾನ್ಯ ದೇವರಾಜ ಅರಸುರವರು ಮಾಡಿದಂಥ ತ್ಯಾಗಕ್ಕೆ
ಮೆಚ್ಚಿಗೆಯಾಗುತ್ತಿತ್ತು. ಆದ್ದರಿಂದ ತಾವು ದಯಮಾಡಿ ಈ ಪ್ರತಿಮೆಯ ಸ್ಥಳವನ್ನು ಬದಲಾವಣೆ
ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಚಾರ
ವೇನೆಂದರೆ, ದಿವಂಗತ ದೇವರಾಜ ಅರಸುರವರು ಇವತ್ತು ನಾನು ಪ್ರತಿನಿಧಿಸುತ್ತಿರುವ ಕ್ಷೇತ್ರದಿಂದ
ಸತತವಾಗಿ ಮೂವತ್ತು ವರ್ಷಗಳ ಕಾಲ ಅವಿರತವಾಗಿ ಯಾವ ಸೋಲೂ ಇಲ್ಲದೆ ಈ ಕ್ಷೇತ್ರವನ್ನು
ಸ್ಪರ್ಧಿಸುತ್ತಿದ್ದರು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಕ್ಷೇತ್ರದಲ್ಲೂ ಸಹ ಅವರ
ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದರೆ ಆ ತಾಲ್ಲೂಕಿನ ಜನರಿಗೆ ಬಹಳ ಮೆಚ್ಚುಗೆಯಾಗುತ್ತದೆ.
ಇದನ್ನೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.
ಎರಡನೆಯದಾಗಿ ಪರಿಶಿಷ್ಟ ಜಾತಿಯವರಿಗಾಗಿ ಪ್ರತ್ಯೇಕವಾದ ನಿರ್ದೇಶನಾಲಯವನ್ನು ೧೯೯೪-೯೫ನೇ
ಸಾಲಿನಲ್ಲಿ ಮಾಡುವುದಾಗಿ ಆಯವ್ಯಯದಲ್ಲಿ ತಿಳಿಸಿದ್ದಾರೆ. ನಿಜವಾಗಿಯೂ ಕೂಡ ಕರ್ನಾಟಕ ರಾಜ್ಯ

ಕಾಮಗಾರಿಗಳನ್ನು ಮುಗಿಸಲು ಸಾಧ್ಯವಾಗುತ್ತದೆ. ಅಲ್ಲಿ ಒಂದು ತಾರತಮ್ಯವಿದೆ. ಅದೇನೆಂದರೆ, ಕೆಲವೊಂದು ಪ್ರಾಜೆಕ್ಟ್‌ಗೆ ಕಾಂಪೋನೆಂಟ್ಸ್‌ಗೆ ವಿಶ್ವ ಬ್ಯಾಂಕ್‌ನ ಏಡ್‌ನಿಂದ ರೀಎಂಬರ್ಸ್‌ಮೆಂಟ್ ಇದೆ, ಮತ್ತೆ ಕೆಲವೊಂದು ಕಂಪೋನೆಂಟ್‌ಗಳಿಗೆ ವಿಶ್ವ ಬ್ಯಾಂಕಿನ ರೀಎಂಬರ್ಸ್‌ಮೆಂಟ್ ಇರಲಾರದ್ದು ಇದೆ. ಇವರು ಏನು ಮಾಡುತ್ತಾರೆಂದರೆ, ವಿಶ್ವ ಬ್ಯಾಂಕ್ ಏಡ್‌ಗೆ ಮಾತ್ರ ಥ್ರಸ್ಟ್ ಕೊಡುತ್ತಿದ್ದಾರೆ. ಏಕೆಂದರೆ ಅಮೌಂಟ್ ರೀಎಂಬರ್ಸ್‌ಮೆಂಟ್ ಆಗುತ್ತದೆಂದು. ವಿಶ್ವ ಬ್ಯಾಂಕ್ ಯಾವುದನ್ನು ರೀ ಇಂಬರ್ಸ್‌ಮೆಂಟ್ ಮಾಡುವುದಿಲ್ಲವೋ ಅದನ್ನು ಕೈಬಿಡುತ್ತಿದ್ದಾರೆ. ನಾವು ಇರಿಗೇಷನ್‌ನಲ್ಲಿ ಕೊನೆಯಪಕ್ಷ ಬೆರ್ ಲೋ ವೆಲಾಸಿಟಿ ಕೆನಾಲನ್ನಾದರೂ ಮಾಡಿಕೊಂಡು, ಅದರ ಡಿಸೈನ್‌ನ್ನು ಮಾಡಿಕೊಂಡು ಅದರ ಲೈನಿಂಗ್‌ನ್ನು ಮುಂದಿಟ್ಟುಕೊಂಡು ಎರಡು ಸಾವಿರ ಇಸವಿಯೊಳಗೆ ನೀರನ್ನು ಉಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡಬೇಕು, ಆದ್ದರಿಂದ ಲೋ ವೆಲಾಸಿಟಿ ಕೆನಾಲ್‌ಗಳನ್ನು ಡಿಸೈನ್ ಮಾಡಿಕೊಂಡು ಅದರ ಕೆಲಸವನ್ನು ತೀವ್ರಗತಿಯಲ್ಲಿ ತೆಗೆದುಕೊಂಡು ಮಾಡಿದರೆ, ಅದಕ್ಕೆ ಇಮ್ಮಿಡಿಯೇಟ್ ಲೈನಿಂಗ್ ಬೇಕಾಗಿಲ್ಲ. ಬರೀ ಎಕ್ಸ್‌ಪ್ಲವೇಷನ್ ಮಾಡಿಕೊಂಡು ಹೋದರೆ ಸಾಕಾಗುತ್ತದೆ. ಎರಡು ಸಾವಿರ ಇಸವಿಯಲ್ಲಿ ಅದರಲ್ಲಿ ನೀರನ್ನು ಹರಿಯಬಿಡಬಹುದು. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಮತ್ತು ರೀಎಂಬರ್ಸ್ ಮಾಡತಕ್ಕ ಕಾಂಪೋನೆಂಟ್ಸ್‌ಗೆ ತಾವು ಎಷ್ಟು ಥ್ರಸ್ಟ್‌ನ್ನು ಕೊಡುತ್ತೀರೋ ಅಷ್ಟೇ ಥ್ರಸ್ಟನ್ನು ರೀಇಂಬರ್ಸ್‌ಮೆಂಟ್ ಆಗದೇ ಇರತಕ್ಕ ಕಾಂಪೋನೆಂಟ್ಸ್‌ಗೂ ಕೊಡಬೇಕು ಎಂಬುದು ನಮ್ಮ ಬಾಂಬೆ-ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕ ಭಾಗದ ಜನರ ಬೇಡಿಕೆಯಾಗಿದೆ. ಮತ್ತೆ ಅದಕ್ಕೆ ಈಗ ಪ್ರಾಧಿಕಾರವನ್ನು ಮಾಡತಕ್ಕಂಥ ವಿಚಾರ ಮಾಡುತ್ತಿದ್ದೀರಿ. ಇದು ಬಹಳ ಸಂತೋಷದ ಸುದ್ದಿ. ಅದನ್ನು ತಾವು ಮಾಡಬೇಕು. ಕೊನೆಯದಾಗಿ ಸಂತಿಕೆಲ್ಲೂರಿನ ಗನಮಾಟೇಶ್ವರರು ಎಂದು ಹೇಳಿ, ಕೃಷಿಯನ್ನು ಯಾವ ರೀತಿ ವೈಜ್ಞಾನಿಕವಾಗಿ ಮಾಡಬೇಕು ಎಂಬ ಬಗ್ಗೆ ೧೫೦ ವರ್ಷಗಳ ಹಿಂದೆಯೇ ಒಂದು ಗ್ರಂಥವನ್ನು ಬರೆದಿದ್ದಾರೆ. ಆ ಗ್ರಂಥದ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಬಂಗಾರಪ್ಪನವರನ್ನು, ನಾವು ೧೫-೨೦ ಜನ ಎಂ. ಎಲ್. ಎ ಗಳು ಹೋಗಿ ಕೇಳಿದೆವು. ರಾಯಚೂರಿನಲ್ಲಿ ಒಂದು ವಿಭಾಗವನ್ನು ಪ್ರಾರಂಭ ಮಾಡುತ್ತೇವೆ ಅಥವಾ ಅದರ ಬಗ್ಗೆ ಸಂಶೋಧನೆಯನ್ನು ಮಾಡುವುದಕ್ಕೆ ರಾಯಚೂರಿನಲ್ಲಿ ಈಗಾಗಲೇ ಕಾಲೇಜು ಇದೆ. ಆದ್ದರಿಂದ ಗನಮಾಟೇಶ್ವರರ ಹೆಸರಿನಲ್ಲಿ ಸಂಶೋಧನೆಯ ಕೇಂದ್ರವನ್ನು ಮಾಡಬೇಕು ಎಂದು ಅವರಲ್ಲಿ ಬೇಡಿಕೊಂಡಿದ್ದೆವು. ಆಗ ಅವರು ಅದನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ ಅದರ ಬಗ್ಗೆ ಇಲ್ಲಿಯವರೆಗೆ ಏನೂ ವಿಚಾರ ಬಂದಿಲ್ಲ. ತಾವು ದಯಮಾಡಿ ಆ ಗ್ರಂಥವನ್ನು ತರಿಸಿ ನೋಡಬೇಕು. ಇವತ್ತು ಕೃಷಿ ಪಂಡಿತರೇನಿದ್ದಾರೆ, ವಿಜ್ಞಾನಿಗಳೇನು ಇದ್ದಾರೆ, ವೈದ್ಯರುಗಳೇನಿದ್ದಾರೆ ಅವರುಗಳು ಆ ಗ್ರಂಥವನ್ನು ಅಧ್ಯಯನ ಮಾಡುತ್ತಿದ್ದಾರೆ. ಅದು ಅಷ್ಟರಮಟ್ಟಿಗೆ ನಿಜವಾಗಿದೆ. ಇವತ್ತು ಅಮೇರಿಕಾ ದೇಶದವರೂ ಸಹ ಇದನ್ನು ಅಳವಡಿಸಿಕೊಳ್ಳಬೇಕು ಎನ್ನುವ ವಿಚಾರವನ್ನು ಮಾಡುತ್ತಿದ್ದಾರೆ. ೧೫೦ ವರ್ಷಗಳ ಹಿಂದೆ ಬರೆದಂಥ ಈ ಗ್ರಂಥದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಏನಾದರೂ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿ. ಚಿಕ್ಕಮಾದು (ಹುಣಸೂರು).—ಸನ್ಮಾನ್ಯ ಅಧ್ಯಕ್ಷರೆ, ದಿವಂಗತ ದೇವರಾಜ ಅರಸುರವರ ಪ್ರತಿಮೆಯನ್ನು ಈ ವರ್ಷದ ಆಗಸ್ಟ್ ೨೦ ರಂದು ಅನಾವರಣ ಮಾಡತಕ್ಕ ವಿಚಾರ ನಿಜವಾಗಲೂ ಕೂಡ ಸ್ವಾಗತಾರ್ಹವಾದುದು. ಆ ಕೀರ್ತಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಬೇಕಾಗುತ್ತದೆ. ಈ ಪ್ರತಿಮೆಯನ್ನು ಪಿ. ಜಿ. ಕಛೇರಿಯ ಮುಂದೆ ಅನಾವರಣ ಮಾಡಲಾಗುವುದೆಂದು ಮುಖ್ಯ ಮಂತ್ರಿಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು. ದಯಮಾಡಿ ಈ ಪ್ರತಿಮೆಯನ್ನು ವಿಧಾನ ಸೌಧದ ಮುಂಭಾಗದಲ್ಲಿ ಮಾಡಿದ್ದರೆ ನಿಜವಾಗಿಯೂ ಮಾನ್ಯ ದೇವರಾಜ ಅರಸುರವರು ಮಾಡಿದಂಥ ತ್ಯಾಗಕ್ಕೆ ಮೆಚ್ಚಿಗೆಯಾಗುತ್ತಿತ್ತು. ಆದ್ದರಿಂದ ತಾವು ದಯಮಾಡಿ ಈ ಪ್ರತಿಮೆಯ ಸ್ಥಳವನ್ನು ಬದಲಾವಣೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ, ದಿವಂಗತ ದೇವರಾಜ ಅರಸುರವರು ಇವತ್ತು ನಾನು ಪ್ರತಿನಿಧಿಸುತ್ತಿರುವ ಕ್ಷೇತ್ರದಿಂದ ಸತತವಾಗಿ ಮೂವತ್ತು ವರ್ಷಗಳ ಕಾಲ ಅವಿರತವಾಗಿ ಯಾವ ಸೋಲೂ ಇಲ್ಲದೆ ಈ ಕ್ಷೇತ್ರವನ್ನು ಸ್ಪರ್ಧಿಸುತ್ತಿದ್ದರು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಕ್ಷೇತ್ರದಲ್ಲೂ ಸಹ ಅವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದರೆ ಆ ತಾಲ್ಲೂಕಿನ ಜನರಿಗೆ ಬಹಳ ಮೆಚ್ಚುಗೆಯಾಗುತ್ತದೆ. ಇದನ್ನೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ ಪರಿಶಿಷ್ಟ ಜಾತಿಯವರಿಗಾಗಿ ಪ್ರತ್ಯೇಕವಾದ ನಿರ್ದೇಶನಾಲಯವನ್ನು ೧೯೭೪-೭೫ನೇ ಸಾಲಿನಲ್ಲಿ ಮಾಡುವುದಾಗಿ ಆಯವ್ಯಯದಲ್ಲಿ ತಿಳಿಸಿದ್ದಾರೆ. ನಿಜವಾಗಿಯೂ ಕೂಡ ಕರ್ನಾಟಕ ರಾಜ್ಯ

ದಲ್ಲಿರುವ ಸುಮಾರು ನಲವತ್ತು ಲಕ್ಷ ಜನ ಪರಿಶಿಷ್ಟ ವರ್ಗದ ಜನತೆಗೆ ಇದರಿಂದ ಸಹಾಯವಾಗುತ್ತದೆ, ಇದನ್ನು ನಾನು ಸ್ವಾಗತಿಸಿ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅವರೆ ಅವರಲ್ಲಿ ವಿಶಾಸಲಾತಿ ಶೇಕಡ ಮೂರರಷ್ಟು ಇದೆ. ಅದನ್ನು ಕೇಂದ್ರದಲ್ಲಿರುವಂತೆ ಏಳೂವರೆ ಪರ್‌ಸೆಂಟ್‌ಗೆ ಹೆಚ್ಚಿಸಿದರೆ ನಿಜವಾಗಿಯೂ ಎಲ್ಲಾ ಅನುಕೂಲಗಳನ್ನು ಕೊಟ್ಟಂತೆ ಆಗುತ್ತದೆಂದು ಹೇಳುತ್ತೇನೆ. ಕೊನೆಯದಾಗಿ, ೧೯೯೩-೯೪ನೇ ಸಾಲಿನ ಆಯವ್ಯಯದಲ್ಲಿ ಚಿನ್ನಪ್ಪರೆಡ್ಡಿ ಆಯೋಗದ ಬಗೆ ಮಾನ್ಯ ಮುಖ್ಯ ಮಂತ್ರಿಯವರು ಪ್ರಸ್ತಾಪ ಮಾಡಿದ್ದರು. ಆದರೆ ಈ ಸಲದ ಬಜೆಟ್‌ನಲ್ಲಿ ಅದನ್ನು ಪ್ರಸ್ತಾಪ ಮಾಡಿಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಈ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತರಲು ಮನಸ್ಸು ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ತಾವು ಅನೇಕ ಸಾಧನೆಗಳನ್ನು ಮಾಡಿ ನಂಬರ್ ಒಂದು ಎಂದು ಬೆನ್ನು ತಟ್ಟಿಕೊಳ್ಳುತ್ತೀರಲ್ಲಾ, ರೈತರ ಮೇಲೆ ತೆರಿಗೆಯನ್ನು ಹಾಕುವುದರಲ್ಲಿ ನಾವು ನಂಬರ್ ಒಂದು ಎಂದು ಏಕೆ ಹೇಳುವುದಿಲ್ಲ? ಕಬ್ಬಿಗೆ ಪರ್ಚೇಸ್ ಟ್ಯಾಕ್ಸ್ ಒಂದೊಂದು ಎಕರೆಗೆ ನಾಲ್ಕು ಸಾವಿರ ತೆರಿಗೆ ಆಗುತ್ತಿದೆ. ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಒಂದು ಟನ್‌ಗೆ ೨೫ ರೂಪಾಯಿ ತೆರಿಗೆ ಇದ್ದರೆ ಇಲ್ಲಿ ೮೫ ರೂಪಾಯಿ ಇದೆ. ಆ ಕಾರಣ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸರಿಯಾಗಿ ಯೋಚನೆ ಮಾಡಿ ಮಹಾರಾಷ್ಟ್ರದಲ್ಲಿರುವಷ್ಟೇ ಪರ್ಚೇಸ್ ಟ್ಯಾಕ್ಸನ್ನು ತೆಗೆದುಕೊಳ್ಳುತ್ತೀರ ಎಂದು ಕೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಕರ್ನಾಟಕದಲ್ಲಿ ಗೃಹ ಮಂಡಳಿಯವರು ಆಶ್ರಯ ಯೋಜನೆಯ ಅಡಿಯಲ್ಲಿ ಅನೇಕ ಮನೆಗಳನ್ನು ಕಟ್ಟಬೇಕೆಂದು ನೀವು ಘೋಷಣೆ ಮಾಡಿದ್ದೀರಿ. ಆದರೆ ಜಿಲ್ಲಾಧಿಕಾರಿಯವರ ಮೂಲಕ ಅನೇಕ ಮನೆಗಳು ಆಗಿದೆ. ಆದರೆ ಕರ್ನಾಟಕ ಗೃಹ ಮಂಡಳಿಯಿಂದ ರಾಜ್ಯದಲ್ಲಿ ಏನು ಮನೆಗಳನ್ನು ಕಟ್ಟಿದ್ದಾರೆ ಅದರ ಬಗ್ಗೆ ಸಿ. ಒ. ಡಿ. ತನಿಖೆಯಾಗುತ್ತಿರುವ ದೃಷ್ಟಿಯಿಂದ, ಆ ಮನೆಗಳ ಕೆಲಸ ನಿಂತು ಹೋಗಿದೆ. ದಯಮಾಡಿ ಸಿ. ಒ. ಡಿ. ತನಿಖೆಯಾಗುವುದು ಆಗಲಿ, ಅದಕ್ಕೂ ಇದಕ್ಕೂ ಡೀ ಲಿಂಕ್ ಮಾಡದೆ, ಆ ಮನೆಗಳಾಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಶ್ರೀಮಾನ್ ವೀರೇಂದ್ರಪಾಟೀಲ್‌ರವರ ಕಾಲದಲ್ಲಿ ರಾಜ್ಯದಲ್ಲಿ ಕುಡಿಯುವ ನೀರಿನ ೨೨ ಯೋಜನೆಗಳು ಪ್ರಾರಂಭವಾಗಿತ್ತು. ಕಳೆದ ವರ್ಷ ಅವೆಲ್ಲಾ ಮುಗಿಯಬೇಕಾಗಿತ್ತು. ಚಾಮರಾಜನಗರ, ಶಿವಮೊಗ್ಗ, ಬೀದರ್ ಈ ರೀತಿ ಅನೇಕ ಕಡೆ ಕುಡಿಯುವ ನೀರಿನ ಯೋಜನೆಗಳು ಮುಗಿಯಬೇಕಾಗಿತ್ತು. ಆದರೆ ಆ ಯೋಜನೆಗಳು ತುಂಬಾ ಆಮೆಯ ಗತಿಯಲ್ಲಿ ನಡೆಯುತ್ತಿವೆ. ಇನ್ನು ೧ ವರ್ಷ ಬೇಕು. ೨ ವರ್ಷ ಬೇಕು ಎನ್ನುವ ತರಹದಲ್ಲಿ ಮಾತನಾಡುತ್ತಿದ್ದಾರೆ. ಆದುದರಿಂದ ದಯಮಾಡಿ ಅದರ ಬಗ್ಗೆ ತಕ್ಷಣ ಗಮನಕೊಟ್ಟು ಹಣವನ್ನು ಬಿಡುಗಡೆ ಮಾಡಬೇಕು. ಮೂರನೆಯದಾಗಿ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಕೆ.ಎಸ್.ಎಫ್.ಸಿ. ಮುಖಾಂತರವೇ ರಿಲೀಸ್ ಮಾಡುತ್ತೇವೆಂದು ತಾವು ಆರ್ಡರ್ ಅನ್ನು ಕಳುಹಿಸಿ ಕೊಟ್ಟಿದ್ದೀರಿ. ಕಳೆದ ಜೂನ್ ತಿಂಗಳಿಂದಲೇ ಕೆ.ಎಸ್.ಎಫ್.ಸಿ. ಮುಖಾಂತರ ಸಣ್ಣ ಕೈಗಾರಿಕಾ ಘಟಕಗಳಿಗೆ ಸಬ್ಸಿಡಿ ಬರಬೇಕಾಗಿತ್ತು. ಇದುವರೆಗೂ ಕೂಡ ಕೆ.ಎಸ್.ಎಫ್.ಸಿ.ಗೆ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಅವಕಾಶವಾಗಿಲ್ಲ. ತಾವು ಸರ್ಕಾರಿ ಆಜ್ಞೆಯನ್ನು ಏನು ಮಾಡಿದ್ದೀರಿ. ಅದನ್ನು ಇಂಪ್ಲಿಮೆಂಟ್ ಮಾಡುವ ದಿಕ್ಕಿನಲ್ಲಿ ತಕ್ಷಣ ತಾವು ಗಮನಿಸಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ. ಕೊನೆಯದಾಗಿ, ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವುದು, ಕಂದಾಯ ಇಲಾಖೆಯ ಮುಖಾಂತರ ಏನು ಇದಾಗಿದೆ ಅದು ಒಂದು ರೀತಿಯಲ್ಲಿ ಮುಂದುವರಿಯುತ್ತಿದೆ. ಆದರೆ ಅರಣ್ಯ ಇಲಾಖೆಗೆ ಅರ್ಜಿಗಳನ್ನು ಹಾಕುವಂತಹ ಅಂದರೆ ಅರ್ಜಿಗಳನ್ನು ಹಾಕುವುದಕ್ಕೆ ಆಗುತ್ತಿಲ್ಲ. ಅರ್ಜಿಗಳನ್ನು ನಿಗದಿತ ಫಾರಂಗಳಲ್ಲಿ ಕೊಡಬೇಕೆಂದು ಆಗಿರುವುದರಿಂದ ಅನೇಕ ಬಗರ್ ಹುಕುಂ ಸಾಗುವಳಿದಾರರಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ದಯಮಾಡಿ ನಿಗದಿತ ಫಾರಂನಲ್ಲಿ ಹಾಕುವುದಕ್ಕೆ ಅವಕಾಶ ಮಾಡಿಕೊಡುವುದರ ಬಗ್ಗೆ ತಾವು ಸ್ವಲ್ಪ ಗಮನಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

SRI K.C. MODGEKAR DESAI.—Sir, Construction of a bridge was not taken up even though we are demanding. The height of that bridge is less and not sufficient. Therefore in rainy season

especially the traffic is cut off and the villagers cannot go to Belgaum city. Therefore I once again demand, kindly take this bridge work in this Budget session. I am asking to start the PHC Centre at Kadoli and Halage, Taluk Belgaum. I have given my representation. The Hon. Chief Minister has endorsed on it and it has been sent to the Finance Department. I am doubting whether it has been included or not. Therefore, I am urging the Government to start PHC centre at Kadoli and Halage, Taluk Belgaum.

ಶ್ರೀ ಎಂ.ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ. ೧೯೮೪-೮೫ರ ಬಜೆಟ್‌ನಲ್ಲಿ ತಾರಕ ಏತ ನೀರಾವರಿ ಯೋಜನೆಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಇದರ ಅಂದಾಜು ವೆಚ್ಚ ೨೭ ಕೋಟಿ ರೂಪಾಯಿಗಳು ಆಗುತ್ತವೆ. ಸುಮಾರು ೪೮ ಸಾವಿರ ಎಕರೆ ಭೂಮಿಗೆ ನೀರಾವರಿಯಾಗುತ್ತದೆ, ಈ ತಾಲ್ಲೂಕಿನಲ್ಲಿ ಸಾವಿರಾರು ಎಕರೆ ಏನು ಮುಳುಗಡೆಯಾಗಿತ್ತು ಆ ತಾಲ್ಲೂಕುಗಳಿಗೆ ಅನುಕೂಲಗಳಾಗಿಲ್ಲ. ಬಜೆಟ್‌ನಲ್ಲಿ ೩೩ ಕೋಟಿ ರೂಪಾಯಿಗಳ ಅಂದಾಜು ಏನು ಇದೆ ಅದರಲ್ಲಿ ಈ ಸಾಲಿಗಾಗಿ ೯ ಕೋಟಿ ರೂಪಾಯಿಗಳನ್ನು ಇಟ್ಟು ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಹೆಗ್ಗಡ ದೇವನ ಕೋಟೆ ತಾಲ್ಲೂಕ್‌ನಲ್ಲಿ ಗಿರಿಜನರಿಗೆ ಆಹಾರವಿಲ್ಲ, ಅವರು ಸಾಯುತ್ತಿದ್ದಾರೆ. ಅವರಿಗೆ ಕೆಲಸ ಇಲ್ಲ. ಎಂದು ಪತ್ರಿಕೆಗಳಲ್ಲಿ ಬರುತ್ತಿದೆ ಅದು ಸರಿಯಲ್ಲ. ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತೇವೆ. ಗಿರಿಜನರಿಗೆ ೨೦೦ ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಕೊಟ್ಟು ಅವರಿಗೆ ಸಾಗುವಳಿ ಚೀಟಿ ಕೊಡುವುದಕ್ಕಾಗಿ ಏನು ಪ್ರಸ್ತಾವನೆ ಆ ೨೦೦ ಎಕರೆಯನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಾಬುರಾವ್ ಚವ್ಹಾಣ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾಕ್ಕೆ ಬಂದಾಗ ಹೆಚ್.ಕೆ.ಡಿ.ಬಿ. ಸಭೆಯಲ್ಲಿ ಹೆಚ್.ಕೆ.ಡಿ.ಬಿ. ಯಿಂದ ಬರುವಂತಹ ದುಡ್ಡನ್ನು ಬಿಟ್ಟು ಇನ್ನು ೧೦ ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಡುತ್ತೇವೆಂದು ಹೇಳಿದ್ದರು. ಅದಕ್ಕೆ ಹೈದರಾಬಾದ್–ಕರ್ನಾಟಕ ಶಾಸಕರೆಲ್ಲಾ ನಿರೀಕ್ಷೆ ಮಾಡುತ್ತಿದ್ದೇವೆ. ಆ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಆಡಳಿತ ಮಂಡಳಿಯು ನಡೆಸುತ್ತಿರುವ ಶಾಲೆಗಳಿಗೆ ಸರ್ಕಾರದ ಕಡೆಯಿಂದ ಪ್ರಾರಂಭದಲ್ಲಿ ಅನುದಾನವನ್ನು ಕೊಡಬೇಕೆಂದು ಸರ್ಕಾರದ ನಿಯಮವಿದೆ. ಇದು ಈಗ ಆಗುತ್ತಿಲ್ಲ. ಈಗ ಎಸ್.ಸಿ.,ಎಸ್‌ಟಿ ಮ್ಯಾನೇಜ್‌ಮೆಂಟ್‌ನ್ನು, ಜನರಲ್ ಮ್ಯಾನೇಜ್‌ಮೆಂಟ್‌ನ್ನು ಒಂದೇ ಸಮನಾಗಿ ನೋಡುತ್ತಿದ್ದಾರೆ. ಆದರೆ ನಿಯಮದ ಪ್ರಕಾರ ಎಸ್ಸಿ.ಎಸ್‌ಟಿ ಮ್ಯಾನೇಜ್‌ಮೆಂಟಿಗೆ ಪ್ರಾರಂಭದಿಂದಲೇ ಅನುದಾನವನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವುದಕ್ಕೆ ತಾವು ಮನಸ್ಸು ಮಾಡಿದ್ದೀರಿ. ಅದಕ್ಕೆ ನನ್ನ ಧನ್ಯವಾದಗಳನ್ನು ಹೇಳುತ್ತಾ, ಲಂಬಾಣಿ ತಾಂಡಕ್ಕೆ ನಿಗಮವೊಂದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೇ, ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೋದ್ಯಮಿಗಳು ಅಂದರೆ ಶಹಬಾದ್‌ಫರ್ಷಿ ಪಾಲೀಷ್ ಮಿಷನ್‌ಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಸೇಡಂ, ಚಿಂಚೋಳಿ, ಚಿತ್ತಾಪುರ್, ತಾಲ್ಲೂಕ್‌ಗಳಲ್ಲಿ ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇವುಗಳಿಗೆ ೫-೭ಲಕ್ಷ ರೂಪಾಯಿಗಳು ವೆಚ್ಚವಾಗಿ ೧೫–೨೦ ಮಂದಿ ಕೆಲಸಗಾರರು ಬೇಕಾಗುತ್ತದೆ. ಅದಕ್ಕಾಗಿ ಕೈಗಾರಿಕೋದ್ಯಮ ಇಲಾಖೆಯವರು ಸಣ್ಣ ಕೈಗಾರಿಕೋದ್ಯಮಿಗಳು ಪ್ರಾರಂಭಿಕ ಅಂದರೆ ಪ್ರಥಮ ವರ್ಷದಲ್ಲಿ ಸೇಲ್ಸ್‌ಟ್ಯಾಕ್ಸ್‌ನ್ನು ಮನ್ನಾ ಮಾಡಲು ಆದೇಶ ನೀಡಿದ್ದಾರೆ. ಆದರೆ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಇದಕ್ಕೆ ಒಪ್ಪಿಗೆ ನೀಡದೆ ಈ ಸೇಲ್ಸ್‌ಟ್ಯಾಕ್ಸ್‌ನ್ನು ವಸೂಲಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ನೋಟೀಸ್‌ಗಳು ಕೊಟ್ಟಿದ್ದಾರೆ, ನ್ಯಾಯಾಲಯಗಳಲ್ಲಿ ಕೇಸ್ ಸಹ ನಡೆದಿದೆ. ಈ ಸಣ್ಣ ಕೈಗಾರಿಕೆಗಳಿಗೆ ಪ್ರಾರಂಭದ ೫ ವರ್ಷಗಳಲ್ಲಿ ಈ ಸೇಲ್ಸ್‌ಟ್ಯಾಕ್ಸ್‌ನ್ನು ಮನ್ನಾ ಮಾಡಿದರೆ ಈ ಬಡ ಉದ್ಯಮದಾರರಿಗೆ ಅನುಕೂಲವಾಗಿ ಈಗಾಗಲೇ ಇಲ್ಲಿಗಲ್ ಆಗಿ ಪಾಲಿಷ್ ಮೆಷಿನ್ ನಡೆಸುತ್ತಿದ್ದಾರೆ. ಅವನ್ನು ಲೀಗಲ್ ಆಗಿ ಮಾಡುತ್ತಾರೆ. ಇದರಿಂದ ಸರ್ಕಾರಕ್ಕೆ ಸಹ ೫

ವರ್ಷಗಳ ನಂತರ ತೆರಿಗೆ ಲಾಭವಾಗುತ್ತದೆ. ಅದಕ್ಕಾಗಿ ಈ ಪ್ರಥಮ ೫ ವರ್ಷಗಳಲ್ಲಿ ಇವರಿಗೆ ಸೇಲ್ಸ್‌ಟ್ಯಾಕ್ಸ್ ಮನ್ನಾ ಮಾಡಲು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಅಲ್ಲದೆ ರೈತರಿಗೆ ಸಹಕಾರ ಸಂಘಗಳ ಬಡ್ಡಿಯನ್ನು ಪೂರ್ತಿ ಮನ್ನಾ ಮಾಡದೇ ಇದ್ದರೂ ಸಹ ರಿಯಾಯಿತಿ ಹಣವನ್ನು ನೀಡಿ ೭ ಪ್ರತಿಶತ ಬಡ್ಡಿ ವಸೂಲಿಗಾಗಿ ವ್ಯವಸ್ಥೆ ಮಾಡಲು ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

(ಶ್ರೀ ಜಿ. ರಾಜೂಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೆ, ಕಬ್ಬಿನ ಮೇಲೆ ಇರತಕ್ಕಂತಹ ಮಾರಾಟ ತೆರಿಗೆಯನ್ನು ಕಡಿಮೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಕೋರುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಹೊಸನಗರ ತಾಲ್ಲೂಕಿನಲ್ಲಿ ಸುಮಾರು ೪-೫ ಯೋಜನೆಗಳು ಬಂದವು. ಅವುಗಳು ಹಿಂದೆ ಬಾಸ್ಕರ, ಲಿಂಗನಮಕ್ಕಿ, ಸಾವೆಹಕ್ಕಲು, ಚಕ್ರ ಹಾಗೂ ವರಾಹಿ ಈ ಯೋಜನೆಗಳು ಬಂದು ಅಲ್ಲಿ ಇರತಕ್ಕಂತಹ ಜನರೆಲ್ಲಾ ನಿರಾಶ್ರಿತರಾದರು. ಹೊಸನಗರ ತಾಲ್ಲೂಕಿನಲ್ಲಿರತಕ್ಕಂಥ ಸುಮಾರು ಆರು ನೂರು ಮಜರೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಇದುವರೆಗೂ ಒದಗಿಸುವುದಕ್ಕೆ ಆಗಿಲ್ಲ ಅದಕ್ಕೋಸ್ಕರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡಿದ್ದೇನೆ. ಈ ಸಾಲಿನಲ್ಲಾದರೂ ಕೂಡ ಮಜರೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ತಕ್ಷಣ ಒದಗಿಸಿಕೊಡಬೇಕು. ಬಹುಶಃ ಇಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಒದಗಿಸದೇ ಇರುವಂಥಾದ್ದು ಒಂದು ದೊಡ್ಡ ಸುದ್ದಿಯಾಗಿದೆ ಎನ್ನುವಂತಹ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಅದಕ್ಕೆ ವಿಶೇಷವಾದ ಒಂದು ಮಂಜೂರಾತಿಯನ್ನು ಕೊಟ್ಟು ವಿದ್ಯುಚ್ಛಕ್ತಿ ಒದಗಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಉಪಾಧ್ಯಕ್ಷರೇ, ಮೆಗಾಸಿಟಿ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಹಸ್ರಾರು ಕೋಟಿ ರೂಪಾಯಿ ಖರ್ಚು ಮಾಡುವಂತಹ ರೀತಿಯಲ್ಲಿ ಪ್ರಸ್ತುತವಾಗಿ ನೂರು ಕೋಟಿ ಚಿಲ್ಲರೆ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಮೆಗಾಸಿಟಿ ಪ್ರಾಜೆಕ್ಟ್ ಏನಿದೆ ಅದು ಸಂಪೂರ್ಣವಾಗಿ ಶತಮಾನದಿಂದ ಯಾವ ವಿಭಾಗಗಳು ಬೆಳೆದುಬಂದಿದೆ, ಮುಂದುವರೆದಿದೆ. ಆ ವಿಭಾಗಕ್ಕೆ ಮಾತ್ರ ಮಾಡಿದ್ದಾರೆ ಇಡೀ ಕಂಟೋನ್‌ಮೆಂಟ್ ಸಿವಿಲ್ ಸ್ಟೇಷನ್ ಮತ್ತು ಸಿವಿಲ್ ಏರಿಯಾ ಎಂದು ಏನು ಹೇಳುತ್ತಿದ್ದೆವು ಆ ಭಾಗದ ಕಡೆ ಸ್ವಲ್ಪವೂ ಗಮನ ಕೊಟ್ಟಿಲ್ಲ. ಮತ್ತು ಬಹಳ ಹಿಂದುಳಿದ ವರ್ಗಗಳು ಇವೆ, ಅಲ್ಪಸಂಖ್ಯಾತರುಗಳು ಇದ್ದಾರೆ ಮತ್ತು ಹಳ್ಳಿಗಳು ಏನು ಇವೆ, ಯಾರಿಂದ ಈ ಬೆಂಗಳೂರು ನಗರ ಬೆಳೆದು ಬಂದಿದೆ ಅವರ ಕಡೆ ಸ್ವಲ್ಪವೂ ಕೂಡ ಗಮನ ಕೊಟ್ಟಿಲ್ಲ. ರಸೆಲ್ ಮಾರ್ಕೆಟ್ ಏರಿಯಾ ರೀಸ್ಟ್ರಕ್ಚರ್ ಮಾಡುವುದಕ್ಕೆ ಬಹಳ ಅವಕಾಶ ಇದೆ. ಒಂದು ಪಾರ್ಕಿಂಗ್ ಮಾಡುವುದಕ್ಕೆ ಅಲ್ಲಿ ಅವಕಾಶ ಇದೆ. ಅದಕ್ಕೆ ನಾನು ಕಾಗದಗಳನ್ನು ಕೊಟ್ಟಿದ್ದೇನೆ, ಆದ್ದರಿಂದ ಏಕೆ ಮಾನ್ಯ ಮುಖ್ಯಮಂತ್ರಿಗಳು ಆ ಕಡೆ ಗಮನ ಕೊಟ್ಟಿಲ್ಲವೆಂದು ನಾನು ಕೇಳಬಯಸುತ್ತೇನೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಸ್ಕಾಲರ್‌ಶಿಪ್‌ಗೆ ವಾರ್ಷಿಕ ಆದಾಯ ತಾವು ಏನು ನಿಗಧಿ ಮಾಡಿರುವುದು ೩೪೦೦ ರೂಪಾಯಿ ಇದೆ. ಅದೇ ರೀತಿ ಐಆರ್‌ಡಿಪಿಯವರಿಗೆ ೬೪೦೦ ರೂಪಾಯಿ ಇದೆ. ಈ ವಾರ್ಷಿಕ ಆದಾಯದಲ್ಲಿ ಗೊಂದಲ ಇದೆ. ಅದನ್ನು ಸರಿಪಡಿಸಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ ಇದೆ. ಬ್ರಹ್ಮಾವರದಲ್ಲಿ ಬೀಜೋತ್ಪಾದನಾ ಕೇಂದ್ರ ಇದೆ. ಇಲ್ಲಿ ಒಂದು ಕೃಷಿ ಕಾಲೇಜನ್ನು ಮಾಡಬೇಕು ಎಂದು ನಾನು ಕೇಳುತ್ತಿದ್ದೇನೆ. ಮತ್ತೊಂದು ವಿಷಯ ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರಾಹಿ ಯೋಜನೆ ಇದೆ. ಆದರೆ ಅದು ಪ್ರಾರಂಭವಾಗಿಲ್ಲ. ಅದೇ ರೀತಿ ಪ್ರತಿ ಕ್ಷೇತ್ರದಲ್ಲಿ ಏತ ನೀರಾವರಿ ಬಗ್ಗೆ ಈಗಾಗಲೇ ಟೆಂಡರ್ ಕರೆದಿದ್ದಾರೆ. ಆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆ ಬಗ್ಗೆ ಪ್ರಸ್ತಾಪ ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಬಸವಗೌಡ ಅಮರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತಿನ ಸಂದರ್ಭದಲ್ಲಿ ಲಂಬಾಣಿ ತಾಂಡಗಳಿಗೆ ರೆವಿನ್ಯೂ ವಿಲೇಜ್ ಮಾಡಬೇಕು ಎಂದು ಹೇಳಿದ್ದಾರೆ. ಆದರೆ ನಮ್ಮಲ್ಲಿ ಆಂಧ್ರದಿಂದ ಬಂದಿರತಕ್ಕ ಸೆಟ್ಲರ್ಸ್ ಬಹಳ ಜನ ಇದ್ದಾರೆ. ಅವರನ್ನೂ ಕೂಡ ಕೆಲವೊಂದು ರೆವಿನ್ಯೂ ವಿಲೇಜ್ ಮಾಡಲಿಕ್ಕೆ ಶಿಫಾರಸ್ಸು ಮಾಡಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿಸಿಕೊಳ್ಳುತ್ತೇನೆ. ಹಾಗೂ ೧೯೯೪-೯೫ರ ಬಡ್ಜೆಟ್ಟಿನಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಯೂನಿವರ್ಸಿಟಿ ತೆಗೆಯುತ್ತೇವೆಂಬ ಆಶ್ವಾಸನೆಯನ್ನು ಸೇರಿಸಿದ್ದೀರಿ, ನಮ್ಮ

ರಾಯಚೂರು ಜಿಲ್ಲೆ ಹಿಂದುಳಿದ ಜಿಲ್ಲೆ ಆಗಿರುವುದರಿಂದ ರಾಯಚೂರು ಜಿಲ್ಲೆಗೆ ಒಂದು ಯೂನಿವರ್ಸಿಟಿ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಹಾಗೂ ನಮ್ಮ ಅಪ್ಪಾಜಿ ನಾಡಗೌಡರು ಹೇಳಬೇಕು ಈ ಸಂದರ್ಭದಲ್ಲಿ ರಾಯಚೂರಿನಲ್ಲಿರುವ ಅಗ್ರಿಕಲ್ಚರಲ್ ಕಾಲೇಜಿಗೆ ಘನಮಃತೇಶ್ವರ ಅಗ್ರಿಕಲ್ಚರಲ್ ಕಾಲೇಜು ಎಂದು ನಾಮಕರಣ ಮಾಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ನನ್ನ ಕ್ಷೇತ್ರ ಗಡಿ ಪ್ರದೇಶ ಆಗಿರುವುದರಿಂದ ಅಲ್ಲಿಗೆ ಪೋಲೀಸ್ ಠಾಣೆ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಕುರಡಿ ಗ್ರಾಮಕ್ಕೆ ಒಂದು ಪೋಲೀಸ್ ಠಾಣೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಮ್ಮ ಬಚಾವತ್ ಆಯೋಗದ ಪ್ರಕಾರ ಎರಡು ಸಾವಿರ ಇಸವಿ ಒಳಗೆ ಆಂಧ್ರಪ್ರದೇಶಕ್ಕೆ ನೀರು ಅನಾವಶ್ಯಕವಾಗಿ ಹೋಗತಕ್ಕಂತಹ ಸಂಭವ ನಮ್ಮಲ್ಲಿ ಜಾಸ್ತಿ ಇದೆ. ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಲಿಕ್ಕೆ ೧೯೮೩-೮೪ರ ಬಡ್ಜೆಟ್ಟಿನಲ್ಲಿ ಸೇರಿಸಿದ್ದೀರಿ ಆದರೆ ಹಣಕಾಸು ಇಲಾಖೆ ಇದಕ್ಕೆ ಅಪ್ರೂವಲ್ ಕೊಡುತ್ತಿಲ್ಲ. ಓತನಾಳ್ ಮತ್ತು ಗೋರ್ಕಲ್ ಎರಡು ಗ್ರಾಮಗಳ ಏತ ನೀರಾವರಿ ಯೋಜನೆಗೆ ಅನುಮೋದನೆಯನ್ನು ಕೊಡಿಸಬೇಕೆಂದು ಇವತ್ತು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಮನೋಹರ್ ತಹಶೀಲ್ದಾರ್.—ನನ್ನ ಕ್ಷೇತ್ರವಾದ ಹಾನಗಲ್‌ನಲ್ಲಿ ನಾಲ್ಕು ಏತನೀರಾವರಿ ಯೋಜನೆಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಕೊಟ್ಟಿದ್ದರು ಅದಕ್ಕೆ ಹೆಚ್ಚಿಗೆ ಹಣ ಇಟ್ಟಿಲ್ಲ. ಅದಕ್ಕೆ ಹೆಚ್ಚಿನ ಹಣ ಇಟ್ಟು ಮತ್ತೆ ರಿಅಡ್‌ಮಿನಿಸ್ಟ್ರೇಟಿವ್ ಸ್ಯಾಂಕ್ಷನ್‌ಕೊಟ್ಟು ತಕ್ಷಣ ಪ್ರಾರಂಭ ಮಾಡುತ್ತೀರಾ. ಇದು ಮೊದಲನೆಯದು. ಎರಡನೆಯದು ಅಪ್ಪರ್ ತುಂಗ ಪ್ರಾಜೆಕ್ಟ್ ಬಗ್ಗೆ ನಮಗೆಲ್ಲಾ ಬಹಳ ದಿವಸಗಳಿಂದ ಒತ್ತಾಯ ಮಾಡುತ್ತಿದ್ದರು. ಇದಕ್ಕೆ ಸಾಕಷ್ಟು ಹಣ ಇಟ್ಟಿಲ್ಲ ಆಫೀಸ್ ಪ್ರಾರಂಭವಾಗಿದ್ದರೂ ಅದರ ಕೆಲಸ ಹೆಚ್ಚು ಜಾಗರೂಕತೆಯಿಂದ ನಡೆಯುತ್ತಿಲ್ಲ. ಆದುದರಿಂದ ಅದಕ್ಕೆ ಸಾಕಾಗುವಷ್ಟು ಹಣ ಇಟ್ಟು ತಕ್ಷಣ ಅದನ್ನು ಕಾರ್ಯಾಚರಣೆಗೆ ತರುತ್ತೀರಾ? ಮೂರನೆಯದು, ನಮ್ಮ ತಾಲ್ಲೂಕಿನಲ್ಲಿ ವಿದ್ಯುತ್ತಿನ ಕೊರತೆ ಮತ್ತು ಆಗಾಗ್ಗೆ ಓಲ್ಟೇಜ್ ಡ್ರಾಪ್ ಆಗುವುದರಿಂದ ರೈತರು ಪದೇ ಪದೇ ಸ್ಟ್ರೈಕ್ ಮಾಡುತ್ತಿದ್ದಾರೆ. ಆದುದರಿಂದ ೧೧೦ ಕೆ ವಿ ಪವರ್ ಸ್ಟೇಷನ್ ಬಂದರೆ ಮಾತ್ರ ಸಾಧ್ಯವಾಗುತ್ತದೆ ಎನ್ನುವುದು ಅಧಿಕಾರಿಗಳ ಅನಿಸಿಕೆ. ೩೩ ಕೆ ವಿ ಪವರ್ ಸ್ಟೇಷನ್ ಕೂಡ ತಿಳುವಳಿಯಲ್ಲಿ ಪ್ರಾರಂಭ ಆಗಬೇಕಾಗಿತ್ತು, ಇನ್ನೂ ಆಗಿಲ್ಲ. ಅದಕ್ಕೆ ೩೩ ಕೆ ವಿ ಪವರ್ ಸ್ಟೇಷನ್ ಮತ್ತು ೧೧೦ ಕೆ ವಿ ಪವರ್ ಸ್ಟೇಷನ್ ತಕ್ಷಣ ಮಂಜೂರು ಮಾಡಿ ಆದು ಕೆಲಸ ಮಾಡಿ ರೈತರ ಬವಣೆ ತಪ್ಪಿಸುತ್ತೀರಾ ಎನ್ನುವುದು ನನ್ನ ಕೋರಿಕೆ. ಕೊನೆಯದಾಗಿ, ನಮ್ಮ ತಾಲ್ಲೂಕಿನಲ್ಲಿ ಸುಮಾರು ೭೩ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಕೇಂದ್ರ ವಲಯ ಮತ್ತು ರಾಜ್ಯ ವಲಯಗಳಲ್ಲಿ ಮಂಜೂರು ಆಗಿದ್ದು ಅವುಗಳಿಗೆ ಒಂದು ಕೋಟಿ ೭೩ ಲಕ್ಷ ರೂಪಾಯಿ ಬೇಕಾಗುತ್ತದೆ. ಆದರೆ ಇಲ್ಲಿ ಕೇವಲ ೩೦ ಲಕ್ಷ ರೂಪಾಯಿ ಮಾತ್ರ ಇಟ್ಟಿರುವುದರಿಂದ ನಾಲ್ಕು ವರ್ಷಗಳಿಂದ ಈ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಆದ್ದರಿಂದ ತಕ್ಷಣ ಅದಕ್ಕೆ ವಿಶೇಷ ಗ್ರಾಂಟನ್ನು ಮುಖ್ಯಮಂತ್ರಿಗಳು ಕೊಟ್ಟು ನಮ್ಮ ಯೋಜನೆಗಳನ್ನು ತತ್‌ಕ್ಷಣ ಪ್ರಾರಂಭ ಮಾಡಿ ನಮ್ಮ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಾದತ್ ಅಲಿಖಾನ್.—ಮಾನ್ಯ ಅಧ್ಯಕ್ಷರೇ, ಈಗ ತಾನೇ ಮುಖ್ಯಮಂತ್ರಿಯವರು ಚನ್ನಪಟ್ಟಣ ವುಡ್ ಅಂಡ್ ಕ್ರಾಫ್ಟ್ಸ್‌ನ ಸೇಲ್ಸ್ ಟ್ಯಾಕ್ಸ್ ಅನ್ನು ವಜಾ ಮಾಡಿದ್ದೇವೆ ಎಂದು ಹೇಳಿದರು. ಅದು ಬಹಳ ಸಂತೋಷದ ಸುದ್ದಿ. ಚನ್ನಪಟ್ಟಣ ಕಾವೇರಿ ವಾಟರ್ ಸ್ಕೀಮ್‌ಗೆ ೧೯೮೦-೮೧ ರಲ್ಲಿ ಫೀಸಬಿಲಿಟಿ ರಿಪೋರ್ಟ್ ತಯಾರಾಗಿತ್ತು. ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಆ ವರ್ಷದಲ್ಲಿ ತೆಗೆದುಕೊಳ್ಳುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಇಲ್ಲಿಯವರೆಗೂ ಕಾವೇರಿ ವಾಟರ್ ಸ್ಕೀಮ್ ಚನ್ನಪಟ್ಟಣಕ್ಕೆ ಬಂದಿಲ್ಲ. ಚನ್ನಪಟ್ಟಣದಲ್ಲಿ ಬರೀ ಬೋರ್‌ವೆಲ್‌ನಿಂದ ನೀರು ಸಪ್ಲೈಯಾಗುತ್ತಿದೆ. ಹಿಂದೆ ಎರಡುನೂರು ಅಡಿಗಳಿಗೆ ಹಾಕಿದ್ದ ಬೋರ್‌ವೆಲ್‌ಗಳು ಇವತ್ತು ನೀರು ಬಾರದೆ ಅವುಗಳೆಲ್ಲಾ ಡ್ರೈ ಆಗಿವೆ. ಇದರಿಂದ ಜನರಿಗೆ ತೊಂದರೆ ಆಗುತ್ತಿದೆ. ಮತ್ತು ಈಗ ನಾಲ್ಕು ನೂರು, ನಾಲ್ಕು ನೂರ ಐವತ್ತು ಅಡಿ ಕೆಳಗಡೆ ಬೋರ್ ಹೋಗುತ್ತಿದೆ. ಆದ್ದರಿಂದ ಚನ್ನಪಟ್ಟಣದ ಕಾವೇರಿ ವಾಟರ್ ಸಪ್ಲೈ ಸ್ಕೀಮ್‌ನ್ನು ೧೯೮೪-೮೫ರ ಬಡ್ಜೆಟ್‌ನಲ್ಲಿ ಸೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ನಾರಾಯಣ.—ಮಾನ್ಯ ಅಧ್ಯಕ್ಷರೆ, ನಾನು ಎರಡು ಪ್ರಶ್ನೆಗಳನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಟ ಪಕ್ಷ ಮೂರು ಶೌಚಾಲಯಗಳನ್ನು ನಿರ್ಮಾಣ ಮಾಡಲು ಸರ್ಕಾರ ಘೋಷಣೆ ಮಾಡಬೇಕೆಂದು ನಾನು ಕೇಳಿಕೊಳ್ಳು

ತ್ತೇನೆ. ಇದರ ಬಗ್ಗೆ ನಾನು ಈಗಾಗಲೇ ಗ್ರಾಮೀಣ ಅಭಿವೃದ್ಧಿ ಸಚಿವರೊಂದಿಗೆ ಮಾತನಾಡಿದ್ದೇನೆ ಎರಡನೆಯದಾಗಿ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಪ್ರತಿಯೊಬ್ಬ ಶಾಸಕರಿಗೆ ಒಂದು. ಕೋಟಿ ರೂಪಾಯಿಗಳ ಡಿಸ್‌ಕ್ರಿಷನರಿ ಗ್ರಾಂಟ್‌ನ್ನು ಇಂತಿಂಥ ವಲಯಗಳಿಗೆ ಖರ್ಚು ಮಾಡಲು ಒದಗಿಸಬೇಕು. ಯಾವ ರೀತಿ ಲೋಕಸಭಾ ಸದಸ್ಯರುಗಳಿಗೆ ಪ್ರಧಾನಮಂತ್ರಿಗಳು ಮಾಡಿದ್ದಾರೆ, ಅದೇ ರೀತಿ ವಿಧಾನಸಭಾ ಕ್ಷೇತ್ರದ ಶಾಸಕರುಗಳಿಗೆ ಒಂದು ಕೋಟಿ ರೂಪಾಯಿ ಡಿಸ್‌ಕ್ರಿಷನರಿ ಗ್ರಾಂಟನ್ನು ಮಂಜೂರು ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಇದಕ್ಕೆ ಎಲ್ಲಾ ಶಾಸಕರ ಬೆಂಬಲ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಕರ್ನಾಟಕದ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಹತ್ತು ಕೆರೆಗಳನ್ನು ಡೀಸಿಲ್ಟ್ ಮಾಡಬೇಕು. ಕನಿಷ್ಟ ಪಕ್ಷ ನಮ್ಮ ತುಮಕೂರು ಜಿಲ್ಲೆಯಲ್ಲಿ ಇರತಕ್ಕ ಕೆರೆಗಳನ್ನು ಕೂಡಲೇ ಡೀಸಿಲ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಕೆ. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಶೃಂಗೇರಿ ಕ್ಷೇತ್ರದಲ್ಲಿ ಈಗಾಗಲೇ ಕೆ. ಇ. ಬಿ. ಮುಖಾಂತರ ಎಂ. ಯು. ಎಸ್. ಎಸ್. ಪವರ್ ಸ್ಟೇಷನ್ ಕಾರ್ಯ ನಡೆಯುತ್ತಿತ್ತು. ಆದರೆ ಈಗ ಆರು ತಿಂಗಳರ ಗಳಿಂದ ಈ ಕೆಲಸ ನಿಂತುಹೋಗಿದೆ. ಇದಕ್ಕೆ ಕಾರಣ, ಫಾರೆಸ್ಟ್‌ನೊಳಗೆ ಲೈನ್ ತೆಗೆದುಕೊಂಡು ಹೋಗಲು ಕೇಂದ್ರ ಸರ್ಕಾರದಿಂದ ಅನುಮತಿ ಬರಬೇಕು, ಅದು ಬರುವವರೆಗೆ ಕಾಯಬೇಕು ಎಂಬ ಸಬೂಬನ್ನು ಇಲಾಖೆಯವರು ಹೇಳುತ್ತಿದ್ದಾರೆ, ಶೃಂಗೇರಿ ಪ್ರಸಿದ್ಧ ಯಾತ್ರಾ ಸ್ಥಳವಾಗಿರುವುದರಿಂದ ಇಲ್ಲಿಗೆ ರಾಷ್ಟ್ರಾಧ್ಯಕ್ಷರು, ರಾಜ್ಯಪಾಲರು ಮತ್ತು ಪ್ರಧಾನ ಮಂತ್ರಿಗಳೂ ಸಹ ಬಂದು ಹೋಗುವುದರಿಂದ ದಯಮಾಡಿ ಅಲ್ಲಿ ಪವರ್ ಕೊರತೆ ಇರುವುದರಿಂದ ಎಂ. ಯು. ಎಸ್. ಎಸ್. ಪವರ್ ಸ್ಟೇಷನಿನ ಕೆಲಸ ವನ್ನು ಈ ಕೂಡಲೇ ಮುಂದುವರಿಸುವುದು ಅಗತ್ಯವಾಗಿದೆ. ಆದಕ್ಕಾಗಿ ಕೇಂದ್ರದಿಂದ ಅನುಮತಿಯನ್ನು ಕೂಡಲೇ ಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನನ್ನ ಇನ್ನೊಂದು ಬೇಡಿಕೆ ಏನೆಂದರೆ, ಎನ್. ಆರ್. ಪುರಂ ತಾಲ್ಲೂಕಿನಲ್ಲಿ ಏಳು ಲಿಫ್ಟ್ ಇರಿಗೇಷನ್ ಕೆಲಸಗಳು ಅರ್ಧಕ್ಕೆ ನಿಂತು ಹೋಗಿವೆ. ಅದನ್ನು ಸಂಪೂರ್ಣ ಮಾಡಲು ೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಲೆನಾಡು ಪ್ರದೇಶಕ್ಕೆ ಸೇರಿದ ಮೂರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ ಬಹಳ ಇದೆ. ಮಳೆಗಾಲ ದಲ್ಲಿ ೨೫೦ ಇಂಚು ಮಳೆ ಬಂದರೂ ಸಹ ಬೇಸಿಗೆಯಲ್ಲಿ ಸಂಪೂರ್ಣವಾಗಿ ಯಾವ ಭಾಗದಲ್ಲೂ ಕೊಳವೆ ಬಾವಿಗಳಲ್ಲಿ ನೀರು ಇಲ್ಲ, ಎಲ್ಲಾ ಡ್ರೈ ಆಗಿರುತ್ತದೆ. ಈ ಪರಿಸ್ಥಿತಿ ಇರುವುದರಿಂದ ದಯಮಾಡಿ ಕೊಳವೆ ಬಾವಿಗಳನ್ನು ಮಲೆನಾಡು ಪ್ರದೇಶಕ್ಕೆ ಹೆಚ್ಚು ಕೊಡಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು,—ಈಗ ಮುಖ್ಯ ಮಂತ್ರಿಗಳ ಉತ್ತರ.

ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಉತ್ತರ ಪ್ರಾರಂಭಿಸಲಿಲ್ಲ. ಮುಖ್ಯ ಮಂತ್ರಿಗಳು ಉತ್ತರ ಕೊಡಿ ಎಂದು ನಾವು ಧರಣಿ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಏತಕ್ಕೆ? ನಾನು ರೆಡಿಯಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಇದು ಇನ್ನೂ ಎಷ್ಟು ಹೊತ್ತು ನಡೆಯಬೇಕು?

ಮುಖ್ಯಮಂತ್ರಿಗಳ ಉತ್ತರ

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈಗ ನನಗೆ ಬಹಳ ಸಂತೋಷ ಏನೆಂದರೆ, ಸಾಮಾನ್ಯವಾಗಿ ಎಲ್ಲಾ ಮಾನ್ಯ ಸದಸ್ಯರು ಅನೇಕ ರೀತಿಯ ಸ್ಪಷ್ಟೀಕರಣ ಮತ್ತು ಕೆಲವು ವಿಚಾರಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಮುಖ್ಯವಾಗಿ ಬಿಲ್ಲುಗಳ ಬಗ್ಗೆ ಮಾನ್ಯ ಯಡಿಯೂರಪ್ಪನವರು ಕೇಳಿದರು. ಈ ಫೆಬ್ರವರಿಯವರೆಗೆ ಯಾವ ಯಾವ ಬಿಲ್ಲುಗಳು ಬಾಕಿ ಇದ್ದವು ಅವಕ್ಕೆಲ್ಲ ಎಲ್‌ಒಸಿ ಕೊಟ್ಟಿದ್ದೇವೆ. ಅದರಲ್ಲಿ ಇರಿಗೇಷನ್, ಪಿಹೆಚ್‌ಇ, ಕಾಡಾ—ಎಲ್ಲಾ ಸೇರಿ ೧೩೫ ಕೋಟಿ ರೂಪಾಯಿ ಬಾಕಿ ಇತ್ತು, ಅದಕ್ಕೆಲ್ಲ ನಾವು ಎಲ್‌ಒಸಿ. ಕೊಟ್ಟಿದ್ದೇವೆ. ರಸ್ತೆ ಮತ್ತು ಸೇತುವೆಗಳ ಬಗ್ಗೆ ೪೭ ಕೋಟಿ ರೂಪಾಯಿ ಇತ್ತು, ಅದಕ್ಕೆ ಪೂರ್ತಿ ಎಲ್‌ಒಸಿ. ಕೊಟ್ಟಿದ್ದೇವೆ. ನ್ಯಾಷನಲ್ ಹೈವೇಸ್‌ನಲ್ಲಿ ೮ ಕೋಟಿ ರೂಪಾಯಿ ಬಿಲ್ ಬಾಕಿ ಇತ್ತು, ಅದೆಲ್ಲ ಬಿಲ್ ಕೊಟ್ಟಿದ್ದೇವೆ. ಅಂದರೆ ಒಟ್ಟು ೧೯೦ ಕೋಟಿ ರೂಪಾಯಿಗಳವರೆಗೆ ಕಳೆದ ವಾರದಲ್ಲಿ ಎಲ್‌ಒಸಿ. ಯನ್ನು ನಾವು ಕ್ಲಿಯರ್ ಮಾಡಿದ್ದೇವೆ. ಆದುದರಿಂದ ಇನ್ನು ಉಳಿದಂತಹ

ಸುಮಾರು ೫೦ ಕೋಟಿ ರೂಪಾಯಿ ಇರಬಹುದು. ಅದನ್ನು ಸ್ವಲ್ಪ ವೆರಿಫೈ ಮಾಡಬೇಕಾಗುತ್ತದೆ, ಏಕೆಂದರೆ ನಿಮಗೆ ಗೊತ್ತಿದೆ ತಿಂಗಳ ಕೊನೆಯಲ್ಲಿ ಸಾರಾಸಗಟಾಗಿ ಎಲ್ಲಾ ಬಿಲ್ಸ್ ಕೊಟ್ಟರೆ, ಅದು ಜೆನ್ಯೂಯನ್ ಇರಬಹುದು, ನಾನ್ ಜೆನ್ಯೂಯನ್ ಇರಬಹುದು, ಆಫರ್ಸ್ ಇರಬಹುದು ಅನ್‌ಆಫರ್ಸ್ ಇರಬಹುದು. ಆದ್ದರಿಂದ ೫೦ ಕೋಟಿ ರೂಪಾಯಿಗಳ ಬಿಲ್ಲನ್ನು ವೆರಿಫೈ ಮಾಡಿ ಪೇಮೆಂಟ್ ಮಾಡುತ್ತೇವೆ. ಈಗ ಸಮಾಧಾನವಾಯಿತೆ? ಎಲ್ಲ ಬಿಲ್ ಸೆಟಲ್ ಮಾಡತಕ್ಕ ಶಕ್ತಿ ನಮ್ಮ ಸರ್ಕಾರಕ್ಕೆ ಇದೆ ಎಂದು ಸಾಬಿತಾಯಿತೆ? ಉಳಿದ ಬಿಲ್ಸ್ ೫೦ ಕೋಟಿ ರೂಪಾಯಿಯದನ್ನು ವೆರಿಫೈ ಮಾಡುತ್ತಿದ್ದೇವೆ. ಅದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಬೆಳಗಾಂನಲ್ಲಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ ಎಂದು ಹೆಸರಿಡುತ್ತೇವೆ. ಇನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಗಳ ಬಗ್ಗೆ ತಾವು ಪ್ರಶ್ನೆ ಕೇಳಿದ್ದೀರಿ. ಈಗ ಈ ಚುನಾವಣೆಗಳ ತಾರೀಖನ್ನು ನಿಷ್ಕರ್ಷೆ ಮಾಡತಕ್ಕ ಅಧಿಕಾರ ಇರತಕ್ಕದ್ದು ಚುನಾವಣಾ ಕಮಿಷನರ್‌ಗೆ. ಅದನ್ನು ಅವರು ನಿಷ್ಕರ್ಷೆ ಮಾಡಬೇಕು, ಅದು ಅವರಿಗೆ ಬಿಟ್ಟದ್ದು. ನಾವು ವಿಚಾರ ಇಷ್ಟೇ ತಿಳಿಸಿದ್ದೇವೆ. ಇಲ್ಲಿ ಪ್ರಶ್ನೆಯನ್ನು ವಿರೋಧ ಪಕ್ಷದವರು ಎತ್ತಿದ ಮೇಲೆ ನಾನು ನಿಜವಾಗಿ ಯಾವುದಕ್ಕೂ ಅಡ್ಡಿ ಬರುತ್ತಿರಲಿಲ್ಲ. ಕ್ಯಾಲೆಂಡರ್ ಆಫ್ ಈವೆಂಟ್ಸ್ ಇಶ್ಯೂ ಮಾಡಲಿಕ್ಕೆ ನಮ್ಮ ಅಡ್ಡಿ ಇರುತ್ತಿರಲಿಲ್ಲ. ಆದರೆ ಇಲ್ಲಿ ಕೆಲವು ಪ್ರಶ್ನೆಗಳು ಉದ್ಭವವಾದವು. ನ್ಯಾಯಾಂಗ ವಿಚಾರಣೆ ಪ್ರಶ್ನೆ ಬಂತು. ಇದೆಲ್ಲ ಪರಿಸ್ಥಿತಿಯನ್ನು ಮನಗಂಡು There should be proper reasonable gap between the President, Vice–President elections and Grama Panchayat Elections. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣೆಯ ಮಧ್ಯೆ ಸ್ವಲ್ಪ ಅಂತರ ಇದ್ದರೆ ಒಳ್ಳೆಯದೆಂಬ ವಿಚಾರವನ್ನು ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಹೇಳಿದ್ದಾರೆ. ಕೆಎಸ್‌ಆರ್‌ಟಿಸಿ ಯವರು ಏಪ್ರಿಲ್ ೧೮ಕ್ಕೆ ಅನಿರ್ದಿಷ್ಟ ಅವಧಿ ಸತ್ಯಾಗ್ರಹ ಮಾಡುತ್ತೇವೆಂದು ಹೇಳಿದ ಮೇಲೆ ಬಸ್ಸುಗಳು ಇಲ್ಲದೆ ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಈ ವಿಚಾರವನ್ನು ಅವರ ಗಮನಕ್ಕೆ ತಂದಿದ್ದೇವೆ. ಚುನಾವಣೆಯನ್ನು ಮುಂದೂಡಬೇಕೆಂದು ನಾವು ಹೇಳಲಿಲ್ಲ. ಆದರೆ ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆಂದು ಅಷ್ಟನ್ನು ಮಾತ್ರ ಹೇಳಿದ್ದೇವೆ. ಮುಂದೆ ಅವರು ಯಾವಾಗ ಚುನಾವಣೆಯ ತಾರೀಖನ್ನು ನಿಗದಿ ಮಾಡುತ್ತಾರೆಂಬುದು ಚುನಾವಣಾ ಕಮಿಷನರಿಗೆ ಬಿಟ್ಟದ್ದು. ಅದು ಸಂವಿಧಾನಾತ್ಮಕವಾಗಿ ಚುನಾವಣಾ ಕಮಿಷನರ್ ನಿರ್ಣಯ ಮಾಡಬೇಕಾದ ವಿಚಾರ. ಅವರ ಅಧಿಕಾರದ ವಿಷಯದಲ್ಲಿ ನಾನು ಹಸ್ತಕ್ಷೇಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಬಡ್ಡಿ ಮನ್ನಾ ವಿಚಾರ ಕೇಳಿದ್ದೀರಿ. ಇವತ್ತಿನ ದಿವಸ ಜಿಲ್ಲಾ ಸಹಕಾರ ಸಂಸ್ಥೆಗಳು ಚೇತರಿಸುತ್ತಿವೆ. ನಾನು ಒಮ್ಮೆ ಹೇಳಿದ್ದೆ. ಕರ್ನಾಟಕದಲ್ಲಿ ೪೬೫೦ ಕೋಟಿ ರೂಪಾಯಿಗಳು ಕೃಷಿ ಕ್ಷೇತ್ರದಲ್ಲಿ ಇನ್‌ವೆಸ್ಟ್‌ಮೆಂಟ್ ಆಗಬೇಕು. ಅದಕ್ಕೆ ಬದಲು ಕೇವಲ ೪೬೫ ಕೋಟಿ ರೂಪಾಯಿ ಮಾತ್ರ ಎಲ್ಲ ಮಟ್ಟದಲ್ಲಿ ಇನ್‌ವೆಸ್ಟ್‌ಮೆಂಟ್ ಆಗುತ್ತಿದೆ. ಕೃಷಿ ಕ್ಷೇತ್ರಕ್ಕೆ ಬಂಡವಾಳ ಹೋಗದಿದ್ದರೆ ಯಾವ ಉತ್ಪತ್ತಿಯೂ ಬರುವುದಿಲ್ಲ. ರೈತ ಸಮೃದ್ಧಿಯಾಗದಿದ್ದರೆ ಮಾತ್ರ ಉತ್ಪಾದನೆ ಆಗುತ್ತದೆ. ರೈತ ಕೃಷನಾದರೆ, ಬಂಡವಾಳ ಅಷ್ಟೇ ಶಕ್ತಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹೋಗದಿದ್ದರೆ, ಎಲ್ಲಿಯವರೆಗೆ ಹೋಗುವುದಿಲ್ಲ ಅಲ್ಲಿಯವರೆಗೆ ಕರ್ನಾಟಕ ರಾಜ್ಯ ಸಮೃದ್ಧಿಯಾಗುವುದಕ್ಕಾಗುವುದಿಲ್ಲ. ನಾವು ಬಡ್ಡಿ ಮತ್ತೆ ವಿಚಾರದಲ್ಲಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇವತ್ತು ಬಡ್ಡಿ ಮನ್ನಾ ಎಂದು ನಾನು ಘೋಷಣೆ ಮಾಡಿದರೆ ನಾವು ಮುಂದೆ ಎಲ್ಲಾ ಕೋ–ಆಪರೇಟೀವ್ ಮೂವ್‌ಮೆಂಟಿಗೆ ತ್ರಿಶೂಲ ಹಾಕಬೇಕಾಗುತ್ತದೆ. ಅಲ್ಲಿ ಭಜನೆ ಮಾತ್ರ ಮಾಡಬೇಕಾಗುತ್ತದೆ. ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಮಾತನಾಡಬೇಕಾದರೆ ತಾವು ಇರಲಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಕೇಂದ್ರ ಸರ್ಕಾರವನ್ನು ಕೇಳುವವರಿದ್ದೇವೆ. ಹತ್ತು ಸಾವಿರ ರೂಪಾಯಿಗಳವರೆಗೆ ಯಾರು ಕೋ–ಆಪರೇಟಿವ್ ಲೋನ್ ಕೊಡುವುದು ಇದೆ ಅವರಿಗೆ ಸಂಪೂರ್ಣ ಸಾಲ ಮನ್ನಾ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡುತ್ತೇವೆಂದು ತಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದು ಸ್ಪಷ್ಟವಾಗಿದೆ. ಹತ್ತು ಸಾವಿರ ರೂಪಾಯಿಗಳವರೆಗೆ ರೈತರ ಸಾಲ ಮನ್ನಾ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಅತಿವೃಷ್ಟಿ, ನೆರೆಹಾವಳಿ, ಭೂಕಂಪದಿಂದ ರೈತ ತೊಂದರೆಗೆ ಒಳಗಾಗಿದ್ದಾನೆ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದರೆ ಇವತ್ತು ಇನ್ನು ಏನೋ ವೇದಾಂತವನ್ನು ಹೇಳುತ್ತಿದ್ದೀರಿ. ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಚುನಾವಣಾ ಬಗ್ಗೆ ಏನೋ ಕುಂಟು ನೆಪ ಹೇಳುತ್ತಿದ್ದೀರಿ. ರಾಜ್ಯದಲ್ಲಿ ಒಳ್ಳೆಯ ವಾತಾವರಣ ಇದೆ. ಚುನಾವಣಾ ಆಯೋಗ ತಾರೀಖನ್ನು

ಗೊತ್ತು ಮಾಡಿತ್ತು. ಆದರೆ ಚುನಾವಣೆಯನ್ನು ಎದುರಿಸುವುದಕ್ಕೆ ಆಗದೆ ಅಥವಾ ಚುನಾವಣೆಯಾಗಿ ಅಧಿಕಾರ ವಿಕೇಂದ್ರೀಕರಣ ಆಗುವುದರ ಬಗ್ಗೆ ನಂಬಿಕೆ ಇಲ್ಲದೆ, ಗ್ರಾಮೀಣ ಜನರ ಬಗ್ಗೆ ವಿಶ್ವಾಸ ಇಲ್ಲದೆ ಚುನಾವಣೆಯನ್ನು ಮುಂದೂಡುತ್ತಿದ್ದೀರಿ. ರೈತರ ಬಡ್ಡಿ ಮನ್ನಾ ಮಾಡುವುದಕ್ಕೆ ಸಿದ್ಧರಿಲ್ಲ. ಅಂದರೆ ಇದು ರೈತ ವಿರೋಧಿ ನೀತಿಯಾಗಿದೆ. ಗ್ರಾಮೀಣ ಜನರ ಬಗ್ಗೆ ಕಳಕಳಿ ಇಲ್ಲ. ಇಂಥ ಸಂದರ್ಭದಲ್ಲಿ ನಾವು ವಾಕ್ಔಟ್ ಮಾಡುತ್ತಿದ್ದೇವೆ. ಇವತ್ತು ಏನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಮಾಡುವುದಕ್ಕಾಗದೆ ಚುನಾವಣೆ ಮುಂದೂಡುತ್ತಿದ್ದೀರಿ, ಕೊನೆಯ ಬಜೆಟ್ಟಿನಲ್ಲಿ ಆದರೂ ರೈತರ ಋಣ ತೀರಿಸಿ ಬಡ್ಡಿ ಮನ್ನಾ ಮಾಡಿ ಅವರು ಬದುಕುವುದಕ್ಕೆ ಅವಕಾಶ ಮಾಡಿಕೊಡುತ್ತೀರೆಂದು ತಿಳಿದುಕೊಂಡಿದ್ದೆವು. ಆದರೆ ಈಗ ನಿಮ್ಮ ಉತ್ತರ ಕೇಳಿದ ಮೇಲೆ ನಾವು ವಾಕ್ಔಟ್ ಮಾಡುತ್ತೇವೆ.

(ಬಿ ಜೆ ಪಿ ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಧ್ಯಪ್ರದೇಶದ ಸರ್ಕಾರ ರೈತರಿಗೆ ಬಡ್ಡಿ ಮನ್ನಾ ಮಾಡಿ ಮಾಡಿ ಸರ್ಕಾರದಿಂದಲೇ ವಾಕ್ಔಟ್ ಆಯಿತು. ಈಗ ತಾವು ವಾಕ್ಔಟ್ ಮಾಡುತ್ತಿದ್ದೀರಿ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದು ಇಷ್ಟೆ. ನಾನು ಸಭಾತ್ಯಾಗ ಮಾಡುತ್ತಿಲ್ಲ. ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಬೇಕೆಂದು ಇವರು ಒತ್ತಾಯ ಮಾಡುತ್ತಿದ್ದೀರಲ್ಲಾ ಇವರ ಬಗ್ಗೆ ನಾನು ಸ್ವಲ್ಪ ಮಾತ ನಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಹೋದಮೇಲೆ ಮಾತನಾಡುತ್ತೀರಲ್ಲ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ.—ಹೊರಗಡೆ ಹೋಗಿಯೂ ಹೇಳುತ್ತೇನೆ. ಬಡ್ಡಿ, ಸುಸ್ತಿ ಬಡ್ಡಿ ಬಗ್ಗೆ ಮಾತನಾಡುವವರು, ರೈತರ ಬಗ್ಗೆ ಬಹಳ ಕಳಕಳಿ ಇದೆ ಎಂದು ಮಾತನಾಡುವವರು ಯಾರೇ ಆಗಲಿ, ಬರೀ ನಾನು ಬಿಜೆಪಿ ಯವರ ಬಗ್ಗೆ ಅಥವಾ ತಮ್ಮ ಬಗ್ಗೆ ಮಾತನಾಡುತ್ತಿಲ್ಲ. ಬೆಲೆ ಹಾನಿಯಾಗುತ್ತಿದೆಯಲ್ಲ ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಿ, ಬೆಲೆ ರಕ್ಷಣೆಗೆ ಕ್ರಮ ತೆಗೆದು ಕೊಳ್ಳಿ ಎಂದು ಸುಮಾರು ದಿನಗಳಿಂದ ಕೇಳುತ್ತಿದ್ದೇವೆ. ಇಲ್ಲಿಯೂ ಒಂದು ಕಡೆ ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ೧೨೦ ಖರೀದಿ ಕೇಂದ್ರಗಳನ್ನು ತೆಗೆದು ಬೆಲೆ ರಕ್ಷಣೆ ಮಾಡಿದೆವು ಎಂದು ಹೇಳಿದ್ದೀರಿ. ಇದು ಹಸಿ ಸುಳ್ಳು. ಎಲ್ಲಿಯೂ ಒಂದು ಖರೀದಿ ಕೇಂದ್ರವನ್ನು ತೆರೆಯಲಿಲ್ಲ. ರೈತನಿಗೆ ಬೆಲೆ ರಕ್ಷಣೆ ಮಾಡಿಕೊಡುವ ಕೆಲಸ ಮಾಡಲಿಲ್ಲ. ನಮಗೆ ಸಾಲ ರದ್ದು ಬೇಡ, ಎಲ್ಲಿಯವರೆಗೆ ನೀವು ಬೆಲೆ ರಕ್ಷಣೆ ಮಾಡುವುದಿಲ್ಲ ಅಲ್ಲಿಯವರೆಗೆ ನಾವು ಸಾಲಗಾರರಲ್ಲವೆಂದು ಹೇಳಿದ್ದೇವೆ, ಸಾಲ ರದ್ದಾಗಿದೆ ಎಂದು ಹೇಳಿದ್ದೇವೆ. ಸಾಲ ಕೊಡುವುದಿಲ್ಲವೆಂದು ಹೇಳಿದ್ದೇವೆ, ಸಾಲ ಕೊಡುತ್ತಿಲ್ಲ, ಕೊಡುವುದೂ ಇಲ್ಲ. ಆ ಕಾರಣ ನೀವು ಮೊದಲು ಮಾಡಬೇಕಾಗಿರುವುದು, ಒಂದು ಸುಗ್ಗಿಯಿಂದ ಇನ್ನೊಂದು ಸುಗ್ಗಿಯ ವರೆಗೆ ಬೆಲೆ ವ್ಯತ್ಯಾಸವಾಗದೆ ಇರುವಂತೆ ಒಂದು ವ್ಯವಸ್ಥೆಯನ್ನು ತಾವು ಮಾಡುತ್ತೀರಾ ? ಅದನ್ನು ಹೇಳಿ. ನಾನು ಖಾಸಗಿಯಾಗಿ ಮಾತನಾಡಿದಾಗಲೂ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡೆ. ನೀವು ಕೆಟ್ಟುಹೋಗಿರುವ ಒಂದು ಜೀಪನ್ನು ಹರಾಜು ಮಾಡಬೇಕಾದರೂ ಒಂದು ನೀತಿ ಇಟ್ಟು ಕೊಂಡಿದ್ದೀರಿ. ಸರ್ಕಾರಿ ಸವಾಲು ಇರುತ್ತದೆ, ಅದರ ಮೇಲೆ ಮಾತ್ರ ಹರಾಜು ಕೂಗಬೇಕು ಎಂದು. ಅಂಥಾದ್ದು ಒಂದು ಸಣ್ಣ ಕಾನೂನು ಮಾಡುವುದಕ್ಕೆ ಆಗಲಿಲ್ಲವೆಂದರೆ ರೈತನ ಬಗ್ಗೆ ಏನು ಕಣ್ಣೀರು ಸುರಿಸುತ್ತೀರಿ ? ಅದರ ಬಗ್ಗೆ ಬಿಜೆಪಿಯವರು ಮಾತನಾಡುವುದಿಲ್ಲ ಏಕೆಂದರೆ ಅವರದ್ದು ಮಾರ್ವಾಡಿಗಳಿಗೆ ಹುಟ್ಟಿದ ಪಕ್ಷ. ಆದರೆ ನೀವು ಏನು ಎಂದು ನನಗೆ ಅನುಮಾನ ಬರುತ್ತಿದೆ, ನೀವು ಇನ್ನೂ ಕಾನೂನು ಮಾಡದಿದ್ದರೆ ನೀವು ಯಾರು ಎಂದು ನನಗೆ ಅನುಮಾನ ಬರುತ್ತಿದೆ. ಆದುದರಿಂದ ಅನುಮಾನ ಬಾರದೆ ಇರುವ ರೀತಿ ತಾವು ವರ್ತನೆ ಮಾಡಬೇಕು. ಬೆಲೆ ರಕ್ಷಣೆಗೆ ಕಾನೂನು ಮಾಡಿ, ನಮಗೆ ಸಾಲ ಬೇಡ. ವ್ಯವಸಾಯದ ಖರ್ಚು ಏನಿದೆ ಲೆಕ್ಕ ಹಾಕಿ ಬೆಲೆ ಪ್ರಕಟಣೆ ಮಾಡಿ, ಆ ಬೆಲೆಯನ್ನು ನಮಗೆ ಕೊಡಿಸಿ, ನಮಗೆ ಸಾಲ ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಪ್ರಾಚಾರ್ಯರಾದಂಥ ಮಾನ್ಯ ನಂಜುಂಡಸ್ವಾಮಿಯವರ ವಾದವನ್ನು ೧೦೦ ಕ್ಕೆ ೧೦೦ ಪಾಲು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾರ್ವಾಡಿಗಳಿಗೆ ಹುಟ್ಟಿದವರೆಂದೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದೂ ಸೇರಿ. ಈಗ ಮಾನ್ಯ ಪ್ರಾಚಾರ್ಯರು ಹೇಳಿದ ಪ್ರಕಾರ ರೈತರಿಗೆ ಸರಿಯಾದಂಥ ಬೆಲೆಗಳನ್ನು ನಾವು ಎಲ್ಲಿಯವರೆಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ರೈತರ

ವಿಚಾರದಲ್ಲಿ ಮಾತನಾಡತಕ್ಕಂಥ ನೈತಿಕ ಹಕ್ಕು ನಮಗೆ ಯಾರಿಗೂ ಇರುವುದಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಕಳೆದವರ್ಷ ನಾನು ೩೦ ರೂಪಾಯಿಗಳ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದೇನೆ. ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಇಂಥ ಕ್ರಮವನ್ನು ಯಾರೂ ಮಾಡಿರಲಿಲ್ಲ. ನಾನು ತಮ್ಮ ಜೊತೆಯಲ್ಲಿ ಮಾತನಾಡತ್ತೇನೆ. ಬೆಂಬಲ ಬೆಲೆ ಮತ್ತು ಬೆಲೆಯನ್ನು ಹೆಚ್ಚು ಕೊಡ ತಕ್ಕಂಥ ದೃಷ್ಟಿಯಿಂದ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ನಾನಂತೂ ಸೂಚಿಸಿದ್ದೇನೆ. ಅದರ ಬಗ್ಗೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವುದಕ್ಕೆ ಮಾನ್ಯ ವಿರೋಧಪಕ್ಷದ ಅದರಲ್ಲೂ ಮುಖ್ಯವಾಗಿ ಪ್ರಾಚಾರ್ಯರ ಜೊತೆಯಲ್ಲಿ ಮಾತನಾಡಿ ಮುಂದಿನ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಇನ್ನು ಮಹಿಳಾ ಮಂಡಲದ ರಿನ್ಯೂವಲ್ ಫೀಜ್ ಬಗ್ಗೆ ಕೇಳಿದ್ದಾರೆ. ಅದನ್ನು ಎಕ್ಸಮ್‌ಷನ್ ಮಾಡುತ್ತೇನೆ.

ಇನ್ನು ಶ್ರೀರಂಗಪಟ್ಟಣದ ಅಭಿವೃದ್ಧಿಯ ಬಗ್ಗೆ ತಾವು ಹೇಳಿದ್ದೀರಿ. ಮೈಸೂರು ಹುಲಿ ಟಿಪ್ಪುಸುಲ್ತಾನ್ ಅವರ ಬಗ್ಗೆ ನಾವು ಈಗಾಗಲೇ ಒಂದು ಕಮಿಟಿ ಮಾಡಿದ್ದೇವೆ. ಅದರಲ್ಲಿ ಶ್ರೀರಂಗಪಟ್ಟಣದ ಅಭಿವೃದ್ಧಿ ಬಹಳ ಪ್ರಧಾನವಾದ ವಿಚಾರವಾಗುತ್ತದೆ. ಅದಕ್ಕೆ ಅವರಿಗೆ ನಾನು ಹೇಳಿದ್ದೇನೆ, ನೀವು ಒಂದು ಮಾಸ್ಟರ್ ಪ್ಲಾನ್ ಮಾಡಿ ಕೊಡಿ ಎಂದು. ಶ್ರೀರಂಗಪಟ್ಟಣದ್ದೂ ಸಹ ಆ ಮಾಸ್ಟರ್ ಪ್ಲಾನ್‌ನಲ್ಲಿ ಸೇರಿರಬೇಕು. ಆ ಮಾಸ್ಟರ್ ಪ್ಲಾನ್ ಬಂದ ಕೂಡಲೇ ಅದಕ್ಕೆ ಬೇಕಾದಂಥ ಸಂಪನ್ಮೂಲಗಳನ್ನು, ಹಣವನ್ನು ನಾನು ಒದಗಿಸುತ್ತೇನೆ.

ಇನ್ನು ಮೈಸೂರಿನ ಬಗ್ಗೆ ಸನ್ಮಾನ್ಯ ಹರ್ಷಕುಮಾರಗೌಡರವರು ಹೇಳಿದ್ದಾರೆ. ಮೈಸೂರು ನೀರು ಸರಬರಾಜು ಬಗ್ಗೆ ಈಗಾಗಲೇ ಅವರಿಗೆ ಗೊತ್ತಿದೆ. ನಾನು ಹಣವನ್ನು ಕೊಟ್ಟಿದ್ದೇನೆ. ನಾನು ಈಗಾಗಲೇ ಕೊಟ್ಟಿರುವ ಆಶ್ವಾಸನೆಯ ಪ್ರಕಾರ ಬಜೆಟ್‌ನಲ್ಲೂ ಕೂಡ ಹೇಳಿದ್ದೇವೆ. ಮೈಸೂರು ವಾಟರ್ ಸಪ್ಲೈ ಮತ್ತು ಅಂಡರ್‌ಗ್ರೌಂಡ್ ಡ್ರೈನೇಜ್ ಕಾರ್ಯಕ್ರಮಕ್ಕೆ ವಿಶೇಷವಾಗಿ ೧೯೭೪-೭೫ರಲ್ಲಿ ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಕೊಟ್ಟು, ವಾಟರ್ ಸಪ್ಲೈ ಸ್ಕೀಮ್‌ನ ಕೆಲಸವನ್ನು ೧೯೭೫-೭೬ಕ್ಕೆ ಮುಗಿಸುತ್ತೇವೆ. ಅದಕ್ಕೆ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟು ಹಣವನ್ನು ನಾವು ಒದಗಿಸಿ ಅದನ್ನು ಮಾಡುತ್ತೇವೆ.

ಇನ್ನು ಅಗರ್‌ಬತ್ತಿಯ ವಿಚಾರ ತಾವು ಹೇಳಿದ್ದೀರಿ. ಅದನ್ನು ನಾನು ವಿಚಾರ ಮಾಡುತ್ತೇನೆ, ಸನ್ಮಾನ್ಯ ಪಾಟೀಲ್ ನಾಗರಾಜ್‌ರವರು ಮುಖ್ಯವಾಗಿ ನಂದಿನಿ ಬಡಾವಣೆಯ ವಿಚಾರ ವಾಗಿ ಹೇಳಿದ್ದಾರೆ. ನಿವೇಶನದ ಆಧಾರದ ಮೇಲೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ವಿಚಾರ ಮಾಡುತ್ತೇನೆ. ಗಡಿನಾಡ ಅಭಿವೃದ್ಧಿ ಮತ್ತು ಮಲೆನಾಡ ಅಭಿವೃದ್ಧಿಯ ಬಗ್ಗೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಈಗ ಕೊಟ್ಟಿರತಕ್ಕಂಥ ಹಣವನ್ನು ಸರಿಯಾಗಿ ಹೆಚ್. ಕೆ. ಡಿ. ಬಿ. ಅವರು ಮಲೆನಾಡಿನವರು, ಗಡಿನಾಡಿನವರು ಉಪಯೋಗ ಮಾಡಿದ್ದರೆ ಸರಿ, ಇಲ್ಲದಿದ್ದರೆ ತಾವು ಕೊಟ್ಟ ಸೂಚನೆಯನ್ನು ವಿಚಾರ ಮಾಡುತ್ತೇನೆ.

ಇನ್ನು ಚಿನ್ನಪ್ಪರೆಡ್ಡಿಯವರ ವರದಿಯ ಬಗ್ಗೆ ತಮಗೆ ಹೇಳುವುದಾದರೆ, ಹಿಂದೆ ಕ್ಯಾಬಿನೇಟ್ ಸಬ್‌ಕಮಿಟಿ ಸಭೆಯೇ ಆಗುತ್ತಿರಲಿಲ್ಲ. ನಾನು ಮುಖ್ಯ ಮಂತ್ರಿಯಾಗಿ ಅಧಿಕಾರಕ್ಕೆ ಬಂದಮೇಲೆ ಸುಮಾರು ಹನ್ನೊಂದು ಬಾರಿ ಕ್ಯಾಬಿನೆಟ್ ಸಬ್‌ಕಮಿಟಿ ಸಭೆ ಕರೆದಿದ್ದೇನೆ. ಅದರ ವರದಿಯೂ ಕೂಡ ಈಗ ಒಂದು ಅಂತಿಮ ಸ್ವರೂಪಕ್ಕೆ ಬಂದಿದೆ, ಬಹುಶಃ ಇನ್ನೊಂದು ವಾರ, ಹತ್ತು ದಿವಸಗಳೊಳಗಾಗಿ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಕರೆದು ಆ ವರದಿಗೆ ಒಂದು ಅಂತಿಮ ಸ್ವರೂಪವನ್ನು ಕೊಡುತ್ತೇವೆ. ಅದಕ್ಕೆ ಮಂಜೂರಾತಿಯನ್ನು ಮಾಡುತ್ತೇವೆ. ಚಿನ್ನಪ್ಪರೆಡ್ಡಿ ಕಮಿಷನ್ ವರದಿಯ ಅನುಷ್ಠಾನದ ಹಂತ ಕೊನೆಯ ಹಂತಕ್ಕೆ ಬಂದಿದೆ. ಕ್ಯಾಬಿನೆಟ್ ಸಬ್‌ಕಮಿಟಿ ಈಗಾಗಲೇ ಅಂತಿಮ ಸ್ವರೂಪವನ್ನು ಕೊಟ್ಟಿದೆ, ಕ್ಯಾಬಿನೆಟ್‌ಗೆ ಸದ್ಯದಲ್ಲೇ ಅದು ಬರುತ್ತದೆ. ಬಂದ ಕೂಡಲೇ ಅದನ್ನು ಅನುಷ್ಠಾನ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ತಾವು ಒಂದು ಬಹಳ ಪ್ರಮುಖವಾದಂಥ ನನ್ನ ಮನಸ್ಸಿಗೆ ಹಿತವಾದಂಥ ಒಂದು ಸೂಚನೆ ಯನ್ನು ಕೊಟ್ಟಿದ್ದೀರಿ. ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನದ ವಿಚಾರ. ಅದರ ಬಗ್ಗೆ ಕಾನೂನಿನ ಈ ಒಂದು ಪರಿಸ್ಥಿತಿಯಲ್ಲಿ ಯಾವರೀತಿ ಮಾಡಬೇಕೆಂಬ ವಿಚಾರ ಇರುತ್ತದೆ. ಈಗಾಗಲೇ ಸ್ವಲ್ಪ ಸುಧಾರಿಸಿದೆ. ಅನೇಕ ಚಲನಚಿತ್ರ ಮಂಡಲಿಗಳನ್ನು ನಾನು ಘೋಷಣೆ ಮಾಡಿದ್ದೇನೆ. ಮುಖ್ಯವಾಗಿ

ಏನು ಸ್ಲಾಬ್ ಸಿಸ್ಟಮ್ ಘೋಷಣೆ ಮಾಡಿದ್ದೇನೆ ಅದರಿಂದ ಚಲನಚಿತ್ರಗಳಿಗೆ ಪ್ರಯೋಜನವಾಗುತ್ತದೆ. ಹೀಗಿರುವಾಗ ಕನ್ನಡ ಥಿಯೇಟರ್‌ಗಳು ಕನ್ನಡ ಚಿತ್ರಗಳನ್ನು ಖಂಡಿತವಾಗಿಯೂ ಪ್ರದರ್ಶನ ಮಾಡಿಯೇ ಮಾಡುತ್ತವೆ. ಏತಕ್ಕೆಂದರೆ ಕಡಿಮೆ ದರದಲ್ಲಿ ಪ್ರೇಕ್ಷಕರು ನೋಡಲಿಕ್ಕೆ ಆಗುತ್ತದೆ, ನಾನು ಘೋಷಣೆ ಮಾಡಿದಂಥ ರಿಯಾಯಿತಿ ಪ್ರಕಾರ ಕನ್ನಡ ಚಿತ್ರಗಳಿಗೆ ಪ್ರಯೋಜನವಾಗುವುದರಿಂದ ಅವರಿಗೆ ಪ್ರೋತ್ಸಾಹ ಸಿಗುತ್ತದೆ. ಕಾನೂನು ಪ್ರಕಾರ ಕನ್ನಡ ಚಿತ್ರಗಳನ್ನು ಕಡ್ಡಾಯ ಪ್ರದರ್ಶನ ಮಾಡಲಿಕ್ಕೆ ಇಂತಿಷ್ಟು ದಿವಸಗಳೆಂದು ನಿಗದಿ ಮಾಡಲಿಕ್ಕೆ ಸಾಧ್ಯವಿದ್ದರೆ ಆ ಕಾನೂನನ್ನು ತಕ್ಷಣ ತರುತ್ತೇವೆ.

೪.೧೦ ಪಿ. ಎಂ.

ಇನ್ನು ಚಾಮರಾಜನಗರ ಒಳಚರಂಡಿ ಯೋಜನೆ ಬಗ್ಗೆ ಬಜೆಟ್‌ನಲ್ಲಿ ಈಗಾಗಲೇ ಹೇಳಿದ್ದೇನೆ. ತಾವು ನಮಗೆ ಅಭಿನಂದನೆ ಸಲ್ಲಿಸುವ ಬದಲು ಪ್ರಶ್ನೆ ಹಾಕಿದ್ದೀರಿ. ನಾವು ಸೇರಿಸಿಬಿಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಭಾಷಣದಲ್ಲಿ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಭಾಷಣದಲ್ಲಿ ಬರುವುದಿಲ್ಲ. ಅನೆಕ್ಷರ್‌ನಲ್ಲಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಾನು ಓದಿದೆ. ಅದರಲ್ಲಿ......

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಶ್ರೀ ಖಮರುಲ್ ಇಸ್ಲಾಂರವರು........

ಶ್ರೀ ವಾಟಾಳ್ ನಾಗರಾಜ್.—ತಮ್ಮ ಗಮನಕ್ಕೆ ಮತ್ತೊಂದು ವಿಚಾರ ತರುತ್ತೇನೆ. ಈ ವಿಧಾನ ಸಭೆಯ ಒಳಗಡೆ ಒಂದು ರೀತಿಯ ಡಬ್ಬಗಳನ್ನು ಇಟ್ಟಿದ್ದೀರಿ. (ವಿಧಾನಸಭೆ ಹಾಲಿನ ಒಳ ಭಾಗದಲ್ಲಿ ಗುಲಾಬಿ ಕುಂಡಗಳನ್ನು ಜೋಡಿಸಿ ಅದರ ಸುತ್ತಲೂ ತಗಡಿನಿಂದ ಮುಚ್ಚಿರುವುದನ್ನು ತೋರಿಸಿ) ಇದು ಅಷ್ಟು ಚೆನ್ನಾಗಿ ಕಾಣಿಸುತ್ತಿಲ್ಲ. ಇದು ಶೋಭೆ ಅಲ್ಲ. ಸುಂದರವಾಗಿ ಇದಕ್ಕೆ ಹೋಲತಕ್ಕ ರೀತಿಯಲ್ಲಿ ವ್ಯವಸ್ಥೆ ಮಾಡಿ. ಇದರ ಒಂದು ಕಳೆಯೇ ಹೋಗಿದೆ. ಎರಡೂ ಕಡೆ ಸದನಕ್ಕೆ ಕಳೆಯೇ ಹೋಗಿದೆ. ಇದಕ್ಕೆ ಒಂದು ರೂಪ ಕೊಡತಕ್ಕದ್ದನ್ನು ಮಾಡಿ. ನಾವು ನಿನ್ನೆ ಮೊನ್ನೆಯಿಂದ ನೋಡುತ್ತಿದ್ದೇವೆ. ತಮ್ಮ ಗಮನಕ್ಕೆ ತರಬೇಕು ಎಂದು ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಾವು ಆ ಕಡೆ ಈ ಕಡೆ ನೋಡಬೇಕು, ಎಡ ಬಲ ಸ್ವಲ್ಪ ನೋಡಿ. ಇದನ್ನು ತೆಗೆಸುವುದಕ್ಕೆ ತಾವು ವ್ಯವಸ್ಥೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಲ್ಪ ಅಭಾಸವಾಗಿದೆ, ಸರಿಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸರಿಪಡಿಸಿ. ಮತ್ತೊಂದು ತಮ್ಮ ಮೂಲಕ ಕೇಳಿಬಿಡುತ್ತೇನೆ. ವೀರಪ್ಪನ್ ಹಿಡಿಯುವುದು ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಬಗ್ಗೆ ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಸನ್ಮಾನ್ಯ ಖಮರುಲ್ ಇಸ್ಲಾಂ ಅವರು ಭೀಮಾ ಎರಡನೇ ಘಟ್ಟದ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. Remodelling of distribution system to Gulbarga City. ಇದರ ಬಗ್ಗೆ ಗುಲ್ಬರ್ಗ ನಗರಪಾಲಿಕೆಯವರು ನಮಗೆ ಒಂದು ನಿರ್ಣಯ ಕಳುಹಿಸಬೇಕು. ಅವರು ನಿರ್ಣಯ ಕಳುಹಿಸದೆ ನಾವು ಅನುಷ್ಠಾನ ಮಾಡುವುದಕ್ಕಾಗುವುದಿಲ್ಲ. ಮೂರು ದಿವಸಗಳ ಹಿಂದೆ ಗುಲ್ಬರ್ಗಾ ನಗರಪಾಲಿಕೆಯವರು ಒಂದು ನಿರ್ಣಯವನ್ನು ಕೆ. ಯು. ಡಬ್ಲ್ಯು. ಎಸ್. ಎಸ್. ಬೋರ್ಡಿಗೆ ಕಳುಹಿಸಿದ್ದಾರೆ. ಅದು ಬರದೆ ಇದ್ದುದರಿಂದ ಸ್ವಲ್ಪ ತಡವಾಯಿತು. ಅದು ೨೧ ಕೋಟಿ ರೂಪಾಯಿನ ಯೋಜನೆ.

SRI QUMARUL ISLAM.—The financial pattern was 50% of the cost will be borne by the City Corporation, but they have accepted for 30% the 30% cost will be borne by the Gulbarga Development Authority and 20% by the Government. The point is, who has to bear the remaining 20% ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಆಮೇಲೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್.—ಕುಡಿಯುವ ನೀರಿನ ಯೋಜನೆ ಬಹಳ ಸ್ಥಗಿತವಾಗಿದೆ. ಚಾಮರಾಜನಗರದಲ್ಲಿ ಎರಡು ವರ್ಷದ ಹಿಂದೆ ಪ್ರಾರಂಭವಾಗಿದ್ದುದು ಇನ್ನೂ ಪೂರ್ತಿಯಾಗಿಲ್ಲ, ನಾನು ಮೊನ್ನೆ ತಮಗೆ ಮನವಿ ಮಾಡಿಕೊಂಡೆ.

ಛೇರ್ಮನ್.—ಅವರು ಉತ್ತರ ಹೇಳಲಿ. ಯೀಲ್ಡ್ ಆಗುವುದು ಬೇಡ ತಾವು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಮಾನ್ಯ ಯಡಿಯೂರಪ್ಪನವರು ಹಸಿವಾಗುತ್ತದೆ ಎಂದು ವಾಕೌಟ್ ಮಾಡಿದರು. ನಾವು ನೀವು ವಾಕೌಟ್ ಮಾಡುವ ಹಾಗಿಲ್ಲ. ನಮ್ಮ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಊಟ ಮಾಡದೆ ಇಲ್ಲಿ ಕುಳಿತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನನಗೂ ಹಸಿವಿದೆ. ಆದರೂ ನಿಮ್ಮ ಭಾಷಣ ಕೇಳಬೇಕು ಎಂದು ಕುಳಿತಿದ್ದೇನೆ. ನಾನು ಸಭಾತ್ಯಾಗ ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಮಾಡುವುದಿಲ್ಲ, ೨೧ ಕೋಟಿ ರೂಪಾಯಿಗಳ ಯೋಜನೆಯನ್ನು ಆರ್ಥಿಕವಾಗಿ ನಾವು ಒಪ್ಪಿದ್ದೇವೆ. ಮೂರು ದಿವಸಗಳ ಹಿಂದೆ ಅದಕ್ಕೆ ಬೇಕಾದಂಥ ನಿರ್ಣಯ ನಮಗೆ ಬಂದಿದೆ. ಬೋರ್ಡಿನವರು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಾರೆ. ತಕ್ಷಣ ಕ್ಯಾಬಿನೆಟ್‌ಗೆ ತಂದು ಅದನ್ನು ಮಂಜೂರು ಮಾಡುತ್ತೇವೆ. ಇನ್ನು ಎಚ್. ಕೆ. ಡಿ. ಬಿ.ಗೆ ಸಂಬಂಧಪಟ್ಟಹಾಗೆ ರಸ್ತೆ ಬಗ್ಗೆ ತಾವು ಹೇಳಿದ್ದೀರಿ.

ಶ್ರೀ ಖಮರುಲ್ ಇಸ್ಲಾಂ.—ಬೀದರ್—ಹಿರಿಯೂರು ರಸ್ತೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವ ರಸ್ತೆಯನ್ನು ತಾವು ನಮಗೆ ಸೂಚನೆ ಮಾಡಿದ್ದೀರಿ ಆ ರಸ್ತೆಯನ್ನು ಕೂಡ ಈ ಕಾರ್ಯಕ್ರಮದಲ್ಲಿ ತೆಗೆದುಕೊಳ್ಳುತ್ತೇವೆ. ಎಚ್.ಕೆ.ಡಿ.ಬಿ.ಗೆ ಕೊಟ್ಟಿರುವ ಹಣ ಸರಿಯಾಗಿ ಖರ್ಚು ಮಾಡಿ. ತಾವು ಸ್ವಲ್ಪ ಹೊಸ ಗೈಡ್‌ಲೈನ್ ಹಾಕಿ. ಏಕೆಂದರೆ ಈಗ ಮಾಡಿದಂಥ ಕಾರ್ಯಕ್ರಮಗಳನ್ನು ನೋಡಿದರೆ ಹತ್ತು ವರ್ಷಗಳಾದರೂ ಕಾರ್ಯಕ್ರಮಗಳು ಅಂತ್ಯವಾಗುವುದಿಲ್ಲ. ಹೈದರಾಬಾದ್ ಕರ್ನಾಟಕ ಬೋರ್ಡ್ ಏತಕ್ಕೆ ಮಾಡಿದ್ದೇವೆ ಎಂದರೆ ಅಲ್ಲಿ ಮುಖ್ಯವಾದ ಸ್ಥೂಲವಾದ ಅಭಿವೃದ್ಧಿಯಾಗಬೇಕು ಎಂದು. ಅದೊಂದು ಆಯವ್ಯಯಕ್ಕೆ ಅಡಿಷನಾಲಿಟಿ ಎಂದು ತಿಳಿದುಕೊಂಡು ಮಾಡಿದರೆ ಯಾವ ಒಂದು ಪ್ರಗತಿಯೂ ಕೂಡ ಆ ಪ್ರದೇಶದ್ದು ಆಗುವುದಿಲ್ಲ. ದಯಮಾಡಿ ತಾವೆಲ್ಲಾ ಸದಸ್ಯರು ಶಾಸಕರು, ಎಂ.ಪಿ.ಗಳು ಸೇರಿ ಆ ಪ್ರದೇಶ ನಿಜವಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿಯ ಮುಖ್ಯ ಹೆದ್ದಾರಿಗೆ ಸೇರಿಕೊಳ್ಳುವಂತೆ ಮಾಡಿ. ಅದರ ಬಗ್ಗೆ ಏನು ವಿಚಾರ ಮಾಡಬೇಕೋ ಅದರ ಬಗ್ಗೆ ಮರುಚಿಂತನೆಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅದಕ್ಕೆ ಪ್ರತ್ಯೇಕವಾಗಿ ಒಂದುಸಭೆಯನ್ನು ಖಂಡಿತವಾಗಿ ನಾನು ಕರೆಯುತ್ತೇನೆ. ಪುನ: ಆಲೋಚನೆಮಾಡಿ ಏಕೆಂದರೆ ಅನುಕೂಲ ಆಗತಕ್ಕ ಅಭಿವೃದ್ಧಿಯ ಇನ್‌ಫ್ರಾ–ಸ್ಟ್ರಕ್ಚರ್ ಆಗದಿದ್ದರೆ ಕೈಗಾರಿಕೆ ಬರಬೇಕು ಮತ್ತೊಂದು ಬರಬೇಕು ಎಂದರೆ ಆಗುವುದಿಲ್ಲ. ಆದೃಷ್ಟಿಕೋನವನ್ನು ಇಟ್ಟುಕೊಂಡು ತಾವು ಕೆಲಸ ಮಾಡಬೇಕೆಂದು ನನ್ನ ವಿಶೇಷವಾದ ಕಳಕಳಿಯ ವಿನಂತಿ. ಇನ್ನು ಮಾನ್ಯ ಜಯಚಂದ್ರ ಅವರುಹಾಗೂ ಶಿವರಾಮೇಗೌಡರು ಸಣ್ಣಕೈಗಾರಿಕೆಗಳ ಬಗ್ಗೆ ವಿಶೇಷಕಾಳಜಿ ವಹಿಸಿ ಮಾತನಾಡಿದ್ದಾರೆ. ಮತ್ತೆ ಏನುಸಬ್ಸಿಡಿ ಅರಿಯರ್ಸ್ ಇದೆ ಅದನ್ನು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಕೊಡುವಹಾಗೆ ಏರ್ಪಾಟ್ ಮಾಡುತ್ತೇವೆ. ಮತ್ತು ಹೊಸದನ್ನು ಕೆಎಸ್‌ಎಫ್‌ಸಿ ಮುಖಾಂತರ ಕೊಡಿಸಬಹುದು. ಸಣ್ಣ ಕೈಗಾರಿಕೆಗಳ ಸಿಕ್‌ನೆಸ್ ಬಗ್ಗೆ ಏನೂ ಮಾಡಿಲ್ಲ ಎಂದು ಹೇಳಿದ್ದಾರೆ. ಹಾಗು ಇಂತಹದ್ದು ಮಾಡಬೇಕು ಎಂದು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ಇನ್ನು ಮಿನಿ ಸಿಮೆಂಟ್ಸ್ ಬಗ್ಗೆ ಕೆಲವು ಸಮಸ್ಯೆಗಳು ಇವೆ. ಅದನ್ನು ಕೂಡ ಪರಿಹಾರ ಮಾಡುವುದಕ್ಕೆ ನಾವು ಆಲೋಚನೆ ಮಾಡುತ್ತಿದ್ದೇವೆ. ಅದಕ್ಕೆ ಕೂಡ ನಾವು ಒಂದು ಪ್ರತ್ಯೇಕವಾದಂಥ ಸಮಿತಿ ಮಾಡಿ ವಿಚಾರ ಮಾಡುತ್ತೇನೆ ಈ ಮಿನಿ ಸಿಮೆಂಟ್ಸ್ ಬಗ್ಗೆ ನನಗೆ ಆಗಲೇ ಅನುಮಾನ ಇತ್ತು. ಟೆಕ್ನಾಲಜಿ ವೈಸ್ ಮಿನಿ ಸಿಮೆಂಟ್ಸ್ ವಯಬಲ್ ಆಗುವುದಿಲ್ಲ ಎಂದು ಮಿನಿ ಸಿಮೆಂಟ್ಸ್ ಬಂದಾಗಲೇ ನನಗೆ ಅನುಮಾನ ಬಂದಿತ್ತು. ಆ ಅನುಮಾನ ಈಗ ಸ್ಥಿರ ಆಗಿದೆ. ಆದರೂ ಕೂಡ ಏನೂ ಮಾಡುವುದಕ್ಕೆ ಬರುತ್ತದೆಂದು ವಿಚಾರ ಮಾಡಲಿಕ್ಕೆ ಒಂದು ಸಮಿತಿಯನ್ನು ಮಾಡತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಿವರಾಮೇಗೌಡರು ಎಲೆಕ್ಟ್ರಿಕ್ ಓಲ್ಟೇಜ್ ಬಗ್ಗೆ ಹೇಳಿದ್ದಾರೆ. ವೋಲ್ಟೇಜ್ ವಿಷಯ ಆಯಾ ಜಿಲ್ಲೆಯನ್ನು ಹೊಂದಿ ಕೊಂಡಿರುತ್ತದೆ. ವೋಲ್ಟೇಜ್ ಇಂಪ್ರೂವ್‌ಮೆಂಟ್, ಸಿಸ್ಟಮ್ ಇಂಪ್ರೂವ್‌ಮೆಂಟ್ ಬಗ್ಗೆ ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಇಲ್ಲದೇ ಇರತಕ್ಕ ಸುಮಾರು ೮೦೦ ಕೋಟಿ ರೂಪಾಯಿ ಯೋಜನೆಯನ್ನು ನಾವು ೧೯೮೩–೮೪ ರಿಂದ ೧೯೮೪–೮೫ ರವರೆಗೆ ಈ ವರ್ಷದಲ್ಲಿ ಅನುಷ್ಠಾನ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಕೈಗೊಂಡಿದೆ. ನನಗೆ ತಿಳಿದ ಪ್ರಕಾರ ಒಂದೊಂದು ಜಿಲ್ಲೆಯಲ್ಲಿ ಸುಮಾರು ೩೫ ಕೋಟಿ ರೂಪಾಯಿಯವರೆಗೆ ಯೋಜನೆಯನ್ನು ನಾವು ವೋಲ್ಟೇಜ್ ಇಂಪ್ರೂವ್‌ಮೆಂಟ್ ಹಾಗೂ ಇನ್ನಿತರ ಕಾರ್ಯದ ಬಗ್ಗೆ ಉಪಯೋಗಿಸುತ್ತೇವೆ. ಬರೀ ಇವತ್ತು ವಿದ್ಯುತ್ ಉತ್ಪಾದನೆ ಮಾಡಿದರೆ

ಸಾಲದು. ಒಳ್ಳೆಯ ವಿತರಣೆ ಆಗಬೇಕು. ಒಳ್ಳೆಯ ಗುಣಮಟ್ಟದ ವಿದ್ಯುತ್ತನ್ನು ರೈತರಿಗೆ ಹಾಗೂ ಕೈಗಾರಿಕೆಗಳಿಗೆ ಕೊಡಬೇಕು. ಇಲ್ಲದಿದ್ದರೆ ಯಾವುದೇ ಉದ್ಯಮಿಗಳು ಕೂಡ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳನ್ನು ಮಾಡುವುದಕ್ಕೆ ಮುಂದೆ ಬರವುದಿಲ್ಲ. ಈ ವೋಲ್ಟೇಜ್ ಇಂಪ್ರೂವ್‌ಮೆಂಟ್ ಆದಾಗ ಎಲ್ಲಾ ಸಣ್ಣ ಕೈಗಾರಿಕೆಗಳಿಗೆ, ದೊಡ್ಡ ಕೈಗಾರಿಕೆಗಳಿಗೆ ಒಳ್ಳೆಯ ವಿದ್ಯುತ್ ದೊರೆಯುತ್ತದೆ. ರೈತರಿಗೆ ಒಳ್ಳೆಯ ಗುಣಮಟ್ಟದ ವಿದ್ಯುತ್ ಸಿಗುತ್ತದೆ. ಅದಕ್ಕಾಗಿ ನಾವು ವಿಶೇಷ ಪ್ರಾಮುಖ್ಯತೆ ಕೊಡುತ್ತಿದ್ದೇವೆ ಇವತ್ತು ಸುಮಾರು ೮೦೦ ಕೋಟಿ ಅಂದಾಜಿನ ಪ್ರಾಜೆಕ್ಟ್ ಇವತ್ತು ಇಂಪ್ಲಿಮೆಂಟ್ ಆಗುತ್ತಾ ಇದೆ. ಬಹಳ ಕಡೆ ವೋಲ್ಟೇಜ್ ಇಂಪ್ರೂವ್ ಆಗಿದೆ. ಬೆಂಗಳೂರಿನಲ್ಲಿ ಇಂಪ್ರೂವ್ ಆಗಿತ್ತು, ಆದರೆ ರಾಮಗೊಂಡಮ್‌ನಲ್ಲಿ ನಮಗೆ ಬರಬೇಕಾದ ಸರಬರಾಜು ಸ್ಥಗಿತ ಆಯಿತು. ನಮಗೆ ಬರಬೇಕಾದ ಕೋಟಾವನ್ನು ಆಂಧ್ರದವರು ಸ್ವಲ್ಪ ಓವರ್ ಡ್ರಾ ಮಾಡಿದ್ದರಿಂದ ನಮಗೆ ಸ್ವಲ್ಪ ತೊಂದರೆ ಆಯಿತು. ಆ ನಂತರ ಸನ್ಮಾನ್ಯ ವಿಜಯಭಾಸ್ಕರ ರೆಡ್ಡಿಯವರ ಜೊತೆ ಮಾತನಾಡಿ, ದಯವಿಟ್ಟು ಓವರ್ ಡ್ರಾ ಮಾಡಬೇಡಿ, ನಮ್ಮ ಪಾಲಿನ ವಿದ್ಯುತ್‌ಗೆ ತೊಂದರೆ ಮಾಡಬೇಡಿ ಎಂದು ವಿನಂತಿ ಮಾಡಿಕೊಂಡಮೇಲೆ ಈಗ ವೋಲ್ಟೇಜ್ ಸಿಸ್ಟಂ ಈ ಭಾಗದಲ್ಲಿ ಸ್ವಲ್ಪ ಸುಧಾರಣೆ ಆಗಿದೆ. ಇನ್ನು ಡಿಪಿಎಪಿ ಬಗ್ಗೆ ಮಾತನಾಡಿದ್ದೀರಿ. ಬಹಳ ಒಳ್ಳೆಯ ಸೂಚನೆ ಇದೆ. ಡಿಪಿಎಪಿ ಮತ್ತು ಡ್ರೈ ಲ್ಯಾಂಡ್ ಡೆವೆಲಪ್‌ಮೆಂಟ್ ಇದೆಲ್ಲ ಒಟ್ಟು ಸೇರಿಸಿ ಮೈದಾನ ಅಭಿವೃದ್ಧಿ ಪ್ರಾಧಿಕಾರ ಎಂದು ನಾವು ಮಾಡುತ್ತಿದ್ದೇವೆ. ಅದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಹಳ್ಳಿಗಳಲ್ಲಿ ಇವತ್ತು ೪೪೦ ವೋಲ್ಟೇಜ್ ವಿದ್ಯುತ್ ಸತತವಾಗಿ ಸಿಗಬೇಕಾದರೆ ಮೊದಲು ೬ ಗಂಟೆಗಳ ಲೋಡ್ ಶೆಡ್ಡಿಂಗ್ ಪದ್ಧತಿ ಏನು ಇತ್ತು ಅದನ್ನು ಮತ್ತೆ ತಂದು ಮಾಡಿದರೆ ಪ್ರಯೋಜನವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಾಚಾರ್ಯರಾದ ನಂಜುಂಡಸ್ವಾಮಿಯವರು ಮಾತನಾಡಿ ಆಯವ್ಯಯದ ಪುಟ ೨೦ ಹಾಗೂ ೨೨ರಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಬರೀ ೨೧೨ ಕೋಟಿ ರೂಪಾಯಿ ಕೊಟ್ಟಿದ್ದು ಅಷ್ಟು ಕೊಟ್ಟರೆ ಹೇಗೆ ಎಂದು ಹೇಳಿದ್ದಾರೆ. ಪ್ರಶ್ನೆ ಅದು ಅಲ್ಲ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ.—ತಾವು ತಪ್ಪು ತಿಳಿದುಕೊಂಡಿದ್ದೀರಿ. ಏಕೆಂದರೆ, ನಾನು ಹೇಳುವಾಗ ತಮಗೆ ಯಾರೋ ಮಾತನಾಡಿಸುತ್ತಿದ್ದರು. ನಾನು ಮಧ್ಯೆ ಪ್ರಶ್ನೆ ಕೇಳಿದೆ. ಕಳೆದ ವಾರ್ಷಿಕ ಯೋಜನೆಯಲ್ಲಿ ತಾವು ಕೈಗಾರಿಕೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ಕೇಳಿದೆ. ಅದಕ್ಕೆ ತಾವು ೨೧೨.೪೭ ಕೋಟಿ ರೂಪಾಯಿ ಎಂದು ಹೇಳಿದಿರಿ. ಆದರೆ ಆಯವ್ಯಯದ ೨೨ನೇ ಪುಟದಲ್ಲಿ "ಮುಂದಿನ ೩-೪ ವರ್ಷಗಳಲ್ಲಿ ಯೋಜನೆಗಳಲ್ಲಿ ಸುಮಾರು ೨೬,೨೦೦ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಆಗುವುದೆಂದು ನಾನು ನಿರೀಕ್ಷಿಸಿದ್ದೇನೆ" ಎಂದು ಹೇಳಿದ್ದೀರಿ. ನಾನು ಕೇಳಿದ್ದುದು, that works out at 120 years of annual plan outlay for industry. ೧೨೦ ವರ್ಷಗಳಿಗೆ ಸಮ ಆಗುತ್ತದೆ. ಅದಕ್ಕೆ ನಾನು ಏನು ಕೇಳಿದೆ ಎಂದರೆ ಈ ಹಣ ಕರ್ನಾಟಕದ ಒಳಕ್ಕೆ ಎಲ್ಲಿಂದ ಬರುತ್ತದೆ? ಏತಕ್ಕೋಸ್ಕರ ಬರುತ್ತಾ ಇದೆ? ಕರ್ನಾಟಕವಲ್ಲಿ ಯಾವ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಳ್ಳುತ್ತದೆ? ಏನನ್ನು ಉತ್ಪಾದನೆ ಮಾಡುತ್ತದೆ? ಉತ್ಪಾದನೆ ಆದ ವಸ್ತು ಇಲ್ಲಿ ಬಳಕೆ ಆಗುತ್ತದೆಯೋ ಅಥವಾ ಬೇರೆ ದೇಶದಲ್ಲಿ ಬಳಕೆ ಆಗುತ್ತದೆಯೋ? ಏಕೆಂದರೆ ಇದು ಎಲ್ಲರಿಗೂ ಬೇಕಾಗಿದೆ. ನಮ್ಮ ನೈಸರ್ಗಿಕ ಸಂಪತ್ತು ಏನು ಆಗುತ್ತಾ ಇದೆ? ಏಕೆಂದರೆ, ಯಾವ ಪ್ರಮಾಣದ ಬಂಡವಾಳ ಎಂದರೆ Rs. 26,200 Crores which is equvalent to your 120 years of Annual Plan Outlay for industries. ಯಾವ ಮಟ್ಟದಲ್ಲಿ ನಮ್ಮ ನೈಸರ್ಗಿಕ ಸಂಪತ್ತನ್ನು ಯಾರು ಉಪಯೋಗಿಸುತ್ತಾರೆ? ಅದು ಏನು ಆಗುತ್ತಾ ಇದೆ? ಇನ್ನು, ಮತ್ತೊಂದು ಪ್ರಶ್ನೆ, ನಮ್ಮ ಸಂಸದೀಯ ಔಚಿತ್ಯತೆಯ ಬಗ್ಗೆ. ೨೧೨ ಕೋಟಿ ರೂಪಾಯಿ ಏನು ಯೋಜನಾ ಹಣ ಇದೆ ಅದು ಯಾವ ರೀತಿ ಖರ್ಚು ವೆಚ್ಚ ಆಗುತ್ತದೆಂದು ನಾವು ಚರ್ಚೆ ಮಾಡುತ್ತೇವೆ. ಆದರೆ ೨೬,೨೦೦ ಕೋಟಿ ರೂಪಾಯಿ ಖರ್ಚು ವೆಚ್ಚದ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಾ ಇಲ್ಲ. ತಾವು ನಮ್ಮ ಗಮನಕ್ಕೂ ತರುತ್ತಾ ಇಲ್ಲ. ಇದು ಸರಿಯೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ೨೬ ಸಾವಿರ ಕೋಟಿ ಕೂಡಾ ಸರ್ಕಾರ ಬಂಡವಾಳ ಹಾಕುತ್ತದೆ ಎಂದು ಹೇಳುತ್ತಾ ಇಲ್ಲ. ಖಾಸಗೀ ಬಂಡವಾಳ...

PROF II M.D. NANJUNDASWAMY.—Whatever it is, private capital or our capital. But we want to know what the capital is

doing inside Karnataka ? ನಮ್ಮ ಮೇಲೆ ಏನು ಅತ್ಯಾಚಾರ ಮಾಡುತ್ತಿದೆ ಎಂದು ನಮಗೆ ಗೊತ್ತಾಗಬೇಕೋ ಬೇಡವೋ ? ಅದು ಅತ್ಯಾಚಾರವೇ, ಉಪಚಾರವೇ ಎಂಬುದು ಗೊತ್ತಾಗ ಬೇಡವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಖಾಸಗೀ ಬಂಡವಾಳದ ಹೂಡಿಕೆಗೆ ಇಲ್ಲಿ ಒಳ್ಳೆಯ ವಾತಾವರಣ ಇದೆ. ಈ ಖಾಸಗೀ ಬಂಡವಾಳವನ್ನು ಹೂಡಿ ನಮ್ಮ ಅಭಿಪ್ರಾಯದ ಪ್ರಕಾರ ನಾನು ಈಗಾಗಲೇ ಹೇಳಿದ್ದೇನೆ. ಇನ್ನು ೬ ವರ್ಷಗಳಲ್ಲಿ ಸುಮಾರು ೨ ಕೋಟಿ ಹೊಸ ಉದ್ಯೋಗಗಳನ್ನು ಕರ್ನಾಟಕ ರಾಜ್ಯದ ಜನರಿಗೆ ಕೊಡತಕ್ಕ ಒಂದು ವ್ಯವಸ್ಥೆ, ಅಪಾರವಾದಂತಹ ಉದ್ಯೋಗದ ಅವಕಾಶ ನಮ್ಮ ಯುವಕರಿಗೆ ಇದರಿಂದ ಸಿಗುತ್ತದೆ. ಉತ್ಪಾದನಾ ಕ್ಷೇತ್ರ ಜಾಸ್ತಿಯಾಗುತ್ತದೆ. ಸಂವೃದ್ಧಿ ಇದರಿಂದ ಆಗುತ್ತದೆ. ನಮ್ಮ ಕೃಷಿ ಅಭಿವೃದ್ಧಿ ಕೂಡಾ ಇದರಿಂದ ಹೆಚ್ಚು ಆಗುತ್ತದೆ,

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಒಂದೇ ಒಂದು ವಿಚಾರ ನಾನು ಹೇಳಿ ಹೋಗುತ್ತೇನೆ. ಒಂದು ನಿಮಿಷ ಕೇಳಿ......

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಇರಬೇಕು.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಇದೇ ನಮಗೆ ಬೇಕಾಗಿದ್ದುದು ಎಂತಹ ಬಂಡವಾಳ ಬರುತ್ತಾ ಇದೆ. ಯಾರು ತರುತ್ತಾ ಇದ್ದಾರೆ. ಎಂತಹ ಟೆಕ್ನಾಲಜಿ ಬರುತ್ತಾ ಇದೆ. ಆದ್ದರಿಂದ ಉದ್ಯೋಗ ಸೃಷ್ಟಿ ಆಗುತ್ತದೆಯೋ, ನಿರುದ್ಯೋಗ ಸೃಷ್ಟಿ ಆಗುತ್ತದೆಯೋ ಇದೆಲ್ಲಾ ನಮಗೆ ಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೊಸ ಉದ್ಯೋಗಗಳು ೬ ವರ್ಷದವರೆಗೆ ಸೃಷ್ಟಿ ಆಗುತ್ತದೆ. ನಮ್ಮ ಯುವಕರಿಗೆ ಈ ಉದ್ಯೋಗಗಳು ಬರುವುದು ಬೇಡ ಎನ್ನುವುದು ನಿಮ್ಮ ವಾದ ಆದರೆ ಅದಕ್ಕೆ ಇಲ್ಲಿ ಯಾರೂ ಕೂಡ ಒಪ್ಪುವುದಿಲ್ಲ. ಕರ್ನಾಟಕ ರಾಜ್ಯದ ಜನ ಕೂಡ ಒಪ್ಪುವುದಿಲ್ಲ. ಕೈಗಾರಿಕೆಗೆ ಅನುಕೂಲವಾದಂತಹ ಸುಭದ್ರ ವಾತಾವರಣವನ್ನು ಯಾರೂ ಕೂಡ ನಿಲ್ಲಿಸಲಿಕ್ಕೆ ಕರ್ನಾಟಕ ರಾಜ್ಯ ಸರ್ಕಾರ, ನಾವು ಬಿಡುವುದಿಲ್ಲ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಒಪ್ಪುತ್ತಾರೋ ಬಿಡುತ್ತಾರೋ ಅದು ಬೇರೆ ವಿಚಾರ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಕೈಗಾರಿಕೆಯ ಅಭಿವೃದ್ಧಿ ಬೇಡ ಎಂದು ಹೇಳತಕ್ಕ ವಾದಕ್ಕೆ......

ಶ್ರೀ ವಾಟಾಳ್ ನಾಗರಾಜ್.—ಒಂದು ಕಡೆ ಕೈಗಾರಿಕಾ ಅಭಿವೃದ್ಧಿ. ಮತ್ತೊಂದು ಕಡೆ ನಿಸರ್ಗ ನಾಶವಾಗುತ್ತದೆ. ಆದರ ಕಡೆ ತಾವು ಗಮನವನ್ನು ಕೊಡಬೇಕು. ಈಗಾಗಲೇ ನಿಸರ್ಗ ಲೂಟಿ ಆಗಿದೆ ಮತ್ತೊಂದು ಕಡೆ ಈ ರೀತಿ ಕೊಟ್ಟರೆ ಸರ್ವನಾಶವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪರಿಸರದ ರಕ್ಷಣೆಯನ್ನು ಉಳಿಸಿಕೊಂಡೇ ಈ ಕೈಗಾರಿಕಾ ಅಭಿವೃದ್ಧಿಯನ್ನು ನಾವು ಮಾಡುತ್ತೇವೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ನಿಮಗೆ ವಿವರ ಬೇಕೋ ಬೇಡವೋ ?

ಶ್ರೀ ವಾಟಾಳ್ ನಾಗರಾಜ್.—ಈ ಕಂಪನಿಗಳಿಂದ ಕರ್ನಾಟಕಕ್ಕೆ ಅಪಾಯ ಇದೆಯೋ ಹೊರತು ತಾವು ಇದನ್ನು ಯಾವ ರೀತಿ ಮಾಡುತ್ತೀರೋ ! ಈಗಾಗಲೇ ಪರಿಸರ ನಾಶ ಆಗಿದೆ. ನಿಜವಾಗಿಯೂ ಅಪಾಯ ಇದೆ ಎನ್ನುವ ಮಾತನ್ನು ಹೇಳುತ್ತೇನೆ.

(ಗೊಂದಲ)

ಚೇರ್ಮನ್.—ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬೇಡಿಕೆಗಳ ಚರ್ಚೆ ಬರುವಾಗ, ಇವಕ್ಕೆ ಸರಿಯಾದಂಥ ವಿವರ ಗಳನ್ನು ಕೊಡುತ್ತೇವೆ. ಕಮಿಟಿ ಸಿಸ್ಟಂ ಇದೆ. ಆಗ ತಾವು ಇದರ ಬಗ್ಗೆ ಚರ್ಚೆ ಮಾಡಬಹುದು. ಇನ್ನು ಸನ್ಮಾನ್ಯ ಕರಿಯಣ್ಣನವರು ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ಅದೇನೆಂದರೆ,

ಸ್ಪೆಷಲ್ ಕಾಂಪೋನೆಂಟ್ ಪ್ಲಾನ್ ವಿಚಾರ. ನನ್ನ ಅಧ್ಯಕ್ಷತೆಯಲ್ಲೇ ಅದರ ಬಗ್ಗೆ ವಿಶೇಷವಾಗಿ ಚರ್ಚೆ ಮಾಡುತ್ತೇವೆ. ಆದಷ್ಟು ಜಾಗ್ರತೆ ನಾನು ಪರಿಶಿಷ್ಟ ವರ್ಗ ಮತ್ತು ಜನಾಂಗಕ್ಕೆ ಸೇರಿದಂಥ ಸನ್ಮಾನ್ಯ ಸದಸ್ಯರ ಸಭೆಯನ್ನು ಕರೆದು, ಈ ಬಗ್ಗೆ ಸರಿಯಾದಂಥ ಮಾಹಿತಿ ಮತ್ತು ತಮ್ಮ ಸಲಹೆಯನ್ನು ಪ್ರತ್ಯೇಕವಾಗಿ ನಾನು ಕೇಳುತ್ತೇನೆ. ತೋಟಿ ತಳವಾರರ ಬಗ್ಗೆ ಮಾಶಾಸನ ಜಾಸ್ತಿ ಮಾಡಬೇಕೆಂದು ಕೇಳಿದ್ದೀರಿ. ಅದು ಸರ್ಕಾರದ ಗಮನದಲ್ಲಿದೆ. ಆದಷ್ಟು ಜಾಗ್ರತೆ ಇದರ ಬಗ್ಗೆ, ಹೆಚ್ಚು ಮಾಡಲಿಕ್ಕೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಲಿಫ್ಟ್ ಇರಿಗೇಷನನ್ನು ಎಸ್.ಸಿ/ಎಸ್.ಟಿ. ಕಾರ್ಪೋರೇಷನ್ ಮುಖಾಂತರ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಇದು ಒಳ್ಳೆಯ ಸಲಹೆ. ಅದನ್ನು ನಾವು ವಿಶೇಷ ಕಾರ್ಯಕ್ರಮ ಹಾಕಿ ತೆಗೆದುಕೊಳ್ಳುತ್ತೇವೆ. ಇನ್ನು ಬಗರ್ ಹುಕುಂ ಬಗ್ಗೆ ಡಿ.ಸಿ. ಯವರಿಗೆ ಪವರ್ ಇತ್ತು. ಅದನ್ನು ಅಸಿಸ್ಟೆಂಟ್ ಕಮೀಷನರ್ ಅವರಿಗೆ ಕೊಟ್ಟಿದ್ದಾರೆ. ಇನ್ನು ಅಸಿಸ್ಟೆಂಟ್ ಕಮೀಷನರ್‌ರವರಿಂದ, ತಹಶೀಲ್ದಾರ್‌ರವರಿಗೆ ಕೊಡಬೇಕೆಂದು ಸರ್ಕಾರದ ಆಲೋಚನೆ ಇದೆ. ಅದನ್ನು ಮಾಡುತ್ತೇವೆ. ಇನ್ನು ಸನ್ಮಾನ್ಯ ಕುನ್ನೂರ್‌ರವರು ಮುಖ್ಯವಾಗಿ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಬೆಂಚ್ ಆಗಬೇಕೆಂಬ ವಿಚಾರವನ್ನು ಎತ್ತಿದ್ದಾರೆ. ಇದು ಬಹಳ ನ್ಯಾಯವಾದಂಥ ಬೇಡಿಕೆ ಇದೆ. ನಾನು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡುತ್ತೇನೆ. ತಮಗೆ ಗೊತ್ತಿದೆ. ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯ, ಇದರ ಬಗ್ಗೆ ಒಂದು ನಿರ್ಣಯ ಮಾಡಬೇಕಾಗುತ್ತದೆ. ಅದನ್ನು ಕೇಂದ್ರ ಸರ್ಕಾರಕ್ಕೆ ಮತ್ತು ಸುಪ್ರೀಂಕೋರ್ಟಿಗೆ ಕಳುಹಿಸಬೇಕಾಗುತ್ತದೆ. ನಾನು ಅದರ ಬಗ್ಗೆ ಈಗಾಗಲೇ ಮಾತನಾಡಿದ್ದೇನೆ, ಮುಂದೂ ಕೂಡ ಒತ್ತಾಯ ಮಾಡುತ್ತೇನೆ. ಆದಷ್ಟು ಜಾಗ್ರತೆ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಬೆಂಚ್ ಆಗುವ ರೀತಿಯಲ್ಲಿ ಎಲ್ಲಾ ರೀತಿಯ ಒತ್ತಾಯ ಮತ್ತು ಪ್ರಯತ್ನವನ್ನು ಕೇಂದ್ರ ಸರ್ಕಾರಕ್ಕೆ ಮತ್ತು ಸುಪ್ರೀಂಕೋರ್ಟಿಗೆ ಹೇಳುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಅಪೇಕ್ಷೆಪಡುತ್ತಿದ್ದೇನೆ. ಸನ್ಮಾನ್ಯ ಇದಿನಬ್ಬನವರು ಟಿಪ್ಪುಸುಲ್ತಾನ್ ಬಗ್ಗೆ ಹೇಳಿದರು. ನಾವು ಈಗಾಗಲೇ ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ. ನಾನು ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಅವರು ಒಂದು ಮಾಸ್ಟರ್ ಪ್ಲಾನ್ ಮಾಡಬೇಕೆಂದು ಕೂಡ ಹೇಳಿದೆ. ಮತ್ತೆ ಅಬ್ಬಕ್ಕದೇವಿ ಬಗ್ಗೆ ತಾವು ವಿಚಾರಿಸಿದಿರಿ. ಅಬ್ಬಕ್ಕದೇವಿ ಪೋರ್ಚುಗೀಸರ ವಿರುದ್ಧ ಹೋರಾಟ ಮಾಡಿದಂಥ ಧೀರ ಮಹಿಳೆ. ಇದರ ಬಗ್ಗೆ ಸೂಕ್ತವಾದಂಥ ಸ್ಮಾರಕವನ್ನು ಸ್ಥಾಪನೆ ಮಾಡಲಿಕ್ಕೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಹಿರಿಯ ಶಾಸಕರಾದಂಥ ಶ್ರೀ ಸಿ. ವಿ. ವೆಂಕಟರಾಯಪ್ಪ ನವರು ಬಾಗೇಪಲ್ಲಿ ಬಗ್ಗೆ ಹೇಳಿದ್ದುದು ಸರಿ. ಬಾಗೆಪಲ್ಲಿ, ಪಾವಗಡ, ಚಿಂಚೋಳಿ ಮತ್ತು ರಾಯಚೂರಿನ ಕೆಲವು ಭಾಗಗಳಲ್ಲಿ, ಗಡಿ ನಾಡಿನಲ್ಲಿ ಪರಿಸ್ಥಿತಿ ಏನಿದೆ ಅದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಏಕೆಂದರೆ ಆಂಧ್ರದ ನಮ್ಮ ಭಾಗದಲ್ಲಿ ಪಿ.ಡಬ್ಲ್ಯು.ಜಿ. ಮತ್ತು ನಕ್ಸಲೈಟ್–ಇಂತಹ ಒಂದು ಹಾವಳಿಗಳನ್ನು ತಡೆದು ನಿಲ್ಲಿಸಬೇಕು. ಇದಕ್ಕೆ ಆರ್ಥಿಕವಾಗಿ, ಸಾಮಾಜಿಕವಾಗಿಯೂ ಕೂಡ ಕೃಷಿ ಕಾರ್ಮಿಕರಿದ್ದಾರೆ ಮತ್ತು ನಮ್ಮ ಬಡಬಗ್ಗರು ಯಾರಿದ್ದಾರೆ. ಅವರಿಗೆ ಕೈತುಂಬ ಕೆಲಸವನ್ನು ಕೊಡಬೇಕು, ವಿಶೇಷವಾದಂಥ ಪ್ರಜಾವೇದಿಕೆಯನ್ನು ಅಲ್ಲಿ ಪ್ರಾರಂಭ ಮಾಡಬೇಕು. ಇದರ ಬಗ್ಗೆ ನಾವು ವಿಶೇಷವಾದಂಥ ಆರ್ಥಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ರಚನೆ ಮಾಡಿ, ಜಾಗೃತ ಸಮಾಜವನ್ನು ಸೃಷ್ಟಿ ಮಾಡಿ ಪ್ರಜಾಪ್ರಭುತ್ವದ ವಿರದ್ಧವಾದಂಥ, ಅಥವಾ ಪ್ರಜಾಪ್ರಭುತ್ವವಾದದ ವಿರುದ್ಧ ಮತ್ತು ಪ್ರಜಾಪ್ರಭುತ್ವ ತತ್ವಗಳ ಒಂದು ಶಿಥಿಲತೆಯನ್ನೇ ಕಾಯುದ್ಧ ಕೊಳ್ಳತಕ್ಕಂಥ ಆ ದುಷ್ಟ ಶಕ್ತಿಗಳ ವಿರುದ್ಧ, ಜನರನ್ನು ಸಿದ್ಧ ಮಾಡಲಿಕ್ಕೆ ಅವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಕೂಡ ಸಿದ್ಧಪಡಿಸಲಿಕ್ಕೆ, ಬೇರೆ ಬೇರೆ ರೀತಿಯಲ್ಲಿ ಪೊಳ್ಳು ಸಿದ್ಧಾಂತಗಳನ್ನು ಅವರ ಮೇಲೆ ಹೇರತಕ್ಕ ಪರಿಸ್ಥಿತಿಯನ್ನು ನಿಲ್ಲಿಸಲಿಕ್ಕೆ ಒಂದು ವಿಶೇಷವಾದಂಥ ಸಮಗ್ರ ಯೋಜನೆಯನ್ನು ನಾವು ಮಾಡುತ್ತಾ ಇದ್ದೇವೆ. ಅದರಲ್ಲಿ ಬಾಗೇಪಲ್ಲಿ ಸೇರುತ್ತದೆ. ಪಾವಗಡ ಸೇರುತ್ತದೆ ಮತ್ತು ಚಿಂಚೋಳಿ ಸೇರುತ್ತದೆ ಮತ್ತು ರಾಯಚೂರು ಹಾಗೂ ಉಳಿದ ಕೆಲವು ಭಾಗಗಳು ಕೂಡ, ಆಂಧ್ರದ ಗಡಿಯಲ್ಲಿರತಕ್ಕ ಕೆಲವು ಗ್ರಾಮಗಳು, ಕೆಲವು ತಾಲ್ಲೂಕುಗಳನ್ನು ಸೇರಿಸಿ ಈ ಯೋಜನೆಯನ್ನು ೧೯೯೪–೯೫ನೇ ಇಸವಿಯಲ್ಲಿ ನಾವು ಅನುಷ್ಠಾನ ಮಾಡುತ್ತೇವೆಂದು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ಸನ್ಮಾನ್ಯ ಮಹದೇವ್‌ರವರು ಹೇಳಿದರು. ನಂಜನಗೂಡಿನದಂತೂ ನಾವು ಸೇರಿಸಿದ್ದೇವೆ. ಆದರೆ ಆ ಪ್ರದೇಶದಲ್ಲಿರತಕ್ಕಂಥ ಬೇರೆ ಹಳ್ಳಿಗಳನ್ನು ಸೇರಿಸಬೇಕೆಂದು ನಮ್ಮ ಅಪೇಕ್ಷೆ. ಆರ್.ಡಿ.ಪಿ.ಆರ್. ಡಿಪಾರ್ಟ್‌ಮೆಂಟ್‌ನಲ್ಲಿ ಕೆಲವು ಆಕ್ಷೇಪಣೆಗಳನ್ನು ಕೊಟ್ಟಿದ್ದರಿಂದ, ನನಗೆ ತಕ್ಷಣ ಬಜೆಟ್‌ನಲ್ಲಿ ಸೇರಿಸಲಿಕ್ಕಾಗಲಿಲ್ಲ. ಆದರೆ, ಅದನ್ನು ಸೇರಿಸಲಿಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ೪ ಹಳ್ಳಿಗಳನ್ನು ಸೇರಿಸಲಿಕ್ಕೆ ಇದೆ. ಸನ್ಮಾನ್ಯ ಷಫಿ ಅಹಮದ್‌ರವರು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ಹೇಳಿದರು. ನಾವು ಈಗಾಗಲೇ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಹೇಗಾದರೂ ಮಾಡುತ್ತಿದ್ದೇವೆ. ತಾವು ಸಲಹೆ ಹಾಸನದಲ್ಲಿ ಮಾಡಿದಹಾಗೆಯೇ, ತುಮಕೂರಿನಲ್ಲಿಯೂ ಕೂಡ ಇಂಡಸ್ಟ್ರಿಯಲ್ ಮತ್ತು

ಅಗ್ರಿಕಲ್ಚರ್ ಎಕ್ಸಿಬಿಷನ್ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದಿರಿ. ಅದು ಸೂಕ್ತವಿದೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸನ್ಮಾನ್ಯ ಸೋಮಪ್ಪ ಸುವರ್ಣರವರು ಪಾಪ್‌ವೈಸ್ ಆಕ್ಷನ್ ಮಾಡಬೇಕೆಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ಪ್ರಯೋಗ ನಡೆಯುತ್ತದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸೂಚನೆ ಕೊಡುತ್ತೇನೆ. ಇನ್ನು ಕಾರ್ನಾಡ್ ಸದಾಶಿವರಾವ್ ಬಹಳ ದೊಡ್ಡ ತ್ಯಾಗಿ. ಅದರ ಬಗ್ಗೆ ಸೂಕ್ತವಾದ ಸ್ಮಾರಕ ನಾವು ಇನ್ನೂ ಮಾಡಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿಲ್ಲ. ಆದರೆ, ಇಲ್ಲಿ ಬೆಂಗಳೂರಿನಲ್ಲಿ ನಮ್ಮ ಎ.ಐ.ಸಿ.ಸಿ. ಅಧಿವೇಶನವಾದ ಮೇಲೆ, ಆ ಜಾಗವನ್ನು ಸದಾಶಿವನಗರ ಎಂದು ಹಾಕಿದ್ದೇವೆ. ಆದ್ದರಿಂದ, ಇವರ ಬಗ್ಗೆ ಸೂಕ್ತವಾದಂಥ ಸ್ಮಾರಕ ಮಾಡಲಿಕ್ಕೆ ನಾನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇದರ ಬಗ್ಗೆ ಒಂದು ಸಭೆ ಕರೆಯಿರಿ. ಏನೇನು ಯೋಜನೆಗಳನ್ನು ಕಾರ್ನಾಡ್ ಸದಾಶಿವರಾವ್ ರವರ ಬಗ್ಗೆ ಮಾಡಲಿಕ್ಕೆ ಸಾಧ್ಯವಿದೆ ಎಂದು ಆಲೋಚನೆ ಮಾಡಿ, ತಮ್ಮನ್ನೆಲ್ಲಾ ಕರೆಯಿಸುತ್ತೇವೆ, ಎಲ್ಲಾ ಶಾಸಕರನ್ನು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಕರೆಯಿಸಿ, ಮತ್ತು ಅದಕ್ಕೆ ಸಂಬಂಧಪಟ್ಟ ಜನರನ್ನು ಕರೆಯಿಸಿ ತಾವು ಸಮಾಲೋಚನೆ ಮಾಡಿ ಒಂದು ಯೋಜನೆಯನ್ನು ಕೊಟ್ಟರೆ. ಅದಕ್ಕೆ ಮಂಜೂರಾತಿಯನ್ನು ಕೊಡುತ್ತೇನೆ ಮತ್ತು ಅದಕ್ಕೆ ಬೇಕಾದಂಥ ಸಂಪನ್ಮೂಲಗಳನ್ನೂ ಕೂಡ ನಾನು ಒದಗಿಸುತ್ತೇನೆಂದು ಸನ್ಮಾನ್ಯ ಸೋಮಪ್ಪ ಸುವರ್ಣ ಅವರಿಗೆ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಇನ್ನು ಸನ್ಮಾನ್ಯ ನಾಡಗೌಡರು ಒಳ್ಳೆಯ ಸೂಚನೆ ಕೊಟ್ಟಿದ್ದಾರೆ. ಐ.ಟಿ.ಐ.ನವರಿಗೆ ಅನುದಾನ ಕೊಡಬೇಕೆಂದು ಹೇಳಿದ್ದೀರಿ. ಏಕೆಂದರೆ, ಅವರು ಯಾವ ಡೊನೇಷನ್ ಕೂಡ ತೆಗೆದುಕೊಳ್ಳುವುದಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಡೊನೇಷನ್ ಸಿಗುವುದೂ ಇಲ್ಲ. ಹಿಂದಿನ ಸರ್ಕಾರ ಏನೂ ನಿರ್ಣಯ ಮಾಡಿರಲಿಲ್ಲ. ಐ.ಟಿ.ಐ ಗೆ ಅನುದಾನ ಕೊಡಬೇಕೆಂಬ ವಿಚಾರವಾಗಿ ಆ ಫೈಲ್ ನೋಡಿದೆ. ಆ ಫೈಲ್‌ನಲ್ಲಿಯೂ ಇರಲಿಲ್ಲ ಮತ್ತು ಸಚಿವ ಸಂಪುಟವೂ ನಿರ್ಣಯ ತೆಗೆದುಕೊಂಡಿಲ್ಲ. ಏಕೆಂದರೆ, you have worked out the proposals as Minister for Labour. But the Cabinet has not taken a decision. The Finance Department has not taken a decision. It has not gone to the Cabinet. Now, it will come up before the Cabinet. ಕ್ಯಾಬಿನೆಟ್‌ನಲ್ಲಿ ತತ್ವಶ: ನಾವು ಈ ವಿಚಾರ ಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಆದರೆ, ನಮಗೆ ಗೊತ್ತಿದೆ. ಕೆಲವು ಐ.ಟಿ.ಐ.ಗಳಲ್ಲಿ ಯಾವ ವ್ಯವಸ್ಥೆಯೂ ಇಲ್ಲ. ಲಕ್ಚರರ್ಸ್ ಇಲ್ಲ. ಬರೀ ಹೆಸರಿಗೆ ನಾಮಾಂಕಿತವಾದಂಥ ಕೆಲವು ಐ.ಟಿ.ಐ.ಗಳಿವೆ. ಈಗ ನಾವು ಅನುದಾನ ಕೊಡುತ್ತೇವೆಂದು ಹೇಳಿದರೆ, ಅವುಗಳೆಲ್ಲ ಸೇರಿಕೊಳ್ಳುತ್ತವೆ. ಆದ್ದರಿಂದ ಅವುಗಳ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಿ ಎಂದು ಸನ್ಮಾನ್ಯ ಕಾರ್ಮಿಕ ಸಚಿವರ ಹತ್ತಿರ ನಾವು ಹೇಳಿದ್ದೇವೆ. ತಮ್ಮನ್ನೂ ಕೂಡ ಸೇರಿಸಿ, ಅದನ್ನು ವಿಚಾರ ಮಾಡಲಿಕ್ಕೆ ಹೇಳುತ್ತೇವೆ. ಕಾರ್ಮಿಕ ಸಚಿವರು ಇದನ್ನು ವಿಚಾರ ಮಾಡುತ್ತಾ ಇದ್ದಾರೆ. ಇದಕ್ಕೆ ನಿಜವಾಗಿ ಕೆಲಸ ಮಾಡತಕ್ಕಂಥ ಸಂಸ್ಥೆಗಳ ಬಗ್ಗೆ ತಾವು ಶಿಫಾರಸ್ ಮಾಡಿ, ಸಚಿವಸಂಪುಟದಲ್ಲಿ ಇದಕ್ಕೆ ಅನುಕೂಲವಾದಂಥ ನಿರ್ಣಯ ತೆಗೆದುಕೊಳ್ಳೋಣ ಎಂದು ಹೇಳಿದ್ದೇವೆ. ಆದಷ್ಟು ಜಾಗ್ರತೆ ಆ ವರದಿಯನ್ನು ತರಿಸುತ್ತೇವೆ, ತಮ್ಮ ಜೊತೆಯಲ್ಲಿಯೂ ಕೂಡ ಕಾರ್ಮಿಕ ಸಚಿವರು ಮಾತುಕತೆ ಮಾಡಿ, ಈ ಪ್ರಸ್ತಾವನೆ ಬಂದ ಕೂಡಲೇ, ಇದರ ಬಗ್ಗೆ ತಕ್ಷಣ ನಾವು ನಿರ್ಣಯ ತೆಗೆದುಕೊಳ್ಳುತ್ತೇವೆ. ಇನ್ನು ರಾಜೀವ್‌ಗಾಂಧಿ ಅವರ ಹೆಸರಿನಲ್ಲಿ ಕಾರ್ಮಿಕ ಕಲ್ಯಾಣ ನಿಧಿ ಮಾಡಬೇಕೆಂದು, ಸರ್ಕಾರದ ನಿರ್ಣಯ ಇದೆ. ಸರ್ಕಾರಿ ಆದೇಶವನ್ನು ಸಧ್ಯದಲ್ಲೇ ಇಷ್ಯೂ ಮಾಡುತ್ತೇವೆ. ಒಂದೆರಡು ದಿವಸದೊಳಗೆ, ಈ ರಾಜೀವ್‌ಗಾಂಧಿ ಕಾರ್ಮಿಕ ಕಲ್ಯಾಣ ನಿಧಿ ಸ್ಥಾಪನೆ ಮಾಡಲಿಕ್ಕೆ ಸರ್ಕಾರಿ ಆದೇಶವನ್ನು ಮಾಡುತ್ತಿದ್ದೇವೆ.

ಶ್ರೀ ಸಿ. ಎಸ್. ನಾಡಗೌಡ.—ಹಿಂದೆಯೂ ಕೂಡ ಸರ್ಕಾರಿ ಆದೇಶವಾಗಿದೆ. The point is, how the money should be spent. ಅಲ್ಲಿ ಬೋರ್ಡ್ ಇಲ್ಲ, ಬಾಡಿ ಕೋರಂ ಇಲ್ಲ. ಯಾವರೀತಿ ನೀವು ಮಾಡುತ್ತೀರಿ. ಅದಕ್ಕಾಗಿ ನೀವು ಇದರ ಬಗ್ಗೆ ಒಂದು ಬಿಲ್ ತರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದಕ್ಕೆ ನಾವು ಪ್ರೊವೈಡ್ ಮಾಡಿದ್ದೇವೆ. ಮತ್ತೆ ನಾನು ಬಜೆಟ್‌ನಲ್ಲಿ ಈಗಾಗಲೇ ಹೇಳಿದ್ದೇನೆ. ಏಕೆಂದರೆ. ಎ.ಪಿ.ಎಂ.ಸಿ.ನಲ್ಲಿ ಕೆಲಸ ಮಾಡತಕ್ಕಂಥವರಿಗೆ, ಇನ್‌ಷೂರೆನ್ಸ್ ಸ್ಕೀಮ್, ಸೋಷಿಯಲ್ ಸೆಕ್ಯೂರಿಟಿ ಸ್ಕೀಮ್ ಬಗ್ಗೆ ನಾನು ಆಯವ್ಯಯದಲ್ಲಿ ಪ್ರಕಟ ಮಾಡಿದ್ದೇನೆ. ಉಳಿದಂಥವರಿಗೂ ಕೂಡ ಪ್ರತ್ಯೇಕವಾಗಿ ತಾವು ಹೇಳಿದಂಥ ಸೂಚನೆಯನ್ನು ಅನುಸರಿಸಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಯು.ಕೆ.ಪಿ. ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅದು ಬಹುಶಃ ಬಜೆಟ್‌ನಲ್ಲೂ ಕೂಡ ಸಾಕಷ್ಟು ವಿಸ್ತಾರವಾಗಿ ಬಂದಿದೆ. ಇನ್ನು ಗ್ರಂಥದ ಬಗ್ಗೆ ಹೇಳಿದ್ದೀರಿ, ಅದು ನನಗೆ ಪರಿಚಯವಿಲ್ಲ. ಬಸವನಗೌಡರು ಹೇಳಿದರು, ಆ ಗ್ರಂಥ ರಚನೆ ಮಾಡಿದಂಥವರ ಹೆಸರಿನಲ್ಲಿ

ಅಗ್ರಿಕಲ್ಚರ್ ಕಾಲೇಜುಗಳನ್ನು, ಅಗ್ರಿಕಲ್ಚರ್ ಯುನಿವರ್ಸಿಟಿಗೆ, ವೈಸ್‌ಚಾನ್ಸಲರ್ ಜೊತೆಯಲ್ಲಿ ಸಮಾಲೋಚನೆ ಮಾಡಿ, ತೀರ್ಮಾನ ತೆಗೆದುಕೊಳ್ಳಬಹುದು. ನನ್ನದೇನೂ ಆಕ್ಷೇಪಣೆ ಇಲ್ಲ. ಅವರ ಹೆಸರು ಇಡುವುದಿದ್ದರೆ, ಇಡಬಹುದು. ಇನ್ನು ಆ ಗ್ರಂಥದ ಸಂಶೋಧನೆ ಬಗ್ಗೆ ತಮ್ಮ ಹತ್ತಿರ ಮತ್ತು ಅದಕ್ಕೆ ಸಂಬಂಧಪಟ್ಟವರನ್ನು ಕರೆಯಿಸಿ, ನಾವು ಸಮಾಲೋಚನೆ ಮಾಡೋಣ. ಆ ಪುಸ್ತಕವನ್ನು ಪ್ರಕಟಣೆ ಮಾಡುವುದಿದ್ದರೆ, ಅದನ್ನು ಖಂಡಿತವಾಗಿಯೂ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳೋಣ. ಇನ್ನು ಸನ್ಮಾನ್ಯ ಚಿಕ್ಕಮಾದುರವರು ದೇವರಾಜ ಅರಸರ ಪ್ರತಿಮೆ, ಎ.ಜಿ. ಆಫೀಸ್ ಹತ್ತಿರ ಎಂದು ಹೇಳಿದರು. ಅದು ವಿಧಾನಸೌಧದ ಎದುರುಗಡೆಯೇ ಬರುವುದು. ಹನುಮಂತಯ್ಯನವರ ಪ್ರತಿಮೆ ಏನಿದೆ, ಅದರ ಎದುರುಗಡೆಯೇ ಅದೂ ಕೂಡ ಬರುತ್ತದೆ. ಆದ್ದರಿಂದ, ಎ.ಜಿ. ಆಫೀಸ್ ಕಡೆ ಎಂದಲ್ಲ. ವಿಧಾನಸೌಧದ ಎದುರುಗಡೆಯೇ, ಈ ಕಡೆಯಲ್ಲಿ ಬರುತ್ತದೆ. ಆಮೇಲೆ ಹುಣಸೂರಿನ ವಿಚಾರವಾಗಿ ಹೇಳಿದಿರಿ. ಇದರ ಬಗ್ಗೆ ತಮ್ಮ ಊರಿನವರೂ ಮುಂದೆ ಬಂದರೆ, ನಾನು ಅವಕ್ಕೆ ಬೇಕಾದಂಥ ಅನುದಾನ ಕೊಡುತ್ತೇನೆ. ಶ್ರೀಯುತ ದೇವರಾಜ ಅರಸರ ಪ್ರತಿಮೆ ಮಾಡಲಿಕ್ಕೆ, ತಾವು ಕ್ರಮ ತೆಗೆದುಕೊಳ್ಳಬಹುದು. ಇನ್ನು ಈಗಾಗಲೇ ಬಜೆಟ್‌ನಲ್ಲಿ ಹೇಳಿರುವಂತೆ, ೩ ರಿಂದ ೭ ಪರ್ಸೆಂಟ್ ಮೀಸಲಾತಿಯನ್ನು ವಿಸ್ತರಿಸಬೇಕೆಂಬ ವಿಚಾರ ಈಗಾಗಲೇ ಸರ್ಕಾರದ ಪರಿಗಣನೆಯಲ್ಲಿದೆ. ಈ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ತಂದು, ಅದಕ್ಕೆ ಬೇಕಾದಂಥ ಸೂಕ್ತ ನಿರ್ಣಯವನ್ನು ನಾವು ತೆಗೆದುಕೊಳ್ಳುತ್ತೇವೆ.

೪-೪೦ ಪಿ. ಎಂ.

ಇನ್ನು ಕಬ್ಬಿನ ಪರ್ಚೇಜ್ ಟ್ಯಾಕ್ಸ್ ಬಗ್ಗೆ ಸನ್ಮಾನ್ಯ ಬಾಬುಗೌಡ ಪಾಟೀಲರು ಮತ್ತು ಇನ್ನೂ ಅನೇಕ ಸನ್ಮಾನ್ಯ ಸದಸ್ಯರು ವ್ಯಾಕುಲವನ್ನು ವ್ಯಕ್ತಪಡಿಸಿದ್ದಾರೆ. ತಮಗೆ ಗೊತ್ತಿದೆ, ಅದು ಹಿಂದೆ ೮ ಪರ್ಸೆಂಟ್ ಇತ್ತು. ಅದನ್ನು ನಾನು ಏನು ಮಾಡಿದೆ ಎಂದು ಹೇಳಿದರೆ ೭ ಪರ್ಸೆಂಟ್ ಪರ್ಚೇಜ್ ಟ್ಯಾಕ್ಸ್, ೧ ಪರ್ಸೆಂಟ್ ಸೆಸ್ ಆ ಭಾಗದಲ್ಲಿರತಕ್ಕಂಥ ರಸ್ತೆಗಳು ಸೇತುವೆಗಳು ಏನಿವೆ ಅವಕ್ಕೆ ಉಪಯೋಗ ಮಾಡಬೇಕು ಅಂತಹೇಳಿ ೭ ಪರ್ಸೆಂಟ್ ಪರ್ಚೇಜ್ ಟ್ಯಾಕ್ಸ್ ಮಾಡಿದ್ದೇವೆ. ಒಂದು ಪರ್ಸೆಂಟ್ ಸೆಸ್ ಆ ಭಾಗದಲ್ಲಿರತಕ್ಕಂಥ ಅಭಿವೃದ್ಧಿಗೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದನ್ನು ನಾವು ಪುನಃ ರೀ ಕನ್ಸಿಡರ್ ಮಾಡಿ ೮ ಪರ್ಸೆಂಟ್‌ನ್ನು ೭ ಪರ್ಸೆಂಟ್‌ಗೆ ಇಳಿಸಿ ೬ ಪರ್ಸೆಂಟ್ ಪರ್ಚೇಜ್ ಟ್ಯಾಕ್ಸ್ ೧ ಪರ್ಸೆಂಟ್ ಸೆಸ್. ಆ ಒಂದು ಪರ್ಸೆಂಟ್ ಸೆಸ್ ಆ ಭಾಗದ ಅಭಿವೃದ್ಧಿಗೆ ಹೋಗುತ್ತದೆ. ೧ ಪರ್ಸೆಂಟ್ ಇಳಿಸಿದ್ದೇವೆ. ಮೊದಲು ೭ ಪರ್ಸೆಂಟ್ ಪರ್ಚೇಜ್ ಟ್ಯಾಕ್ಸ್ ಇತ್ತು ಒಂದು ಪರ್ಸೆಂಟ್ ಸೆಸ್ ಇತ್ತು. ಅದು ನಾನು ಮೊನ್ನೆ ಆಯವ್ಯಯದಲ್ಲಿ ಹೇಳಿದ್ದು ಈಗ ೬ ಪರ್ಸೆಂಟ್ ಪರ್ಚೇಜ್ ಟ್ಯಾಕ್ಸ್ ಒಂದು ಪರ್ಸೆಂಟ್ ಸೆಸ್ ಆಗಿ ಅದನ್ನು ಪರಿವರ್ತನೆ ಮಾಡಿದ್ದೇವೆ. ಇನ್ನು ಸನ್ಮಾನ್ಯ ಈಶ್ವರಪ್ಪನವರು ಇಲ್ಲಿ ಇಲ್ಲ, ಅವರು ಭಾಷಣ ಮಾಡಿದರು ಹೋದರು. ಅವರಿಗೆ ಕೇಳುವಂತಹ ತಾಳ್ಮೆ ಇಲ್ಲ. ಅವರೂ ಪರವಾಗಿಲ್ಲ ಸ್ವಲ್ಪ ತಾಳ್ಮೆಯಿಂದ ಇದ್ದರು. ಆಶ್ರಯ ಸ್ಕೀಂ ಬಗ್ಗೆ ತಾವು ಹೇಳಿದ್ದು ಸರಿ. ಕರ್ನಾಟಕ ಹೌಸಿಂಗ್ ಬೋರ್ಡ್‌ನಿಂದ ಇದ್ದಂತಹ ಮನೆಗಳಿಗೆ ಗತಿ ಇಲ್ಲ ಅವು ಅನಾಥ ಆಗಿದೆ. ಅದನ್ನು ಇವತ್ತು ಡೆಪ್ಯುಟಿ ಕಮೀಷನರ್ ಮುಖಾಂತರ ಮಾಡಿಸಬೇಕು. ಅದು ನಮ್ಮ ಆಲೋಚನೆ ಕೂಡ ಇದೆ. ಅದಕ್ಕೆ ಬೇರೆ ಹಣವನ್ನು ನಾವು ಉಪಯೋಗ ಮಾಡುತ್ತೇವೆ. ಇನ್ನು ಅರಣ್ಯ ಇಲಾಖೆ ಬಗರ್‌ಹುಕ್ಕುಂ ಸಾಗುವಳಿ ಬಗ್ಗೆ ಸಮಿತಿ ಬಹಳ ವರ್ಷಗಳಿಂದ ರೀ ಕಾನ್‌ಸ್ಟಿಟ್ಯೂಟ್ ಆಗಿಲ್ಲ, ಸಮಿತಿಯೇ ಇರಲಿಲ್ಲ. ಈಗಾಗಲೇ ನಾವು ಬಹುತೇಕ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಅವರಿಗೆ ಟೈಮ್ ಬಾಂಡ್ ಪ್ರೋಗ್ರಾಂ ಕೊಡುತ್ತಿದ್ದೇವೆ. ನೀವು ೫ ತಿಂಗಳು ಒಳಗಡೆ ನಿಮ್ಮ ವರದಿಗಳನ್ನು ಮಾಡಿ ಇಲ್ಲಿಗೆ ಕಳುಹಿಸಬೇಕು ಎಂದು ಹೇಳಿದ್ದೇವೆ. ಇನ್ನು ಮಾರ್ಕಂಡೇಯ ಬ್ರಿಡ್ಜ್ ಬಗ್ಗೆ ನಮ್ಮ ಪಾಟೀಲರು ಹೇಳಿದರು ಅದಕ್ಕೆ ಸುಮಾರು ೨೫ ಲಕ್ಷ ರೂಪಾಯಿ ಬರುತ್ತಾ ಇದೆ. ಆ ಪ್ರೊಪೋಜಲ್ ೧೯೯೩-೯೪ರಲ್ಲಿ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ೯೪-೯೫ರಲ್ಲಿ ಈ ಪ್ರೊಪೋಜಲ್‌ನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನು ತಾವು ಒಂದು ಪ್ರೈಮರಿ ಹೆಲ್ತ್ ಸೆಂಟರ್‌ನ್ನು ಕಡೋಲಿ ಮತ್ತು ಹಲಗದಲ್ಲಿ ಮಾಡಲಿಕ್ಕೆ ತಮ್ಮ ಬೇಡಿಕೆಯನ್ನು ಹೇಳಿದಿರಿ. ಅದನ್ನು ೧೯೯೪-೯೫ನೇ ಸಾಲಿನಲ್ಲಿ ಮಂಜೂರು ಮಾಡುತ್ತೇವೆ. ಇನ್ನು ಸನ್ಮಾನ್ಯ ವೆಂಕಟೇಶ್‌ರವರು ತಾರಕ ಪ್ರಾಜೆಕ್ಟ್ ಬಗ್ಗೆ ಹೇಳಿದರು ಒಂದೂವರೆ ಕೋಟಿ ಮಾತ್ರ ಕೊಟ್ಟಿದ್ದೀರಿ ಇನ್ನು ಹೆಚ್ಚು ಕೊಡಬೇಕು ಎಂದು ಹೇಳಿದ್ದೀರಿ. ಆದ್ದರಿಂದ ಅದು ಸ್ವಲ್ಪ ಹೆಚ್ಚು ಕೊಡುತ್ತೇವೆ. ತಮ್ಮ ಹತ್ತಿರ ಎಲ್ಲಾ ಮಾತನಾಡಿಕೊಂಡು ತಾರಕದ ಕೆಲಸ ನಿಲ್ಲದ ಹಾಗೆ ಸ್ಥಗಿತ ಆಗದ ರೀತಿಯಲ್ಲಿ ಅದು ಬಹಳ ಸ್ಪೀಡ್‌ನಲ್ಲಿ ಆಗುವ ರೀತಿಯಲ್ಲಿ ಅದಕ್ಕೆ ಏನು ಸ್ವಲ್ಪ ಹೆಚ್ಚು ಹಣವನ್ನು ಕೊಡಬೇಕೋ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇನ್ನು ಸನ್ಮಾನ್ಯ ಚವಾಣ್‌ರವರು ಎಸ್.ಸಿ. ಎಸ್.ಟಿ. ಮ್ಯಾನೇಜ್‌ಮೆಂಟ್‌ಗೆ ಅನುದಾನ ಕೊಡಬೇಕು ಎಂದು ಹೇಳಿದರು. ನಮಗೆ ಬಹಳ ಹಿಂದಿನ ಸಂಸ್ಥೆಗಳಿಗೆ ಕೊಡಬೇಕೆಂದು ಆಲೋಚನೆ ಇದೆ. ಅದು ಕ್ಯಾಬಿನೇಟ್‌ಗೆ ಬರಬೇಕಾಗಿದೆ. ಆ ಕೆಲಸ ಮಾಡಿ

ತಕ್ಕಂಥ ಆಲೋಚನೆ ನಮ್ಮಲ್ಲಿ ಇದೆ. ಲಂಬಾಣಿ ಅಭಿವೃದ್ಧಿ ನಿಗಮ ಮಾಡಬೇಕೆಂಬ ವಿಚಾರವನ್ನು ನಾನು ಈಗಾಗಲೇ ಉತ್ತರ ಕೊಡುವಾಗ ಹೇಳಿದ್ದೇನೆ. ಸನ್ಮಾನ್ಯ ಮೋತಕಪಲ್ಲಿಯವರು ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳಿದರು. ಬಹಳ ಹೆರ್‍ಯಾಸ್ ಮಾಡುತ್ತಾರೆ. ಈ ಸಣ್ಣ ಕೈಗಾರಿಕೆಗಳಿಗೆ ಹೊಸದಾಗಿ ಪ್ರಾರಂಭ ಮಾಡುವುದಿದ್ದರೆ ೫ ವರ್ಷಗಳ ಕಾಲದವರೆಗೆ ಸೇಲ್ಸ್ ಟ್ಯಾಕ್ಸ್ ಸಲವತ್ತು ಇದೆ. ಆದರೆ ಹಳೆಯ ಯೂನಿಟ್‌ಗಳಿಗೆ ಇಲ್ಲ. ಹೊಸದಾಗಿ ಮಾಡಿದಕ್ಕೆ ಏನಾದರೂ ಹೆರ್‍ಯಾಸ್‌ಮೆಂಟ್ ಆಗಿದ್ದರೆ ಅದರ ವಿಚಾರ ನಾನು ಪರಿಶೀಲನೆ ಮಾಡಬಹುದು. ಆತ್ಮಾನಂದರವರು ಕೂಡ ಈ ಶುಗರ್ ಪರ್ಚೇಜ್ ಟ್ಯಾಕ್ಸ್ ಬಗ್ಗೆ ಹೇಳಿದರು. ಈಗ ರಿಯಾಯಿತಿ ಒಂದು ಪರ್ಸೆಂಟ್ ಕೊಟ್ಟಿದ್ದೇವೆ. ಅದು ಬಹಳ ದೊಡ್ಡ ಗಾತ್ರದ ರಿಯಾಯಿತಿ ಆಯಿತು. ಇಷ್ಟು ೬೦–೭೦ ಕೋಟಿ ದೊಡ್ಡ ಗಾತ್ರದ ರಿಯಾಯಿತಿಯನ್ನು ನಾವು ದೊಡ್ಡ ಪ್ಲಾನ್ ಇಟ್ಟುಕೊಂಡು ಘೋಷಣೆ ಮಾಡಿದ್ದೇನೆ. ಇವತ್ತು ರಿಯಾಯಿತಿ ಘೋಷಣೆಯೇ ೧೦ ಕೋಟಿ ರೂಪಾಯಿ ಆಗಿದೆ, ಮೊನ್ನೆ ಬಿಟ್ಟು. ಮತ್ತೆ ತಮಗೆ ಗೊತ್ತಿದೆ ಟ್ಯಾಕ್ಸ್ ಏನೂ ಆಗುತ್ತಿಲ್ಲ. ಹೊಸ ಟ್ಯಾಕ್ಸ್ ಯಾವುದೂ ಈ ಬಜೆಟ್‌ನಲ್ಲಿ ಹಾಕುತ್ತಿಲ್ಲ, ಇಷ್ಟು ದೊಡ್ಡ ಗಾತ್ರದ್ದು ಇನ್ನು ಮುಂದೆ ಆಲೋಚನೆ ಮಾಡೋಣ. ಒಮ್ಮೆಲೇ ನಾನು ಎಲ್ಲಾ ರಿಯಾಯಿತಿ ಕೊಟ್ಟು ಕೈ ಖಾಲಿ ಮಾಡಿ ಬಿಟ್ಟರೆ ಈಗ ಒಂದೊಂದು ಕ್ಷೇತ್ರದಲ್ಲಿ ಆ ವಿಚಾರ ಬಂತು, ಇಲ್ಲಿ ಒಂದೊಂದು ಕ್ಷೇತ್ರದಲ್ಲಿ ಸಾಧಾರಣ ಮೂರುವರೆ ಸಾವಿರದಿಂದ ನಾಲ್ಕುವರೆ ಸಾವಿರ ಫಲಾನುಭವಿಗಳಿಗೆ ನನ್ನ ಬಜೆಟ್ ನಲ್ಲಿ ೧೯೮೭–೮೮ನೇ ಸಾಲಿನಲ್ಲಿ ಅನುಕೂಲ ಮಾಡಿಕೊಡತಕ್ಕಂಥ ಯೋಜನೆಗಳನ್ನು ನಾನು ಅನುಷ್ಠಾನ ಮಾಡಿದ್ದೇನೆ. ಒಂದು ಕೋಟಿ ಅಲ್ಲ ಅದಕ್ಕಿಂತ ಹೆಚ್ಚು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಖರ್ಚು ಆಗತಕ್ಕಂಥಾದ್ದು ಏನಿದೆ ಆ ಅಮೌಂಟ್ ನಾನು ಹೇಳುತ್ತೇನೆ. ಅದಕ್ಕಿಂತಲೂ ಜಾಸ್ತಿ ಆಗುತ್ತದೆ. ಅದೇ ರೀತಿಯಲ್ಲಿ ಮನೆಗಳ ಯೋಜನೆ ತೆಗೆದುಕೊಂಡರೆ ನೆರಳು ಭಾಗ್ಯ, ಆಶ್ರಯ, ಇಂದಿರಾ ಆವಾಜ್ ಮತ್ತೆ ಅಂಬೇಡ್ಕರ್ ಯೋಜನೆ ಇದೆಲ್ಲಾ ಸೇರಿದರೆ ಸುಮಾರು ಮೂರುಮೂರುವರೆ ಸಾವಿರ ಮನೆಗಳನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕಟ್ಟತಕ್ಕಂಥ ಕೆಲಸ ನಾವು ಮಾಡುತ್ತಿದ್ದೇವೆ, ಶೌಚಾಲಯದ ವಿಚಾರ ನಾವು ಹೇಳಿದ್ದೇವೆ. ಸುಮಾರು ೨೦ ಕೋಟಿ ರೂಪಾಯಿಗಳಲ್ಲಿ ಪ್ರತ್ಯೇಕವಾಗಿ ಗ್ರಾಮಾಂತರ ಪ್ರದೇಶದಲ್ಲೇ ಶೌಚಾಲಯಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ಹೊಸದಾಗಿ ಆಯವ್ಯಯದಲ್ಲಿ ಸೇರಿದ್ದೇವೆ. ಇದು ಒಂದು ದೊಡ್ಡ ಬೃಹತ್ ಕಾರ್ಯಕ್ರಮ. ಆದ್ದರಿಂದ ಅದು ನೂರು ಆಗಬಹುದು, ೫೦ ಆಗಬಹುದು, ನೀವು ಸರಿಯಾಗಿ ವ್ಯವಸ್ಥೆ ಮಾಡಿದರೆ ಈ ಶೌಚಾಲಯಗಳನ್ನು ಪ್ರತ್ಯೇಕವಾಗಿ ಕಟ್ಟತಕ್ಕಂಥ ಕಾರ್ಯಕ್ರಮ ನಾವು ಇದರಲ್ಲಿ ಮಾಡಿದ್ದೇವೆ. ಸನ್ಮಾನ್ಯ ಶ್ರೀ ಸ್ವಾಮಿ ರಾವ್‌ರವರು ಮಜರಾ ಹಳ್ಳಿಗಳಿಗೆ ವಿದ್ಯುತ್‌ನ್ನು ಕೊಡುವ ಬಗ್ಗೆ ಹೇಳಿದರು. ಇದು ಬಹಳ ಸಮಯದಿಂದ ಆ ಪ್ರದೇಶದಲ್ಲಿ ಕಾಡತಕ್ಕಂಥ ಒಂದು ದೊಡ್ಡ ಸಮಸ್ಯೆ ಇದನ್ನು ನಾನು ಈಗಾಗಲೇ ಕೆ ಇ.ಬಿ. ಅಧ್ಯಕ್ಷರ ಜೊತೆಯಲ್ಲಿ ಮಾತನಾಡಿದ್ದೇನೆ. ಇದಕ್ಕೆ ವಿಶೇಷವಾದ ಒಂದು ಯೋಜನೆಯನ್ನು ಮಾಡುತ್ತೇವೆಂದು ಕೂಡ ಹೇಳಿದ್ದಾರೆ. ಅದಕ್ಕೆ ನಾನು ಸರ್ಕಾರದಿಂದ ಕೂಡ ಸಪೋರ್ಟ್ ಮಾಡುತ್ತೇನೆಂದು ಹೇಳಿದ್ದೇನೆ. ಆದ್ದರಿಂದ ೧೯೮೭–೮೮ರಲ್ಲಿ ಮಜರಾ ಗ್ರಾಮಗಳಿಗೆ ಸೀಮಿತವಾದಂತಹ ಒಂದು ವಿಶೇಷ ಯೋಜನೆ ಮಾಡಿ ಅಲ್ಲಿ ವಿದ್ಯುದ್ದೀಕರಣ ಆಗಲಿಕ್ಕೆ ವಿಶೇಷ ಕ್ರಮವನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳುತ್ತೇನೆ ಎಂದು ಸನ್ಮಾನ್ಯ ಸ್ವಾಮಿರಾವ್‌ರವರಿಗೆ ಹೇಳಲಿಕ್ಕೆ ನಾನು ಅಪೇಕ್ಷೆ ಪಡುತ್ತಾ ಇದ್ದೇನೆ. ಸನ್ಮಾನ್ಯ ಅನಂತಕೃಷ್ಣರವರು ಮೆಗಾಸಿಟಿ ಬಗ್ಗೆ ಕಂಟೋನ್‌ಮೆಂಟ್ ಏರಿಯಾ ಎಲ್ಲಾ ಬಿಟ್ಟುಬಿಟ್ಟಿದ್ದೀರಿ ಎಂದು ಹೇಳಿದರು. ನಾವು ಏನೂ ಬಿಟ್ಟಿಲ್ಲ ಅಲ್ಲಿ ಮೆಗಾಸಿಟಿಯಲ್ಲಿ ಎರಡು ಯೋಜನೆಗಳು ಕಂಟೋನ್‌ಮೆಂಟ್ ಏರಿಯಾಕ್ಕೆ ಇದೆ.

ಶ್ರೀ ಎ.ಕೆ. ಅನಂತಕೃಷ್ಣ.—ಕ್ಷಮಿಸಬೇಕು ನಾನು ಹೇಳಿದ್ದುದು ಏನೆಂದರೆ, ಎಲ್ಲಿ ಪೂರ್ತಿ ಬೆಳವಣಿಗೆ ಆಗಿದೆ, ಸುಮಾರು ಒಂದು ನೂರು ವರ್ಷದಿಂದ ಯಾವುವು ಮುಂದುವರೆದ ಪ್ರದೇಶಗಳು ಇವೆ ಅಲ್ಲಿಗೆ ಸೀಮಿತವಾಗಿ ಆಗಿವೆ, ಅವರಿಗೆ ಅನುಕೂಲವಾಗಿದೆ. ಬೆಂಗಳೂರು ನಗರ ಬೆಳೆಯಬೇಕಾಗಿದ್ದರೆ ಸಹಸ್ರಾರು ಎಕರೆ ಜಮೀನನ್ನು ಹಳ್ಳಿ ಹಳ್ಳಿಯಿಂದ ಕೊಟ್ಟಿದ್ದಾರೆ. ಸ್ಲಮ್ ಡ್ವೆಲರ್ಸ್ ಬೆಂಗಳೂರು ನಗರವನ್ನು ಕಟ್ಟಿದ್ದಾರೆ. ಹಾಗೆಯೇ ಅಲ್ಪ ಸಂಖ್ಯಾತರು ಸಾಕಷ್ಟು ಸೇವೆಯನ್ನು ಮಾಡಿದ್ದಾರೆ ಆ ವಿಭಾಗಗಳೆಲ್ಲಾ ಹಾಗೆಯೇ ಉಳಿದುಕೊಂಡು ಹೋಗಿದೆ. ಈ ಎಷ್ಟು ಏರಿಯಾ ಸೇರಿದೆ ಅದು ಹಾಗೆ ಉಳಿದಿದೆ. ಈ ಮೆಗಾಸಿಟಿ ಪ್ರೋಗ್ರಾಂನಲ್ಲಿ ಆ ಜನಕ್ಕೆ ಈ ಒಂದು ಮೆಗಾಸಿಟಿ ಫಲಾನುಭವ ಸೇರಬೇಕಾಗಿದೆ. ಉದಾಹರಣೆಗೆ ಒಂದು ವಿಚಾರ ಹೇಳಿದೆ ಕಂಟೋನ್‌ಮೆಂಟ್ ಎಂದು ಹೇಳಿದೆ. ನಾನು ರೆಸಲ್ ಮಾರ್ಕೆಟ್ ಏರಿಯಾ ಎಂದು ಹೇಳಿದೆ. ರಸೆಲ್ ಮಾರ್ಕೆಟ್‌ನ ಸುತ್ತಮುತ್ತಲ ಪ್ರದೇಶದಲ್ಲಿ ಬೆಂಗಳೂರು ನಗರದಲ್ಲಿ ಬಹಳ ಹಿಂದುಳಿದಂತಹ ವಿಭಾಗ ಅದು. ಅಲ್ಲಿಗೆ ಕೆಲವು ಯೋಜನೆಗಳನ್ನು ಮಾಡಿದ್ದಾರೆ. ಆರ್ಕಿಟೆಕ್ಟ್ ಎಲ್ಲಾ ಮಾಡಿದ್ದಾರೆ. ಪ್ರಾಜೆಕ್ಟ್ ಮಾಡಿದ್ದಾರೆ. ಅದು ಯಾವುದಕ್ಕೂ ಗಮನ ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಮೆಗಾಸಿಟಿ ಇಡೀ ಬೆಂಗಳೂರು ಸಿಟಿಯನ್ನು ಸೇರಿಸಿ ಮೆಗಾಸಿಟಿ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಅದನ್ನು ನಿರ್ಲಕ್ಷ ಮಾಡಸತಕ್ಕಂಥ ಪ್ರಶ್ನೆ ಇಲ್ಲ ಮತ್ತು ಅದು ಸುಮಾರು ೮೦೦ ಕೋಟಿ ರೂಪಾಯಿಗಳ ಯೋಜನೆ ಕೂಡ ಆಗಿದೆ ತಮಗೆ ಗೊತ್ತಿದ್ದ ಪ್ರಕಾರ ಇಂತಹ ಎಲ್ಲಿ ವೀಕರ್ ಸೆಕ್ಷನ್ಸ್ ಇದ್ದಾರೆ ದೇವರ ಜೀವನಹಳ್ಳಿಯಲ್ಲಿ ಏನು ಯಾವ ರೀತಿ ಯೋಜನೆ ಮಾಡಿದ್ದೇವೆ ಅದೇ ರೀತಿಯಲ್ಲಿ ಕೆಲವು ಯೋಜನೆಗಳನ್ನು ಮಾಡಿ ನಾವು ಕ್ರಮ ತೆಗೆದು ಕೊಳ್ಳಬೇಕು ಅಂತ ಹೇಳಿ ಕೂಡ ನಾವು ಕಾರ್ಯಕ್ರಮ ಮಾಡುತ್ತಿದ್ದೇವೆ. ಸನ್ಮಾನ್ಯ ಪ್ರತಾಪಶೆಟ್ಟಿ ಯವರು ಈ ಸ್ಕಾಲರ್‌ಶಿಪ್‌ಗೆ ೩೪೦೦ ರೂಪಾಯಿ ಇದೆ ಆದರೆ ಐಆರ್‌ಡಿಪಿ ಇಂತಹ ಕಾರ್ಯಕ್ರಮ ಗಳಿಗೆ ೬೫೦೦ ರೂಪಾಯಿ ಇದೆ ಈ ವ್ಯತ್ಯಾಸ ಇದೆ ಈ ವ್ಯತ್ಯಾಸವನ್ನು ನಾವು ಸರಿಪಡಿಸುತ್ತೇವೆ. ಸದ್ಯದಲ್ಲೇ, ಇನ್ನು ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಮಾಡಬೇಕು ಅಂತ ಹೇಳಿ ಆ ಭಾಗದ ಶಾಸಕರ ಒಂದು ಬೇಡಿಕೆ ಇದೆ ಅಂತ ಹೇಳಿ ಕೂಡ ಸನ್ಮಾನ್ಯ ಪ್ರತಾಪಶೆಟ್ಟಿಯವರು ಕೂಡ ಹೇಳಿದ್ದಾರೆ ಮತ್ತು ನಮ್ಮ ಬಸವರಾಜುರವರು ಕಾಗದ ಬರೆದು ಕಳುಹಿಸಿದ್ದಾರೆ. ಆ ಬೇಡಿಕೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರ ಬೇಡಿಕೆ ಎಂದು ನನಗೆ ಗೊತ್ತಿದೆ. ಇದರ ಬಗ್ಗೆ ನಾವು ಆಲೋಚನೆ ಮಾಡುತ್ತೇವೆ. ಇನ್ನು ವರಾಹಿ ಯೋಜನೆ ಮತ್ತು ಏತ ನೀರಾವರಿ ಬಗ್ಗೆ ನನಗೆ ಗೊತ್ತಿದೆ. ಒಂದು ಸಮಗ್ರ ವಾದಂತಹ ಯೋಜನೆ ಆ ವರಾಹಿ ಪ್ರದೇಶದಲ್ಲಿ ನಾವು ಪ್ರತ್ಯೇಕವಾಗಿ ಮಾಡುತ್ತಿದ್ದೇವೆ. ಇನ್ನು ನಮ್ಮ ಕುರುಡಿ ಗ್ರಾಮಕ್ಕೆ ಪೋಲೀಸ್ ಸ್ಟೇಶನ್ ಆಗಬೇಕೆಂದು ಒಂದು ಸೂಚನೆ ಕೊಟ್ಟಿದ್ದೀರಿ. ಅದನ್ನು ೧೯೯೪–೯೫ರಲ್ಲಿ ಮಾಡೋಣ ಮತ್ತು ಎಲ್ಲ ಫೈನಾನ್ಸ್‌ಗೂ ಕೂಡ ಹೇಳಿ ತಾವು ಅನೇಕ ಬಾರಿ ಪ್ರಸ್ತಾಪ ಮಾಡಿದ್ದೀರಿ. ಅದನ್ನು ನಾವು ಕ್ಲಿಯರ್ ಮಾಡುತ್ತೇವೆ, ಮನೋಹರ್ ತಹಸೀಲ್ದಾರ್ ಅವರು ಹೇಳಿದರು. ಆಡಳಿತ ಮಂಜೂರಾತಿ ೪ ನೀರಾವರಿಗೆ ನಾವು ಕೊಟ್ಟಿದ್ದೇವೆ, ಅದನ್ನು ೯೪–೯೫ ರಲ್ಲಿ ತೆಗೆದುಕೊಳ್ಳುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಪ್ಪರ್ ತುಂಗಾ ಘೋಷಣೆ ಆಗಿದೆ, ಅದು ತಮಗೆ ಗೊತ್ತಿದೆ, ಶಂಕುಸ್ಥಾಪನೆ ಕೂಡ ಆಗಿದೆ. ಆದರೆ ೯೨–೯೩ರಲ್ಲಿ ಹಣಾನೂ ಒದಗಿಸಲಿಲ್ಲ ಮತ್ತು ಅದರ ಸರ್ವೇನೂ ಆಗಿರಲಿಲ್ಲ ಸರಿಯಾದ ಟೆಕ್ನಿಕಲ್ ಅಪ್ರೂವಲ್ ಆಗಿರಲಿಲ್ಲ. ಆಡಳಿತ ಮಂಜೂರಾತಿ ಕೂಡ ಆಗಿರಲಿಲ್ಲ. ನಾನು ಕೂಡ ಹೀಗೆ ಘೋಷಣೆ ಮಾಡುತ್ತಾ ಹೋಗಬಹುದು. ಯಾವುದೇ ಆಡಳಿತ ಟೆಕ್ನಿಕಲ್ ಮಂಜೂರಾತಿ ಅಥವಾ ಬಜೆಟರಿ ಸಪೋರ್ಟ್ ಇಲ್ಲದೆ ನಾನೂ ಘೋಷಣೆ ಮಾಡುತ್ತಾ ಹೋಗಬಹುದು. ಆದರೆ ಅಂತಹ ಕೆಲಸವನ್ನು ನಾನು ಮಾಡುತ್ತಾ ಹೋಗುವುದಿಲ್ಲ. ಆದಕ್ಕೇ ೯೩–೯೪ ರಲ್ಲಿ ಅನೇಕ ಪ್ರಗತಿ ನಾವು ಸಾಧನೆ ಮಾಡಿದ್ದೇವೆ. ೧೯೯೪–೯೫ ರಲ್ಲಿ ಕಾಮಗಾರಿ ತೆಗೆದುಕೊಳ್ಳುವುದಕ್ಕೆ ಹೆಚ್ಚು ಹಣ ಬೇಕಾದರೆ ಅದನ್ನು ನಾನು ಒದಗಿಸುತ್ತೇನೆ. ಆದರೆ ಯೋಜನೆ ಬಗ್ಗೆ ವಿಶೇಷವಾದ ಗಮನವನ್ನು ತೆಗೆದುಕೊಳ್ಳುತ್ತೇವೆ ತಾವು ಹೇಳಿದ ಹಾಗೆ ತಿರುವಳ್ಳಿ ಮತ್ತೊಂದು ಕಡೆ ಕೆಇಬಿ ಯವರು ಯೋಜನೆ ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಸಾದತ್ ಅಲಿಖಾನ್‌ರವರು ಉಡನ್ ಟಾಯ್ಸ್ ಬಗ್ಗೆ ನಾವು ಸಂಪೂರ್ಣ ತೆರಿಗೆ ವಿನಾಯ್ತಿ ಮಾಡಿದ್ದೇವೆ. ಕಾವೇರಿ ನೀರನ್ನು ನಿಮ್ಮ ಚೆನ್ನಪಟ್ಟಣಕ್ಕೆ ಕೊಡಬೇಕೆಂದೂ ಕೂಡ ಆಶ್ವಾಸನೆ ಇದೆ. ನನ್ನ ಕೆಲಸ ಎಂದರೆ. ಹಿಂದೆಯೆಲ್ಲಾ ಯಾರು ಯಾರು ಆಶ್ವಾಸನೆ ಕೊಟ್ಟಿದ್ದಾರೆ ಅದನ್ನು ಅನುಷ್ಠಾನ ಮಾಡುವ ಕೆಲಸ ನನ್ನ ಜವಾಬ್ದಾರಿ. ಅದನ್ನು ಮಾಡುತ್ತೇನೆ. ಆದ್ದರಿಂದ ಹಿಂದೆ ಯಾರು ಆಶ್ವಾಸನೆ ಕೊಟ್ಟರು ಮೊಯಿಲಿಯವರು ಮಾಡಲಿಲ್ಲ ಎಂದು ಆಗುವುದಿಲ್ಲ. ಮೊಯಿಲಿಯವರು ಅನುಷ್ಠಾನ ಮಾಡುತ್ತಾರೆ, ನಾವು ಆಶ್ವಾಸನೆ ಕೊಡುವುದಿಲ್ಲ. ಈ ಕೆಲಸ ನಾವು ಜವಾಬ್ದಾರಿಯಿಂದ ಮಾಡು ತ್ತೇವೆಂದು ಹೇಳುತ್ತೇನೆ. ಪ್ರತಿ ವಿಧಾನಸೌಧ ಕ್ಷೇತ್ರಕ್ಕೆ ಎಷ್ಟೆಷ್ಟು ಎಂದು ಅನಲೈಸ್ ಮಾಡಿ ನಾವು ಹೇಳುತ್ತೇವೆ. ಕಾರ್ಯಕ್ರಮ ನಾವು ಕೊಟ್ಟಿದ್ದೇವೆ. ಇನ್ನು ಕೆರೆ ವಿಚಾರವಾಗಿ ಕೆರೆ ಪ್ರಾಧಿಕಾರ ಎಂದು ಮಾಡುತ್ತಿದ್ದೇವೆ. ತಾವು ಹೇಳಿದ್ದು ಬಹಳ ಸರಿಯಿದೆ, ಕೋಲಾರ, ತುಮಕೂರು—ಇನ್ನೂ ಅನೇಕ ಕಡೆಗಳಲ್ಲಿ ಕೆರೆಗಳ ಪುನರುದ್ಧಾರ ಪುನರುತ್ಥಾನಕ್ಕೆ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಇದಕ್ಕೆ ಪ್ರಪಂಚ ಬ್ಯಾಂಕಿನ ಸಹಾಯ ಕೂಡ ತೆಗೆದುಕೊಳ್ಳಬೇಕು. ಅದಕ್ಕೆ ಬಜೆಟರಿ ಪ್ರೊವಿಜನ್ ಕೂಡ ಇದೆ. ಏನಾದರೂ ಮಾಡಿ ಇದಕ್ಕೆ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಈಗ ಬಹಳ ಜನ ಪೆನ್ ಮತ್ತು ಬಾಲ್‌ಪೆನ್ ಉಪಯೋಗ ಮಾಡುತ್ತಿದ್ದಾರೆ. ಪಾಟೀಲ್ ನಾಗರಾಜ್‌ರವರೆ, ಇಲ್ಲಿಯವರೆಗೆ ೧೦ ರೂಪಾಯಿ ಬೆಲೆಬಾಳುವ ಪೆನ್ ಮತ್ತು ಬಾಲ್‌ಪೆನ್‌ಗೆ ತೆರಿಗೆ ವಿನಾಯಿತಿ ಇತ್ತು. ಈಗ ಅದನ್ನು ೨೦ ರೂಪಾಯಿಗಳಿಗೆ ಹೆಚ್ಚಿಸುತ್ತೇನೆ. ಶೃಂಗೇರಿಗೆ ಮಾಸ್ಟರ್ ಯೂನಿಟ್ ಸರ್ವೀಸ್ ಸ್ಟೇಶನ್ ಮಾಡಬೇಕೆಂದು ಮಾನ್ಯ ಶ್ರೀ ಶಾಮಣ್ಣನವರು ಹೇಳಿದ್ದಾರೆ. ಅದಕ್ಕೆ ಲೈನ್ ಎಳೆಯುವುದಕ್ಕೆ

ಸಾರ್ಟ್-ಔಟ್ ಮಾಡಿ ಬೇಗ ಆ ಕೆಲಸ ಆಗುವ ರೀತಿಯಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ಬಹಳ ಸಂತೋಷ. ವಿವರವಾಗಿ ಉತ್ತರ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ವರ್ಷಕ್ಕೆ ೨೫೦ ರೂಪಾಯಿ ಸಣ್ಣ ಪತ್ರಿಕೆಗಳಿಗೆ ಜಾಹೀರಾತು ಕೊಡುತ್ತಿದ್ದೀರಿ, ಅದನ್ನು ಸ್ವಲ್ಪ ಜಾಸ್ತಿ ಮಾಡುವುದಕ್ಕೆ ಒಂದು ವ್ಯವಸ್ಥೆಯಾಗಬೇಕು. ಕನ್ನಡ ಪತ್ರಿಕೆಗಳ ಬೆಳವಣಿಗೆ ಆಗಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಣ್ಣ ಪತ್ರಿಕೆಗಳಿಗೆ ೨೫೦ ರೂಪಾಯಿ ಇದ್ದುದನ್ನು ಜಾಸ್ತಿ ಮಾಡುತ್ತೇನೆ, ಎಷ್ಟು ಎಂದು ತಮ್ಮ ಬಳಿ ಸಮಾಲೋಚನೆ ಮಾಡಿ ಮಾಡುತ್ತೇನೆ. ಆಮೇಲೆ ಮುಖ್ಯವಾಗಿ ಹೆಗ್ಗಡದೇವನಕೋಟೆ ಮತ್ತಿಂತಹ ಪ್ರದೇಶದಲ್ಲಿ ಜೇನುಕುರುಬರು ಮತ್ತು ಕಾಡು ಕುರುಬ ಜನಾಂಗ ಇದೆ. ಅವರ ಪರಿಸ್ಥಿತಿ ಚಿಂತಾಜನಕ ಆಗಿದೆ. ಅವರ ಮೇಲೆ ನಾನೊಂದು ಕಾದಂಬರಿ 'ಕೊಟ್ಟ' ಎಂದು ಬರೆದಿದ್ದೇನೆ, ಒಂದು ರೀತಿಯಲ್ಲಿ ಕೊರಗ, ಜೇನು ಕುರುಬ ಮತ್ತು ಕಾಡು ಕುರುಬರು ಹೀನಾಯ ಸ್ಥಿತಿಯಲ್ಲಿದ್ದಾರೆ. ಇನ್ನು ಕೂಡ ಅವರನ್ನು ಮೇಲಕ್ಕೆ ಎತ್ತಲು ಅಸಾಧ್ಯವಾಗಿದೆ. ಆದ್ದರಿಂದ ಕೊಡಗರಿಗೆ ಮತ್ತು ಇವರಿಗೆ ನಾವು ಸಮಗ್ರವಾಗಿ ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಗೆ ಸರ್ಕಾರದಲ್ಲಿ ಒಂದು ಪ್ರತ್ಯೇಕ ಯೋಜನೆ ಸಿದ್ಧಮಾಡುತ್ತಿದ್ದೇವೆ. ೧೯೯೪-೯೫ಕ್ಕೆ ಅದನ್ನು ಅನುಷ್ಠಾನ ಮಾಡುತ್ತೇವೆ.

ಛೇರ್ಮನ್.—ಈಗ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾವನೆ ಮಂಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ೩೧ನೇ ಮಾರ್ಚ್ ೧೯೯೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೧ ರಿಂದ ೬೨ರ ವರೆಗೆ ಸಂಬಂಧಿಸಿದ ಮೊಬಲಗು ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ ಸಂಬಂಧಿಸಿದ ಲೇಖಾನುದಾನಕ್ಕೆ ಸೇರಿದ ಬೇಡಿಕೆಗಳ ಮೊಬಲಗುಗಳಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಸೂಚಿಸುತ್ತೇನೆ.

ಛೇರ್ಮನ್.—ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.
ಪ್ರಸ್ತಾವ ಏನೆಂದರೆ :

'ದಿನಾಂಕ ೩೧-೩-೧೯೯೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೧ ರಿಂದ ೬೨ರ ವರೆಗೆ ಸಂಬಂಧಿಸಿದ ಮೊಬಲಗು ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಆಯಾ ಬೇಡಿಕೆಗಳಿಗೆ ಸಂಬಂಧಿಸಿದ ಲೇಖಾನುದಾನಕ್ಕೆ ಸೇರಿದ ಬೇಡಿಕೆಗಳ ಮೊಬಲಗುಗಳಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಸೂಚಿಸುತ್ತದೆ.'

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಧನ ವಿನಿಯೋಗ ಮಸೂದೆ ವಿಧೇಯಕ ೯೪

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ೧೯೯೪ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಲೇಖಾನುದಾನ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

ಛೇರ್ಮನ್.—ಪ್ರಸ್ತಾವ ಏನೆಂದರೆ : ''೧೯೯೪ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಲೇಖಾನುದಾನ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''